(B) 25210

MPS

JJ-50

Read 28/4/2007

ಕರ್ನಾಟಕ ವಿಧಾನಸಭೆಯ ನಡವಳಿಕೆಗಳು
KARNATAKA LEGISLATIVE ASSEMBLY DEBATES

ಅಧಿಕೃತ ವರದಿ
OFFICIAL REPORT

ಹನ್ನೆರಡನೇ ವಿಧಾನಸಭೆಯ ಐದನೇ ಅಧಿವೇಶನ
FIFTH SESSION OF THE TWELFTH LEGISLATIVE ASSEMBLY

ಸಂಪುಟ – ೪ (ಕ್ರಮಾಂಕ – ೩)
Volume - 4 (No. 3)

(೧೩ನೇ ಫೆಬ್ರವರಿ ೨೦೦೭)
(13th February 2007)

ಭಾಗ–೨
PART-II

ಕರ್ನಾಟಕ ವಿಧಾನಸಭೆಯ ಸಚಿವಾಲಯ, ಬೆಂಗಳೂರು
Karnataka Legislative Assembly Secretariat, Bangalore

ಕರ್ನಾಟಕ ವಿಧಾನಸಭೆಯ ನಡವಳಿಕೆಗಳು
KARNATAKA LEGISLATIVE ASSEMBLY DEBATES

ಅಧಿಕೃತ ವರದಿ
OFFICIAL REPORT

ಹನ್ನೆರಡನೇ ವಿಧಾನಸಭೆಯ ಐದನೇ ಅಧಿವೇಶನ
FIFTH SESSION OF THE TWELFTH LEGISLATIVE ASSEMBLY

ಸಂಪುಟ – ೪ (ಕ್ರಮಾಂಕ – ೩)
Volume - 4 (No. 3)

(೧೩ನೇ ಫೆಬ್ರವರಿ ೨೦೦೭)
(13th February 2007)

ಭಾಗ–೨
PART-II

ಕರ್ನಾಟಕ ವಿಧಾನಸಭೆಯ ಸಚಿವಾಲಯ, ಬೆಂಗಳೂರು
Karnataka Legislative Assembly Secretariat, Bangalore

ಕರ್ನಾಟಕ ವಿಧಾನಸಭೆ

ಹನ್ನೆರಡನೇ ವಿಧಾನಸಭೆ
ಐದನೆಯ ಅಧಿವೇಶನ

ಶ್ರೀ ಕೃಷ್ಣ
ಅಧ್ಯಕ್ಷರು

ಶ್ರೀ ಎನ್. ವೈ. ಗೋಪಾಲಕೃಷ್ಣ
ಉಪಾಧ್ಯಕ್ಷರು

ಕರ್ನಾಟಕ ವಿಧಾನಸಭೆ
ವಿಷಯಾನುಕ್ರಮಣಿಕೆ
ಸಂಪುಟ–4 (ಕ್ರಮಾಂಕ–3)
(13ನೇ ಫೆಬ್ರವರಿ 2007)

ಮಂಗಳವಾರ, ದಿನಾಂಕ 13ನೇ ಫೆಬ್ರವರಿ 2007

ಪುಟ ಸಂಖ್ಯೆ

1 ಪ್ರಶ್ನೋತ್ತರ 287–366

(ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು

– ಶ್ರೀ ಗೋಪಾಲಕೃಷ್ಣ ಬೇಳೂರು ಬಿ ಕೆ
– ಶ್ರೀ ಬೋಪಯ್ಯ ಕೆ ಜಿ
– ಶ್ರೀ ಕೃಷ್ಣ ಪಾಲೇಮಾರ್ ಜಿ
– ಶ್ರೀ ಪಾಟೀಲ್ ಡಿ ಆರ್
– ಶ್ರೀ ರವಿ ಸಿ ಟಿ
– ಡಾ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್
– ಶ್ರೀ ಸಿಂಧೂರ ಜಿ ರಾಜಶೇಖರ
– ಶ್ರೀ ಗೋಪಾಲ ಪೂಜಾರಿ ಕೆ
– ಶ್ರೀ ಪಾಟೀಲ್ ಬಿ ಆರ್
– ಶ್ರೀ ಪಾಟೀಲ್ ಎಸ್ ಎಸ್

(ಆ) ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

(ಅನುಬಂಧ–1)

2 ಶೂನ್ಯ ವೇಳೆ 366–591

ವಿಷಯ – ಅ) ಕಾವೇರಿ ನ್ಯಾಯ ಮಂಡಳಿ ತೀರ್ಪಿನ ಬಗ್ಗೆ

– ಶ್ರೀ ಎನ್ ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು)
– ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ
– ಶ್ರೀ ಹೆಚ್ ಡಿ ರೇವಣ್ಣ (ಇಂಧನ, ಲೋಕೋಪಯೋಗಿ ಸಚಿವರು)
– ಶ್ರೀ ಎಂ ಪಿ ಪ್ರಕಾಶ್
(ಗೃಹ, ಕಾನೂನು, ಸಂಸದೀಯ ವ್ಯವಹಾರಗಳ ಸಚಿವರು)
– ಶ್ರೀ ಆರ್ ವಿ ದೇಶಪಾಂಡೆ

– ಶ್ರೀ ವಾಟಾಳ್ ನಾಗರಾಜ್
– ಶ್ರೀ ಸಿದ್ದರಾಮಯ್ಯ
– ಶ್ರೀ ಜೆ ಸಿ ಮಾಧುಸ್ವಾಮಿ
– ಶ್ರೀ ಹೆಚ್.ಡಿ ಕುಮಾರಸ್ವಾಮಿ (ಮುಖ್ಯಮಂತ್ರಿಗಳು)

ಆ) ವಿಧಾನ ಪರಿಷತ್ತಿನ ಸಭಾಪತಿಯವರ ಚುನಾವಣೆ ಬಗ್ಗೆ

– ಶ್ರೀ ಎನ್ ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು)
– ಶ್ರೀ ಜಿ ವಿ ಶ್ರೀರಾಮರೆಡ್ಡಿ
– ಶ್ರೀ ಡಿ ಕೆ ಶಿವಕುಮಾರ್
– ಶ್ರೀ ಕೆ ಆರ್ ರಮೇಶ್‌ಕುಮಾರ್
– ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ
– ಶ್ರೀ ಆರ್ ವಿ ದೇಶಪಾಂಡೆ
– ಶ್ರೀ ಬಿ ಆರ್ ಪಾಟೀಲ್
– ಶ್ರೀ ಎಂ ಪಿ ಪ್ರಕಾಶ್
(ಗೃಹ, ಕಾನೂನು, ಸಂಸದೀಯ ವ್ಯವಹಾರಗಳ ಸಚಿವರು)
– ಶ್ರೀ ಸಿದ್ದರಾಮಯ್ಯ
– ಶ್ರೀ ಪಿ ಜಿ ಆರ್ ಸಿಂಧ್ಯಾ

ಇ) ವಿಧಾನ ಪರಿಷತ್ತಿನ ಸಭಾಪತಿಯವರ ಚುನಾವಣೆ ಬಗ್ಗೆ
(ಮುಂದುವರೆದ ಚರ್ಚೆ)

– ಶ್ರೀ ಎಂ ಪಿ ಪ್ರಕಾಶ್
(ಗೃಹ, ಕಾನೂನು, ಸಂಸದೀಯ ವ್ಯವಹಾರಗಳ ಸಚಿವರು)
– ಶ್ರೀ ಕೆ ಆರ್ ರಮೇಶ್‌ಕುಮಾರ್
– ಶ್ರೀ ಜಿ ವಿ ಶ್ರೀರಾಮರೆಡ್ಡಿ
– ಶ್ರೀ ಕೆ ಜಯಪ್ರಕಾಶ್ ಹೆಗ್ಡೆ
– ಶ್ರೀ ಡಿ ಆರ್ ಪಾಟೀಲ್
– ಶ್ರೀ ಎನ್ ಧರ್ಮಸಿಂಗ್
(ವಿರೋಧ ಪಕ್ಷದ ನಾಯಕರು)
– ಶ್ರೀ ಆರಗ ಜ್ಞಾನೇಂದ್ರ
– ಶ್ರೀ ಡಿ ಹೆಚ್ ಶಂಕರಮೂರ್ತಿ
(ಉನ್ನತ ಶಿಕ್ಷಣ ಸಚಿವರು)

ಕರ್ನಾಟಕ ವಿಧಾನಸಭೆ

ಮಂಗಳವಾರ 13ನೇ ಫೆಬ್ರವರಿ 2007ರಂದು

ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ 11 ಗಂಟೆ 8 ನಿಮಿಷಕ್ಕೆ ಸಮಾವೇಶಗೊಂಡಿತು

ಅಧ್ಯಕ್ಷರು (ಶ್ರೀ ಕೃಷ್ಣರವರು) ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು

(ಸದನವು ಬೆಳಗ್ಗೆ 11 08 ಗಂಟೆಗೆ ಸಮಾವೇಶಗೊಂಡಿತು)

(ಸಭಾಧ್ಯಕ್ಷರು ಪೀಠವನ್ನು ಅಲಂಕರಿಸಿದ್ದರು)

1 ಪ್ರಶ್ನೋತ್ತರ

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು

ಚುಕ್ಕೆ ಗುರುತಿನ ಪ್ರಶ್ನೆ ಸಂ 151 (1265)

(ಸದಸ್ಯರು ಹಾಜರಿರಲಿಲ್ಲ)

ಚುಕ್ಕೆ ಗುರುತಿನ ಪ್ರಶ್ನೆ ಸಂ 152 (156)

(ಸದಸ್ಯರು ಹಾಜರಿರಲಿಲ್ಲ)

ಹೆಚ್ಚುವರಿಯಾಗಿ ಲಾಂಚ್‌ಗಳನ್ನು ಒದಗಿಸುವುದು

153 (685) ಶ್ರೀ ಗೋಪಾಲಕೃಷ್ಣ ಬೇಳೂರು ಬಿ ಕೆ (ಸಾಗರ) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿವಮೊಗ್ಗ ಜಿಲ್ಲೆ ಸಾಗರ ತಾಲ್ಲೂಕಿನ ಶರಾವತಿ ಹಿನ್ನೀರಿನ ಕಳಸವಳ್ಳಿ ಅಂಬಾರಗೋಡ್ಲು ನಡುವೆ ಸಾವಿರಾರು ನಾಗರೀಕರು ಪ್ರಯಾಣಿಸುತ್ತಿರುವವರ ಸಂಖ್ಯೆ ಹೆಚ್ಚಾಗಿದ್ದು ಹೆಚ್ಚುವರಿಯಾಗಿ ಲಾಂಚ್ ಒದಗಿಸುವುದು ಯಾವ ಹಂತದಲ್ಲಿದೆ,

ಆ) ಲಾಂಚನ್ನು ಸಾರ್ವಜನಿಕರಿಗೆ ಬಿಡುಗಡೆಗೊಳಿಸಲು ಎಷ್ಟು ಕಾಲಾವಧಿ ಬೇಕಾಗುವುದು,

ಇ) ಕೂಡಲೇ ಲಾಂಚನ್ನು ಒದಗಿಸಲು ಸರ್ಕಾರ ಕೈಗೊಂಡ ಕ್ರಮವೇನು (ವಿವರ ನೀಡುವುದು)?

ಶ್ರೀ ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಶಿವಮೊಗ್ಗ ಜಿಲ್ಲೆ ಸಾಗರ ತಾಲ್ಲೂಕಿನ ಶರಾವತಿ ಹಿನ್ನೀರಿನಲ್ಲಿ ಅಂಬಾರಗೋಡ್ಲು-ಕಳಸವಳ್ಳಿ ನಡುವೆ ಹೆಚ್ಚುತ್ತಿರುವ ಪ್ರಯಾಣಿಕರ ಒತ್ತಡವನ್ನು ಕಡಿಮೆಗೊಳಿಸುವ ಉದ್ದೇಶದಿಂದ ಒಂದು ಹೆಚ್ಚುವರಿ ಲಾಂಚನ್ನು ಒದಗಿಸಲು ಪ್ರಸ್ತಾವನೆಗೆ ಸರ್ಕಾರವು ಈಗಾಗಲೆ ತಾತ್ವಿಕ ಒಪ್ಪಿಗೆ ನೀಡಿರುತ್ತದೆ

ಲಾಂಚ್ ನಿರ್ಮಿಸುವ ಬಗ್ಗೆ ಟೆಂಡರ್ ಪ್ರಕ್ರಿಯೆಯನ್ನು ಮುಕ್ತಾಯಗೊಳಿಸಲಾಗಿದ್ದು ಪರಿಶೀಲನೆ ಹಂತದಲ್ಲಿರುತ್ತದೆ

ಆ) ಲಾಂಚ್ ನಿರ್ಮಾಣಕ್ಕೆ ಕಾರ್ಯಾದೇಶ ನೀಡಿದ ನಂತರ ಲಾಂಚ್ ನಿರ್ಮಿಸಿ ಒದಗಿಸಲು ಕನಿಷ್ಠ 8 ತಿಂಗಳ ಕಾಲಾವಧಿ ಬೇಕಾಗಿರುತ್ತದೆ

ಇ) ಲಾಂಚ್ ನಿರ್ಮಿಸಲು ಟೆಂಡರ್ ಪ್ರಕ್ರಿಯೆ ಮುಗಿದಿರುವುದರಿಂದ ಅತಿ ಶೀಘ್ರದಲ್ಲಿ ಕಾರ್ಯದೇಶ ನೀಡಿ ಲಾಂಚ್ ನಿರ್ಮಾಣಕ್ಕೆ ಕ್ರಮ ಕೈಗೊಳ್ಳಲಾಗುವುದು

ಶ್ರೀ ಬಿಕೆ ಗೋಪಾಲಕೃಷ್ಣ ಬೇಳೂರು ಕಳೆದ ವರ್ಷ ಈ ಲಾಂಚ್ sanction ಆಗಿತ್ತು ಆದರೆ ಲಾಂಚನ್ನು ನಿರ್ಮಿಸುವುದು ತಡವಾಗಿದೆ ಮಂತ್ರಿಗಳು ಒದಗಿಸಿದೆ ಎಂದು ಹೇಳಿದ್ದಾರೆ ಆದರೆ, ಅಲ್ಲಿ ಜನಸಂಖ್ಯೆ ಓಡಾಟ ಬಹಳವಿರುವುದರಿಂದ ಆದಷ್ಟು ಬೇಗ ನಮ್ಮ ಲಾಂಚ್ ಅನ್ನು ಒದಗಿಸಿಕೊಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತಿದ್ದೇನೆ

ಶ್ರೀ ಹೆಚ್ ಡಿ ರೇವಣ್ಣ Tender ಎಲ್ಲ finalize ಆಗಿದೆ ಇನ್ನೊಂದು ವಾರದಲ್ಲಿ ಆ tender finalize ಆದ ತಕ್ಷಣ ಹಣ ಕೊಟ್ಟು 8 ತಿಂಗಳೊಳಗೆ ಆ ಕೆಲಸ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇನೆ

ಅಕ್ರಮ ಮರಳು ಸಾಗಟ

154 (1221) ಶ್ರೀ ಬೋಪಯ್ಯ ಕೆ ಜಿ (ಮಡಿಕೇರಿ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೇರಳಕ್ಕೆ ಅಕ್ರಮವಾಗಿ ಮರಳು ಸಾಗಾಟವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಹಾಗಿದ್ದಲ್ಲಿ ಅಕ್ರಮ ಮರಳು ಸಾಗಾಟ ನಿಯಂತ್ರಣಕ್ಕೆ ಸರ್ಕಾರ ಕೈಗೊಂಡ ಕ್ರಮವೇನು,

ಇ) ನಿಯಂತ್ರಣ ಮಾಡಲು ಗ್ರಾಮ ಪಂಚಾಯ್ತಿಗಳಿಗೆ ಅಧಿಕಾರ ಕೊಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ವಿವರ ಒದಗಿಸುವುದು?

ಶ್ರೀ ಹೆಚ್ ಡಿ ಕುಮಾರಸ್ವಾಮಿ (ಮುಖ್ಯಮಂತ್ರಿಗಳು)

ಅ) ಕೇರಳ ರಾಜ್ಯಕ್ಕೆ ಮರಳು ಸಾಗಾಣಿಕೆ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ

ಆ) ಅಕ್ರಮ ಮರಳು ಗಣಿಗಾರಿಕೆಯನ್ನು / ಸಾಗಾಣಿಕೆಯನ್ನು ನಿಯಂತ್ರಿಸಲು ಸರ್ಕಾರವು ಜಿಲ್ಲಾಮಟ್ಟದಲ್ಲಿ ಟಾಸ್ಕ್‌ಫೋರ್ಸ್ ಸಮಿತಿ ಮತ್ತು ಜಿಲ್ಲಾ ಮರಳು ಉಸ್ತುವಾರಿ ಸಮಿತಿಯನ್ನು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ರಚಿಸಿದೆ ಸದರಿ ಸಮಿತಿಗಳು ಅಕ್ರಮ ಮರಳು ಗಣಿಗಾರಿಕೆ / ಸಾಗಾಣಿಕೆಯನ್ನು ತಡೆಗಟ್ಟಲು ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳುತ್ತಿವೆ

ಜಿಲ್ಲೆಯ ವಿವಿಧ ನದಿ ಪಾತ್ರಗಳಲ್ಲಿ ಲಭ್ಯವಿರುವ ಮರಳು ನಿಕ್ಷೇಪ ಪ್ರದೇಶಗಳನ್ನು ಗುರುತಿಸಿ ಉಪ ವಿಭಾಗಾಧಿಕಾರಿಗಳ ಅಧ್ಯಕ್ಷತೆಯಲ್ಲಿ ರಚಿಸಿರುವ ಹರಾಜು ಸಮಿತಿಯ ಸಮ್ಮುಖದಲ್ಲಿ ಬಹಿರಂಗ ಹರಾಜು ಮಾಡುವ ಮೂಲಕ ಮರಳುಗಣಿಗಾರಿಕೆಗೆ ಒಂದು ವರ್ಷದ ಅವಧಿಗೆ ಗುತ್ತಿಗೆ ನೀಡಲಾಗುತ್ತಿದೆ

ಹರಾಜಿನ ಮೂಲಕ ಮರಳು ಗುತ್ತಿಗೆಗಳನ್ನು ಪಡೆದಂತಹ ಗುತ್ತಿಗೆದಾರರು ಮರಳನ್ನು ಕೇರಳ ರಾಜ್ಯಕ್ಕೆ ಸಾಗಾಣಿಕೆ ಮಾಡಬಾರದೆಂದು ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಾವಳಿ 1994ರ ನಿಯಮ 31(2)ರನ್ವಯ ಷರತ್ತನ್ನು ವಿಧಿಸಲಾಗಿದೆ

ಇ) ಇಲ್ಲ

ಶ್ರೀ ಕೆ ಜಿ ಬೋಪಯ್ಯ ಜಿಲ್ಲೆಯಲ್ಲಿ, ಈ ಅಕ್ರಮ ಮರಳು ದಂಧೆ ಯಾವ ರೀತಿ ನಡೆಯುತ್ತಿದೆ ಎಂದರೆ, ಇಡೀ ಕಾವೇರಿ ಹೊಳೆಯಲ್ಲಿ ಎಲ್ಲೂ ಖಾಲಿ ಇಲ್ಲದೇ, ನಿರಂತರವಾಗಿ ಮರಳು ಸಾಗಾಣಿಕೆಯಾಗುತ್ತಿದೆ ಇದನ್ನು ನಿಲ್ಲಿಸಲಿಕ್ಕೆ ಕಟ್ಟುನಿಟ್ಟಿನ ಕ್ರಮ ಏನಾದರೂ ತೆಗೆದುಕೊಳ್ಳದೇ ಹೋದರೆ, ಬಹುಶ ಬೇಸಿಗೆಯಲ್ಲಿ ಕಾವೇರಿ ನದಿ ಹರಿಯಲಿಕ್ಕೆ ಆಗುವುದಿಲ್ಲ ಆ ಪರಿಸ್ಥಿತಿಗೆ ತಲುಪುವಂಥದ್ದು ಇದೆ ಗ್ರಾಮಪಂಚಾಯಿತಿಗೆ ಇದರ ಮೇಲುಸ್ತುವಾರಿಯನ್ನು ಕೊಟ್ಟರೆ ಹೇಗೆ ಎಂದು ನಾನು ಮತ್ತೊಂದು ಪ್ರಶ್ನೆ ಕೇಳಿದ್ದೆ ಆದರೆ ಆ ತರಹದ ಪ್ರಸ್ತಾವನೆ ಸರ್ಕಾರದ ಮುಂದೆ ಇಲ್ಲವೆಂದು ಉತ್ತರ ಕೊಟ್ಟಿದ್ದಾರೆ ನಿಜವಾಗಿ ಮರಳನ್ನು ಏನಾದರೂ ಸಾಗಾಣಿಕೆ

ಮಾಡುವುದನ್ನು ನಿಲ್ಲಿಸಬೇಕಾದರೆ, ಗ್ರಾಮ ಪಂಚಾಯಿತಿಯನ್ನು involve ಮಾಡಿಕೊಳ್ಳುವುದು ಒಳ್ಳೆಯದು ಸಮಿತಿ ಎಲ್ಲವೂ ಇದೆ ಆದರೆ ಒಂದೇ ಒಂದು ಪ್ರಕರಣದಲ್ಲಿ ಇಲ್ಲಿಯವರೆಗೆ ಕೇಸ್ ಹಾಕಿದ್ದಂತೂ ಇಲ್ಲ ಇಂಥಹ ಎಷ್ಟು ಪ್ರಕರಣಗಳಲ್ಲಿ ದೂರು ದಾಖಾಲಾಗಿದೆ? ಅದರ ಬಗ್ಗೆ ಮಾಹಿತಿ ಏನಾದರೂ ಇದ್ದರೆ ನಮಗೆ ಕೊಡಬೇಕೆಂದು ನಾನು ವಿನಂತಿಸಿಕೊಳ್ಳುತ್ತೇನೆ

ಶ್ರೀ ಹೆಚ್ ಡಿ ಕುಮಾರಸ್ವಾಮಿ ಗ್ರಾಮ ಪಂಚಾಯಿತಿಗಳಿಗೆ ಮರಳು ಸಾಗಾಣಿಕೆಯ ವಿಚಾರದಲ್ಲಿ ಅಧಿಕಾರವನ್ನು ಕೊಡಬೇಕೆಂದು ಮಾನ್ಯ ಸದಸ್ಯರು ಸರ್ಕಾರದ ಗಮನಕ್ಕೆ ತಂದಿದ್ದಾರೆ ಹಿಂದೆ 1999 ರಲ್ಲಿ ಗ್ರಾಮ ಪಂಚಾಯಿತಿಗಳಿಗೆ ಈ ಒಂದು ಅಧಿಕಾರವನ್ನು ಕೊಟ್ಟಂಥ ಸಂದರ್ಭದಲ್ಲಿ ಅದರಿಂದ ಕೆಲವು ಗ್ರಾಮಪಂಚಾಯಿತಿಗಳಿಗೆ ಅನುಕೂಲವಾಗುವುದಿಲ್ಲ ಎನ್ನುವ ದೃಷ್ಟಿಯಿಂದ 2000 ನೇ ಇಸ್ವಿಯಲ್ಲಿ ಹಿಂದೆ 1999 ರಲ್ಲಿ ಏನು ಒಂದು ಕಾನೂನು ತಂದಿದ್ದರು ಅದನ್ನು ರದ್ದು ಪಡಿಸಿ, ಮತ್ತೆ ಒಂದು task force ಮಾಡುವುದರ ಮುಖಾಂತರ ಮತ್ತೆ ಒಂದು ಬದಲಾವಣೆಯನ್ನು ತಂದಿದ್ದಾರೆ ಈ ಬದಲಾವಣೆಯ ಮೂಲಕ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ task force ಸಮಿತಿ ಏನು ತಂದಿದ್ದಾರೆ, ಈ ವಿಷಯದಲ್ಲಿ ಏನು ಗೊಂದಲಗಳಿವೆ ಈಗಾಗಲೇ ಇದರ ಬಗ್ಗೆ ಕರಿಣವಾದ ಕ್ರಮಗಳನ್ನು ತೆಗೆದುಕೊಂಡಿದ್ದಾರೆಂದು ಹೇಳಲಿಕ್ಕೆ ಬಯಸುತ್ತೇನೆ

ಶ್ರೀ ಜಿ ವಿ ಶ್ರೀರಾಮರೆಡ್ಡಿ ನನ್ನದೊಂದು ಉಪ ಪ್ರಶ್ನೆ ಇದೆ ನಮ್ಮ ಜಿಲ್ಲೆಯಲ್ಲಿ ಮರಳು ಸಾಗಾಣಿಕೆ ದಂಧೆ ವಿಪರೀತ ನಡೆದು, ಮಾನ್ಯ ಧರ್ಮಸಿಂಗ್‌ರವರು ಮುಖ್ಯಮಂತ್ರಿಗಳಾಗಿದ್ದಂಥ ಸಂದರ್ಭದಲ್ಲಿ ನಮ್ಮ ಜಿಲ್ಲೆಯ ಎಲ್ಲಾ ಶಾಸಕರುಗಳನ್ನು ಕರೆದು ಆ ಜಿಲ್ಲೆಯಿಂದ ಮರಳು ಹೊರಗಡೆಗೆ ಹೋಗಬಾರದು ಎನ್ನತಕ್ಕಂಥ ತೀರ್ಮಾನವನ್ನು ಮಾಡಿ, ಸರ್ಕಾರದಿಂದ ಎಲ್ಲಾ ಅಧಿಕಾರಿಗಳಿಗೂ ಸುತ್ತೋಲೆಯನ್ನು ಹೊರಡಿಸಲಾಗಿತ್ತು ಅದರ ಪ್ರಕಾರ ನಮ್ಮ ಜಿಲ್ಲೆಯಿಂದ ಎಂಟು ತಿಂಗಳು ಮರಳು ಹೋಗುತ್ತಿರಲಿಲ್ಲ ಮಾನ್ಯ ಕುಮಾರಸ್ವಾಮಿಯವರು ಮುಖ್ಯಮಂತ್ರಿಗಳಾದ ಮೇಲೆ ನಮ್ಮ ಜಿಲ್ಲೆಯ ಎಲ್ಲಾ ಶಾಸಕರು, ನಮ್ಮ ಜಿಲ್ಲೆಯಿಂದ ಹೊರಗಡೆ ಮರಳು ಹೋಗಬಾರದು ಎಂದು ಹಿಂದೆ ತೀರ್ಮಾನವಾಗಿದೆ, ಅದು ಸಡಿಲವಾಗತಕ್ಕಂಥ ಪರಿಸ್ಥಿತಿ ಇದೆ, ಅದರ ಬಗ್ಗೆ ಗಮನ ಕೊಡಬೇಕೆಂದು ಅವರಿಗೆ ಹೇಳಿದ್ದೆವು ನಿನ್ನೆ ನನ್ನ ಕ್ಷೇತ್ರದಲ್ಲಿ

ಒಂದು ಗಲಾಟೆಯಾಗಿದೆ ಊರಿನ ಜನರೆಲ್ಲರೂ ಮರಳು ಎತ್ತಬಾರದು ಎನ್ನುವುದು ಅವರ ವಾದ ಮರಳನ್ನು ಎತ್ತಿ ಕಳ್ಳತನದಿಂದ ಅವರು ಒಂದು ವಾರದಿಂದ ಸಾಗಿಸುತ್ತಿದ್ದಾರೆ ಪೊಲೀಸ್‌ನವರು, ಜಿಯಾಲಜಿ ಡಿಪಾರ್ಟ್‌ಮೆಂಟಿನವರು, ಮರಳು ಕಂಟ್ರಾಕ್ಟರವರ ಜೊತೆಯಲ್ಲಿ ಶಾಮೀಲಾಗಿ ಮರಳು ಎತ್ತಲು ಹೋಗಿ ದೊಡ್ಡ ಗಲಾಟೆಯಾಗಿ ಹಳ್ಳಿಯವರೆಲ್ಲರನ್ನು ಸೇರಿಸಿ 107 ಕೇಸ್ ಕೂಡ ಹಾಕಿದ್ದಾರೆ ಇದರ ಜೊತೆಗೆ ನಮ್ಮ ಕೋಲಾರ ಜಿಲ್ಲೆಯಲ್ಲಿ ಈ ಮರಳು ಸಾಗಾಣಿಕೆಯಿಂದ ಮುಖ್ಯರಸ್ತೆಗಳೆಲ್ಲವೂ ಹಾಳಾಗಿವೆ ನಮ್ಮ ಜಿಲ್ಲೆಯ ಜನ ಗೌರಿಬಿದನೂರು, ಚಿಂತಾಮಣಿ, ಬಾಗೇಪಲ್ಲಿಯಿಂದ ಮರಳು ಸಾಗಿಸುತ್ತಿದ್ದಾರೆ ನೀರಿನ ಅಂತರ್ಜಲದ ಮಟ್ಟ ಕುಸಿದು ಹೋಗಿರುವುದರಿಂದ ಇದರ ಪರಿಣಾಮವಾಗಿ ಕುಡಿಯುವುದಕ್ಕೆ ನೀರು ಇಲ್ಲದಿರುವ ಪರಿಸ್ಥಿತಿ ನಿರ್ಮಾಣವಾಗಿದೆ ದಯವಿಟ್ಟು ಮರಳನ್ನು ನಮ್ಮ ಜಿಲ್ಲೆಯಿಂದ ಹೊರಗಡೆ ಹೋಗಬಾರದು ಎಂದು ಹಿಂದಿನ ಮುಖ್ಯಮಂತ್ರಿಯವರು ಹಾಗೂ ಈಗಿನ ಮುಖ್ಯಮಂತ್ರಿಯವರ ಹತ್ತಿರ ಸಹ ನಾವು ಎಲ್ಲರೂ ಕೇಳಿದೆವು ಆದರೂ ಕೂಡ ಕೆಲವು ಅಧಿಕಾರಿಗಳು, ಪ್ರತ್ಯೇಕವಾಗಿ ಮೈನ್ಸ್ ಅಂಡ್ ಜಿಯಾಲಜಿ ಯವರು ಮತ್ತು ಪೊಲೀಸ್‌ನವರು ಶಾಮೀಲಾಗಿ ಈ ಮರಳನ್ನು ಸಾಗಿಸುತ್ತಿದ್ದಾರೆ ಆದ್ದರಿಂದ ಅದನ್ನು ತಡೆಹಿಡಿಯಬೇಕು, ತಕ್ಷಣ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು ಇದಕ್ಕೆ ಏನು ಕ್ರಮ ತೆಗೆದುಕೊಳ್ಳುತ್ತೀರೆಂದು ನಾನು ಮಾನ್ಯ ಮುಖ್ಯಮಂತ್ರಿಗಳನ್ನು ಕೇಳುತ್ತೇನೆ

ಶ್ರೀ ಕೆ ಜಯಪ್ರಕಾಶ್ ಹೆಗ್ಡೆ ನಮ್ಮ ಜಿಲ್ಲೆಯಲ್ಲಂತೂ ಆ ಕಛೇರಿ ಇಲ್ಲ ನಮ್ಮದು ಹೊಸ ಜಿಲ್ಲೆಯಾಗಿರುವುದರಿಂದ ಮೈನ್ಸ್ ಅಂಡ್ ಜಿಯಾಲಜಿ ಇಲಾಖೆಯ ಆಫೀಸ್ ಇನ್ನು ಓಪನ್ ಆಗಿಲ್ಲ ಅಲ್ಲಿ ಅಧಿಕಾರಿಗಳು ಮತ್ತು ಮರಳು ತೆಗೆಯುವವರು ಕುಳಿತುಕೊಂಡು ಹೊಂದಾಣಿಕೆ ಮಾಡಿಕೊಳ್ಳುತ್ತಾರೆ ಸರ್ಕಾರಕ್ಕೆ ಇದರಿಂದ ರಾಯಲ್ಟಿ ಬರುವುದಿಲ್ಲ ತಾವು ತಕ್ಷಣದಲ್ಲಿ ಆ ಕಛೇರಿಯನ್ನು ಮಾಡಿ ಆ ರಾಯಲ್ಟಿ ಬರುವ ಹಾಗೆ ಆದರೂ ಮಾಡಬೇಕಾಗುತ್ತದೆ ಏಕೆಂದರೆ ಅದರಿಂದಾರೂ ರಸ್ತೆಗಳ ದುರಸ್ತಿಯಾಗ ಬೇಕಾಗುತ್ತದೆ ತಾವು ಮೊನ್ನೆ ಹೇಳಿಕೆಯನ್ನು ನೀಡಿದಿರಿ 84 ಕೋಟಿ ರೂಪಾಯಿ ಮೈನ್ಸ್ ಸಾಗಾಣಿಕೆಯಲ್ಲಿ ರಾಯಲ್ಟಿ ಸಿಕ್ಕಿದೆ 1700 ಕೋಟಿ ರೂಪಾಯಿ ಹಾನಿಯಾಗಿದೆ ಎಂದು ಕೊಟ್ಟಿದ್ದಿರಿ ಇದು ಎಂಥ ಪರಿಸ್ಥಿತಿ? ಹಾಗಾದರೆ

ಮೈನ್ಸ್ ಎಕ್ಸ್‌ಪೋರ್ಟ್ ಏಕೆ ಮಾಡಬೇಕಾಗಿತ್ತು? ಮರಳನ್ನು ಏಕೆ ತೆಗೆಯಲಿಕ್ಕೆ ಬಿಡಬೇಕಾಗಿತ್ತು? ಇದಕ್ಕೆ ತಾವು ಉತ್ತರವನ್ನು ಹೇಳಬೇಕು

ಶ್ರೀ ಕೆ ಜಿ ಬೋಪಯ್ಯ . ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ task force ಕಮಿಟಿ ಏನು ಇದೆ ಅದು ಸಮರ್ಪಕವಾಗಿ ಕಾರ್ಯ ನಿರ್ವಹಿಸುತ್ತಿಲ್ಲ ಏನು ಮಾಡುತ್ತಿದ್ದಾರೆಂದರೆ, ಸ್ವಂತ ಉಪಯೋಗಕ್ಕೆ ಮರಳು ತೆಗೆದುಕೊಂಡು ಹೋದರೆ, ಅದನ್ನು ಸೀಜ್ ಮಾಡಿ ಕೇಸ್ ಹಾಕಿ ಅಲ್ಲಾ ಮಾಡುತ್ತಾರೆ ಆದರೆ ನಿರಂತರವಾಗಿ ಕೇರಳಕ್ಕೆ ಸಾಗಿಸುವಂಧದ್ದನ್ನು ತಡೆಗಟ್ಟುವಲ್ಲಿ ನಾವು ವಿಫಲತೆಯನ್ನು ಕಾಣುತ್ತಿದ್ದೇವೆ ನಾನು ಮತ್ತೊಮ್ಮೆ ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿಯನ್ನು ಮಾಡುತ್ತೇನೆ ಇದನ್ನು ಗ್ರಾಮಪಂಚಾಯಿತಿಗೆ ಕೊಟ್ಟರೆ, ಸ್ಥಳೀಯವಾಗಿ ಅದನ್ನು ನಿಯಂತ್ರಿಸಬಹುದು ಎನ್ನುವುದು ನನ್ನ ಸಲಹೆ ಮಾನ್ಯ ಮುಖ್ಯಮಂತ್ರಿಗಳು ಇದನ್ನು ಗಮನದಲ್ಲಿರಿಸಿಕೊಳ್ಳಬೇಕೆಂದು ವಿನಂತಿ ಮಾಡುತ್ತೇನೆ

ಶ್ರೀ ಹೆಚ್ ಡಿ ಕುಮಾರಸ್ವಾಮಿ ಮರಳು ಸಾಗಾಣಿಕೆಯ ವಿಷಯದಲ್ಲಿ ಸದಸ್ಯರು ಅನೇಕ ಸಲಹೆಗಳನ್ನು ಸರ್ಕಾರದ ಗಮನಕ್ಕೆ ತಂದಿದ್ದಾರೆ ಹಿಂದೆ ಇದರ ಬಗ್ಗೆ ಈಗಾಗಲೇ ಗ್ರಾಮಪಂಚಾಯಿತಿಗೆ ಅಧಿಕಾರ ಕೊಟ್ಟು ಮತ್ತೆ ಅದನ್ನು ವಾಪಸ್ ಪಡೆದಂಧ ಘಟನೆ ಇದೆ ಇದರ ಬಗ್ಗೆ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಮಾನ್ಯ ಸದಸ್ಯರೇನು ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ ಈ ವಿಷಯದಲ್ಲಿ ಸಮರ್ಪಕವಾಗಿ ಕಾರ್ಯವನ್ನು ನಿರ್ವಹಿಸುವುದಕ್ಕೆ ಕ್ರಮವನ್ನು ತೆಗೆದುಕೊಳ್ಳಲು ಪರಿಶೀಲಿಸುತ್ತದೆ

ಶಿರಾಡಿ ಘಾಟ್ ರಸ್ತೆ

156 *(737) ಶ್ರೀ ಕೃಷ್ಣ ಪಾಲೇಮಾರ್ ಜೆ (ಸುರತ್ಕಲ್) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಗಳೂರು-ಬೆಂಗಳೂರು ಹೆದ್ದಾರಿಯಲ್ಲಿ ಶಿರಾಡಿ , ಘಾಟ್ ಪ್ರದೇಶದಲ್ಲಿ ಪ್ರತಿ ದಿನವೂ ಉಂಟಾಗುತ್ತಿರುವ ಹೆದ್ದಾರಿ ತಡೆಯಿಂದಾಗಿ ಪ್ರಯಾಣಿಕರಿಗೆ ಹಾಗೂ ಇತರ ಸಂಚಾರ ವ್ಯವಸ್ಥೆಗೆ ಆಗುತ್ತಿರುವ ಗಂಭೀರ ಸಮಸ್ಯೆಗಳನ್ನು ತಪ್ಪಿಸುವ ನಿಟ್ಟಿನಲ್ಲಿ ರಸ್ತೆ ಅಭಿವೃದ್ಧಿಪಡಿಸಲು ಸರ್ಕಾರ ಕೈಗೊಂಡ ಕ್ರಮಗಳೇನು,

ಆ) ಘಾಟ್ ಪ್ರದೇಶದ ತಿರುವಿನಲ್ಲಿ ಪದೇ ಪದೇ ಟ್ಯಾಂಕರ್‌ಗಳು, ಭಾರೀ ವಾಹನಗಳು ಉರುಳುತ್ತಿರುವ ಮೂಲಕ ಹೆದ್ದಾರಿ ಸಂಚಾರಕ್ಕೆ ತಡೆ ಉಂಟಾಗುವುದರಿಂದ ವಿಶೇಷತ ರಾತ್ರಿ ವೇಳೆಯಲ್ಲಿ ಪ್ರಯಾಣಿಕರು ಅನುಭವಿಸುವ ಸಂಕಷ್ಟಗಳ ನಿವಾರಣೆಗಾಗಿ ಸರ್ಕಾರದ ತ್ವರಿತ ಕ್ರಮಗಳೇನು,

ಇ) ಈ ಹೆದ್ದಾರಿ ನವೀಕರಣದ ಸಮಗ್ರ ಕಾಮಗಾರಿಯ ರೂಪುರೇಷೆಗಳನ್ನು ಸರ್ಕಾರ ಕ್ರಿಯಾ ಯೋಜನೆಯನ್ನು ರೂಪಿಸಿದೆಯೇ,

ಈ) ಯೋಜನೆಯ ಕಾಮಗಾರಿಯು ಸಮಯ ನಿರ್ಬಂಧನೆಯನ್ನು ಹೊಂದಿ ಸಕಾಲದಲ್ಲಿ ಪೂರ್ಣಗೊಳಿಸಲು ಸರ್ಕಾರದ ಕ್ರಮಗಳೇನು?

ಶ್ರೀ ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ರಾಷ್ಟ್ರೀಯ ಹೆದ್ದಾರಿ–48ರ ಬೆಂಗಳೂರು–ಮಂಗಳೂರು ರಸ್ತೆಯ ಕಿಮೀ 227 00 ರಿಂದ 264 00 ರವರೆಗೆ ರಸ್ತೆಯ ಶಿರಾಡಿ ಘಾಟ್ ಪ್ರದೇಶದಲ್ಲಿ ಹಾದು ಹೋಗಿರುತ್ತದೆ ಈ ಹೆದ್ದಾರಿಯಲ್ಲಿ ಉಂಟಾದ ಗುಂಡಿಗಳನ್ನು ಮುಚ್ಚಲು ವಾರ್ಷಿಕ ನಿರ್ವಹಣೆ ಹಾಗೂ ಪ್ರವಾಹ ಹಾನಿ ದುರಸ್ತಿಯಡಿಯಲ್ಲಿ ಕ್ರಮಕೈಗೊಳ್ಳಲಾಗಿದೆ ಹಾಗೂ ಅಭಿವೃದ್ಧಿಗೆ ಕೆಳಕಂಡಂತೆ ಅಂದಾಜು ಪಟ್ಟಿಗಳು ಕೇಂದ್ರ ಸರ್ಕಾರದಿಂದ ಮಂಜೂರಾಗಿರುತ್ತದೆ

ಕ್ರ. ಸಂ	ಕಾಮಗಾರಿಯ ಹೆಸರು	ಅಂದಾಜು ಮೊತ್ತ (ರೂ ಲಕ್ಷಗಳಲ್ಲಿ)	ಕೆಲಸದ ಈಗಿನ ಹಂತ
1	ರಾಹೆ–48ರ ಕಿಮೀ 226 00 ರಿಂದ 237 00 ರವರೆಗೆ ಶಿರಾಡಿ ಘಾಟ್ ರಸ್ತೆ ಅಭಿವೃದ್ಧಿ (ಜಾಬ್ ಸಂ 048–ಕೆಎನ್‌ಟಿ–2006–447)	693 64	ಟೆಂಡರ್ ಪ್ರಕ್ರಿಯೆಯು ಜಾರಿಯಲ್ಲಿದೆ
2	ರಾಹೆ–48ರ ಕಿಮೀ 237 00 ರಿಂದ 247 00 ರವರೆಗೆ (ಶಿರಾಡಿ ಘಾಟ್‌ನಲ್ಲಿ) ತಿರುವುಗಳಿಗೆ ಕಾಂಕ್ರೀಟ್ ಪೇವ್‌ಮೆಂಟ್ ಒದಗಿಸುವುದು	842 92	ಟೆಂಡರ್ ಪ್ರಕ್ರಿಯೆಯು ಜಾರಿಯಲ್ಲಿದೆ

	(ಜಾಬ್ ಸಂ 048–ಕೆಎನ್‌ಟಿ–2006–483)		
3	ರಾ ಹೆ 48ರ ಕಿಮೀ 237 00 ರಿಂದ 264 00 ರವರೆಗೆ (ಶಿರಾಡಿ ಘಾಟ್ ರಸ್ತೆ) ರಸ್ತೆ ಅಭಿವೃದ್ಧಿ (ಡಾಂಬರೀಕರಣ) (ಜಾಬ್ ಸಂ 048–ಕೆಎನ್‌ಟಿ–2006–485)	1424 18	ಟೆಂಡರ್ ಪ್ರಕ್ರಿಯೆಯು ಜಾರಿಯಲ್ಲಿದೆ

ಆ) ಶಿರಾಡಿ ಘಾಟ್ ರಸ್ತೆಯಲ್ಲಿ ತಿರುವುಗಳಿಗೆ ಕಾಂಕ್ರೀಟ್ ಪೇವ್‌ಮೆಂಟ್ ಒದಗಿಸಲು ರೂ 843 00 ಲಕ್ಷಗಳ ಅಂದಾಜಿಗೆ ಕೇಂದ್ರ ಸರ್ಕಾರ ಮಂಜೂರಾತಿ ನೀಡಿದ್ದು ಟೆಂಡರ್ ಹಂತದಲ್ಲಿದೆ

ಶಿರಾಡಿ ಘಾಟ್ ಪ್ರದೇಶದಲ್ಲಿ ಟ್ಯಾಂಕರುಗಳು, ಭಾರೀ ವಾಹನಗಳು ಉರುಳಿ ಸಂಚಾರ ತಡೆಯುಂಟಾಗುವುದನ್ನು ತಪ್ಪಿಸಲು ಸೂಕ್ತ ಸಂಚಾರಿ ವ್ಯವಸ್ಥೆಗೆ ಕ್ರಮಕೈಗೊಳ್ಳುವಂತೆ ಜಿಲ್ಲಾಡಳಿತಕ್ಕೆ ಸಾರಿಗೆ ಇಲಾಖೆಗೆ ಹಾಗೂ ಪೊಲೀಸ್ ಇಲಾಖೆಗೆ ವಿನಂತಿಸಲಾಗಿದೆ

ಇ) ನೆಲಮಂಗಲ–ಹಾಸನ ಚತುಷ್ಪಥ ರಸ್ತೆ ಕಾಮಗಾರಿಯನ್ನು NHAI ವತಿಯಿಂದ ಕೈಗೊಳ್ಳಲಾಗುತ್ತಿದೆ ಹಾಸನ–ಬಿ ಸಿ ರೋಡ್ ಚತುಷ್ಪಥ ರಸ್ತೆಯನ್ನಾಗಿಸಲು Consultant ನೇಮಿಸಲು ಪ್ರಕ್ರಿಯೆಯು ಜಾರಿಯಲ್ಲಿದೆ

ಶಿರಾಡಿ ಘಾಟ್ ರಸ್ತೆ ಅಭಿವೃದ್ಧಿ ಹಾಗೂ ನವೀಕರಣಕ್ಕೆ ಕೇಂದ್ರ ಸರ್ಕಾರವು ಮೇಲಿನಂತೆ 3 ಅಂದಾಜು ಪಟ್ಟಿಗಳನ್ನು ಮಂಜೂರು ಮಾಡಿದ್ದು ಟೆಂಡರು ಪ್ರಕ್ರಿಯೆಯು ಜಾರಿಯಲ್ಲಿದೆ

ಈ) ಮಂಜೂರಾದ ಮೇಲಿನ 3 ಕಾಮಗಾರಿಗಳಿಗೆ ಟೆಂಡರು ವಿಧಿ ವಿಧಾನ ಪೂರ್ಣಗೊಂಡ ನಂತರ, ಒಂದು ವರ್ಷದ ಕಾಲಾವಧಿ ನಿಗಧಿಪಡಿಸಲಾಗಿದೆ

ಶ್ರೀ ಜೆ ಕೃಷ್ಣ ಪಾಲೇಮಾರ್ ಶಿರಾಡಿ ಘಾಟ್‌ನಲ್ಲಿ ರಸ್ತೆ ಬಹಳಷ್ಟು ಹದಗೆಟ್ಟು ಬಹಳ ಶಿಥಿಲಗೊಂಡಿದೆ ಈಗ ಗುಂಡಿಗಳನ್ನು ರಿಪೇರಿ ಮಾಡುತ್ತಿದ್ದಾರೆಂದು ಅಧಿಕಾರಿಗಳು ಉತ್ತರ ಕೊಟ್ಟಿದ್ದಾರೆ ಗುಂಡಿಗಳನ್ನು ರಿಪೇರಿ ಮಾಡಿದರೆ ಸಾಲದು ಅಲ್ಲಿ ಸುಮಾರು ಮೂರು ತಿಂಗಳಿನಿಂದ ಬಸ್‌ಗಳು ತಡೆಯಾಗುತ್ತವೆ ಆ ಮಾರ್ಗದ ಮಧ್ಯೆದಲ್ಲಿ ಟ್ಯಾಂಕರ್‌ಗಳು ಉರುಳಿ

ಬಿದ್ದ ಪರಿಣಾಮವಾಗಿ ಬಸ್‌ಗಳು ದಿನಗಟ್ಟಲೇ ಅಲ್ಲಿ ತಡೆಯಾಗುವುದರಿಂದ ಪ್ರಯಾಣಿಕರು ಕೂಡ ಅಲ್ಲಿಯೇ ಇರಬೇಕಾದ ಅನೇಕ ಪ್ರಸಂಗಗಳು ಇವೆ ಇದಕ್ಕೆ ಒಂದು ಶಾಶ್ವತವಾದ ವ್ಯವಸ್ಥೆಯನ್ನು ಶಿರಾಡಿ ಘಾಟ್‌ನಲ್ಲಿ ಮಾಡಬೇಕು ಕೆಎನ್‌ಆರ್‌ಟಿಸಿಯು ಇದರಿಂದಾಗಿ ಸುಮಾರು 97 ಲಕ್ಷ ರೂಪಾಯಿ ನಷ್ಟವನ್ನು ಅನುಭವಿಸಿದೆ ಎನ್ನುವ ವರದಿ ಕೂಡ ಕೊಟ್ಟಿದ್ದಾರೆ ಹೀಗಾಗಿ ಶಿರಾಡಿಘಾಟ್ ಏನು ಶಿಥಿಲವಾಗಿದೆ ಇದರ ಬಗ್ಗೆ ಸರ್ಕಾರ ಹೆಚ್ಚಿನ ಗಮನ ಕೊಟ್ಟು ಸರಿಮಾಡಬೇಕು ಜೊತೆಗೆ ಆ ಮಾರ್ಗದಲ್ಲಿ ಬಸ್‌ಗಳು ಇಡೀ ದಿನ ಬ್ಲಾಕ್ ಆಗಿ ನಿಂತಾಗ, ಅಲ್ಲಿ ಯಾವುದೇ ವ್ಯವಸ್ಥೆಯಿಲ್ಲ ಪೊಲೀಸ್ ವ್ಯವಸ್ಥೆಯಿಲ್ಲ ಅಲ್ಲಿ ಬಸ್‌ಗಳು ಬಿದ್ದಾಗ ಅಥವಾ ಟ್ಯಾಂಕರ್ ಬಿದ್ದಾಗ ಅವುಗಳನ್ನು ಕೂಡಲೇ ಎತ್ತಿ ರಸ್ತೆಯನ್ನು ಕ್ಲಿಯರ್ ಮಾಡುವಂಥ ವ್ಯವಸ್ಥೆಯನ್ನು ಮಾಡಬೇಕಾಗಿರುವುದರಿಂದ ಅಲ್ಲಿ ಕ್ರೇನ್ ಒದಗಿಸುವಂಥ ವ್ಯವಸ್ಥೆಯಾಗಬೇಕು ಅಲ್ಲಿ ಪೊಲೀಸ್ ವ್ಯವಸ್ಥೆಯನ್ನು ಹಾಕಿದರೆ ಒಳ್ಳೆಯದು ಎಂದು ಹೇಳುತ್ತೇನೆ ಇದರ ಜೊತೆಗೆ ಅಲ್ಲಿ ಒಂದು ಶೌಚಾಲಯವನ್ನು ನಿರ್ಮಿಸಬೇಕೆಂದು ಸರ್ಕಾರದ ಗಮನಕ್ಕೆ ತರಬಯಸುತ್ತೇನೆ

ಶ್ರೀಮತಿ ಶಕುಂತಲಾ ಟಿ ಶೆಟ್ಟಿ ಶಿರಾಡಿ ಘಾಟ್‌ನಲ್ಲಿ ಸಾಧಾರಣವಾಗಿ, ಸಕಲೇಶಪುರದಿಂದ ಸ್ವಲ್ಪ ಕೆಳಗಿನವರೆಗೆ ಮಾತ್ರ ನಮಗೆ ಮೊಬೈಲ್ ಸಿಗ್ನಲ್ ಸಿಗುತ್ತಿದೆ ಆಮೇಲೆ ನೆಲ್ಯಾಡಿಯವರೆಗೆ ಸಾಧಾರಣ 40 ಕಿಲೋಮೀಟರ್‌ಗಳ ಅಂತರದಲ್ಲಿ ನಮಗೆ ಯಾವುದೇ ವ್ಯವಸ್ಥೆ ಇಲ್ಲದಿರುವುದರಿಂದ ನಮಗೆ ಯಾರನ್ನು ತಲುಪುವುದಕ್ಕಾಗುತ್ತಿಲ್ಲ ಆದಕಾರಣ ಅಲ್ಲಿ ಒಂದು ಮೊಬೈಲ್ ಟವರ್ ಆಗಬೇಕು ಜೊತೆಗೆ ಸಾಧಾರಣವಾಗಿ ಎರಡು ಅಥವಾ ಮೂರು ಕಿಲೋಮೀಟರ್ ಒಳಗೆ, ಮಾನ್ಯ ಪಾಲೇಮಾರ್‌ರವರು ಹೇಳಿದ ಹಾಗೆ, ಸಾರ್ವಜನಿಕ ಶೌಚಾಲಯಗಳನ್ನು ಮಾಡುವುದು ಒಳ್ಳೆಯದು ಏಕೆಂದರೆ, ಪ್ರತಿ ಟರ್ನ್‌ಗಳಲ್ಲಿ ಅದರಲ್ಲೂ ಮಳೆಗಾಲದಲ್ಲಂತೂ ನಿತ್ಯ ನಿರಂತರವಾಗಿ ಅಲ್ಲಿ ಬ್ಲಾಕ್ ಆಗುತ್ತದೆ ಅಲ್ಲಿ ಮಹಿಳೆಯರಿಗೆ ಬಹಳಷ್ಟು ಕಷ್ಟವಾಗುತ್ತದೆ, ಅದಕ್ಕೆ ಯಾವುದಾದರೊಂದು ಸೂಕ್ತ ವ್ಯವಸ್ಥೆ ಮಾಡಬೇಕು ಜೊತೆಗೆ ಸಕಲೇಶಪುರ – ಗುಂಡ್ಯಾ–ಕೆಂಪುಹೊಳೆ ಮೂರುಕಡೆ ಕ್ರೇನ್‌ಗಳನ್ನು ಇರಿಸಿ ಅದಕ್ಕೆ ವ್ಯವಸ್ಥೆ ಮಾಡಬೇಕೆಂದು ನಾನು ಅವರ ಪರವಾಗಿ ಕೇಳಿಕೊಳ್ಳುತ್ತೇನೆ

ಶ್ರೀ ಕೆ ಜಯಪ್ರಕಾಶ್ ಹೆಗ್ಡೆ . ಆಯ್ದ ಭಾಗದಲ್ಲಿ ಶಿರಾಡಿ ಘಾಟ್‌ನಲ್ಲಿ ಕಾಂಕ್ರೀಟ್ ಮಾಡುತ್ತೇವೆಂದು ತಾವು ಉತ್ತರಿಸಿದ್ದೀರಿ ಉಳಿದ ಭಾಗದಲ್ಲಿ ಗುಂಡಿ ಮುಚ್ಚಿದೆ ಈ ಮಳೆಗಾಲದಲ್ಲಿ ಪೂರ್ತಿ ಕಿತ್ತು ಹೋಗಿ ಪುನ ಇಂದಿನ ಪರಿಸ್ಥಿತಿ ಬರುತ್ತದೆ ಈಗಲೇ ಕೆಲವು ತಿರುವುಗಳಲ್ಲಿ ಹೋಗಲಿಕ್ಕೆ ಆಗುತ್ತಿಲ್ಲ ಅದಕ್ಕೆ ಶಾಶ್ವತವಾದ ಪರಿಹಾರ ಎಷ್ಟು ಬೇಗ ಕಂಡು ಹಿಡಿಯುತ್ತೀರಿ ಎನ್ನುವುದಕ್ಕೆ ಮಾನ್ಯ ಸಚಿವರು ಉತ್ತರ ಹೇಳಬೇಕು ಕುಂದಾಪುರದವರಿಗೆ ನೀವು ಹುಡುಕಬೇಕು

ಶ್ರೀ ಹೆಚ್ ಡಿ ರೇವಣ್ಣ ಮಾನ್ಯ ಸದಸ್ಯರ ಶಿರಾಡಿ ಘಾಟ್‌ನಲ್ಲಿ ಸಕಲೇಶಪುರದಿಂದ ಶಿರಾಡಿ ಘಾಟ್‌ವರೆಗೆ 40 ಕಿಲೋಮೀಟರ್ ರಸ್ತೆ ಹಾಸನದಿಂದ ಹೋದರೂ ರಸ್ತೆ ಪೂರ್ತಿ ಹದಗೆಟ್ಟಿದೆ ಶಿರಾಡಿ ಘಾಟ್‌ನಲ್ಲಿ ದಿನಕ್ಕೆ 5 ರಿಂದ 6 ಸಾವಿರ ಲಾರಿಗಳು ಹೋಗುತ್ತವೆ ಇದು ಕೇಂದ್ರ ಸರ್ಕಾರಕ್ಕೆ ಸೇರಿದ ರಾಷ್ಟ್ರೀಯ ಹೆದ್ದಾರಿ ರಸ್ತೆ ಈಗಾಗಲೇ ನಾನು ಕೇಂದ್ರ ಸರ್ಕಾರದ ಸಚಿವರನ್ನು ಎರಡು ಮೂರು ಸಾರಿ ಭೇಟಿ ಮಾಡಿ, ಈ 40 ಕಿಲೋಮೀಟರ್‌ಗೆ ಫೋರ್ ಲೈನ್ ಕಾಂಕ್ರೀಟ್ ರಸ್ತೆ ಮಾಡಬೇಕು, ಇಲ್ಲದೆ ಹೋದರೆ ತಡೆಯುವುದಿಲ್ಲ, ನಾವು ಎಷ್ಟೇ ಟಾರು ಹಾಕಿದರೂ ರಸ್ತೆ ತಡೆಯುವುದಿಲ್ಲವೆನ್ನುವ ನಮ್ಮ ಇಲಾಖಾಧಿಕಾರಿಗಳ ಅಭಿಪ್ರಾಯ ಇದೆ ಎಂಬ ವಿಚಾರವನ್ನು ತಿಳಿಸಿರುತ್ತೇನೆ ಅದರಂತೆ ಸಧ್ಯಕ್ಕೆ ಈಗ 29 ಕೋಟಿ ರೂಪಾಯಿಗಳನ್ನು ಕೇಂದ್ರ ಸರ್ಕಾರ ಮಂಜೂರಾತಿ ಮಾಡಿದೆ ನಾವು ಟೆಂಡರ್ ಕರೆದಿದ್ದೇವೆ, ಟೆಂಡರ್ ಅನುಮತಿಗಾಗಿ ದೆಹಲಿಗೆ ಕಳುಹಿಸಿದ್ದೇವೆ, ದೆಹಲಿಯಿಂದ ಅನುಮತಿ ಬಂದ ಮೇಲೆ ಕೆಲಸ ಪ್ರಾರಂಭ ಮಾಡಲಾಗುವುದು

ಶ್ರೀ ಜೆ ಸಿ ಮಾಧುಸ್ವಾಮಿ ಮಾನ್ಯ ಅಧ್ಯಕ್ಷರೇ, ಚಿಕ್ಕನಾಯಕನಹಳ್ಳಿಯಿಂದ ಮಂಗಳೂರಿಗೆ ಒಂದು ವಿಶೇಷ ರಸ್ತೆ ಮಾಡಿ ಲಾರಿಗಳಿಂದ ಟೋಲ್ ವಸೂಲ್ಮಾಡುತ್ತೇವೆಂದು ಬಜೆಟ್‌ನಲ್ಲಿ ಸನ್ಮಾನ್ಯ ಸಿದ್ದರಾಮಯ್ಯನವರು ಆರ್ಥಿಕ ಇಲಾಖೆಯ ಸಚಿವರಾಗಿದ್ದಂಥ ಸಂದರ್ಭದಲ್ಲಿ ಹೇಳಿದ್ದರು ಈ ವಿಷಯ ಸನ್ಮಾನ್ಯ PWD ಮಿನಿಸ್ಟರ್‌ರವರಿಗೂ ಸಹ ಗೊತ್ತಿದೆ ಆದರೆ, ಸದರಿ ರಸ್ತೆಗೆ ಸರ್ವೆ ಕೆಲಸ ನಡೆದಿಲ್ಲ ಮಾನ್ಯ ಸಚಿವರು ಹೇಳಿರುವ ಪ್ರಕಾರ ಚಿಕ್ಕನಾಯಕನ ಹಳ್ಳಿಯೊಂದರಿಂದ ಸುಮಾರು 600 ರಿಂದ 700 ಲಾರಿಗಳು ಹೋಗುತ್ತವೆ ಆದ್ದರಿಂದ, ಇದಕ್ಕೆ ತಾವೇನಾದರೂ ಮಾಡಬೇಕಾಗುತ್ತದೆ ಶಾಸನ ಸಭೆಯಲ್ಲಿ

ನಿಂತುಕೊಂಡು ಓದತಕ್ಕಂಥ ಬಜೆಟ್‌ನಲ್ಲಿರುವ ಕಾರ್ಯಕ್ರಮ ಅನುಷ್ಠಾನವಾಗದಿದ್ದರೆ ಹೇಗೆ? ಮತ್ತೊಂದು ವಿಷಯ ಹೇಳುವುದೇನೆಂದರೆ, existing road improvement ಅನ್ನು ದಯವಿಟ್ಟು ಅದರಲ್ಲಿ ಸೇರಿಸಬೇಡಿ ಹೊಸದಾಗಿ ರೋಡ್ ಮಾಡಿಕೊಡಿ ಎಂದು ಅವರ ಚೀಫ್ ಇಂಜಿನಿಯರ್‌ರವನ್ನು ಕರೆದುಕೊಂಡು ಹೋಗಿ ರಸ್ತೆಯನ್ನು ತೋರಿಸಿಕೊಂಡು ಬಂದಿದ್ದೇವೆ ಈ ರಸ್ತೆ ಮಾಡಿದರೆ, ಈಗ ಇರತಕ್ಕಂಥ ಟೌನ್‌ಗಳೆಲ್ಲಾ ಬೈ ಪಾಸ್ ಆಗುತ್ತದೆ ಇದರ ಬಗ್ಗೆ ಮಾನ್ಯ ರೇವಣ್ಣನವರು ಕ್ರಮ ತೆಗೆದುಕೊಳ್ಳುತ್ತಾರೆಯೇ ಎಂದು ಕೇಳುವುದಕ್ಕೆ ಬಯಸುತ್ತೇನೆ

ಶ್ರೀ ಕೆ ಜಯಪ್ರಕಾಶ್ ಹೆಗ್ಡೆ ಮಾನ್ಯ ಅಧ್ಯಕ್ಷರೇ, ನಮ್ಮಲ್ಲಿ ರಸ್ತೆ ಮಾಡಿ ಟೋಲ್ ಕಲೆಕ್ಟ್ ಮಾಡಿದ್ದಾರೆ ನಾವು ರಾತ್ರಿ ಬಸ್‌ನಲ್ಲಿ ಹೊರಟರೆ ನಾಳೆ ಮಧ್ಯಾಹ್ನ ಅಥವಾ ಸಾಯಂಕಾಲ ಇಲ್ಲಿಗೆ ಮುಟ್ಟುತ್ತೇವೆ ಈ ಪರಿಸ್ಥಿತಿಯಿಂದ ಏನು ಪ್ರಯೋಜನ ಇಲ್ಲ ಆದ್ದರಿಂದ ಎಷ್ಟು ಟೋಲ್ ಕಲೆಕ್ಟ್ ಮಾಡಿದ್ದೀರಿ ಎಂಬುದನ್ನು ಮತ್ತು ಅದನ್ನು ಏನು ಮಾಡಿದ್ದೀರೆಂಬುದನ್ನು ತಿಳಿಸಬೇಕು

ಶ್ರೀ ಹೆಚ್ ಡಿ ರೇವಣ್ಣ. ಮಾನ್ಯ ಅಧ್ಯಕ್ಷರೇ, ಈಗಾಗಲೇ ಮಾನ್ಯ ಮಾಧುಸ್ವಾಮಿಯವರು ಚಿಕ್ಕನಾಯಕನಹಳ್ಳಿಯಿಂದ ಮಂಗಳೂರಿನವರೆಗೆ ರಸ್ತೆ ಮಾಡುವ ಬಗ್ಗೆ ಹೇಳಿದರು ಆದರೆ, ಅದು ಚಿಕ್ಕನಾಯಕ್ಕನ ಹಳ್ಳಿಯಿಂದ ಹಾಸನದವರೆಗೆ ಮಾತ್ರ ಮಾಡುವ ರಸ್ತೆ ಈಗಾಗಲೇ ಸುಮಾರು 140 ಕೋಟಿ ರೂಪಾಯಿಗಳ ಡಿಪಿಆರ್ ಆಗಿದೆ ಇದು ಈಗ ಆರ್ಥಿಕ ಇಲಾಖೆಗೆ ಹೋಗಿದೆ ಆರ್ಥಿಕ ಇಲಾಖೆಯಿಂದ ಅನುಮತಿ ತೆಗೆದುಕೊಂಡ ನಂತರ ಸಚಿವ ಸಂಪುಟದ ಅನುಮತಿಯನ್ನೂ ಸಹ ತೆಗೆದುಕೊಂಡು BOT ಮೇಲೆ ಟೆಂಡರ್ ಕರೆದು ಆ ಕೆಲಸವನ್ನು ಮಾಡಲಾಗುತ್ತದೆ

ಶ್ರೀ ಜೆ ಸಿ ಮಾಧುಸ್ವಾಮಿ. ಇರತಕ್ಕಂಥ ರಸ್ತೆಯ ಮೇಲೆ ಈ ರಸ್ತೆಯನ್ನು ಮಾಡಬಾರದು ಬೇರೆ ರಸ್ತೆಯನ್ನು ಅಭಿವೃದ್ಧಿ ಪಡಿಸಬೇಕೆಂದು ನಾವು ಕೇಳಿದ್ದೇವೆ ಚಿಕ್ಕನಾಯಕನಹಳ್ಳಿ ಮತ್ತು ತಿಪಟೂರು ಟೌನ್ ಎಲ್ಲಾ ಪಾಸ್ ಆಗುವುದಾದರೆ ಆ ರಸ್ತೆಯ ಅಗತ್ಯತೆ ನಮಗೆ ಇಲ್ಲ ಆದ್ದರಿಂದ ನಿಮ್ಮ ಇಲಾಖೆಯವರು ಹಾಲಿ ಇರತಕ್ಕಂಥ ರಸ್ತೆಯನ್ನು ಅಭಿವೃದ್ಧಿ ಮಾಡುತ್ತೀರೋ ಅಥವಾ ಹೊಸ ರಸ್ತೆಯನ್ನು ಅಭಿವೃದ್ಧಿಪಡಿಸುತ್ತೀರೋ ಎನ್ನತಕ್ಕಂಥದನ್ನು ತಾವು ಹೇಳಬೇಕು ನಾವು ಈಗಾಗಲೇ ಯಾವುದೇ ತಾಪತ್ರೆಯ ಇಲ್ಲದ

ಜಾಗವನ್ನು ತೋರಿಸಿ ರಸ್ತೆ ಮಾಡಿಕೊಡುವುದಕ್ಕೆ ಹೇಳಿದ್ದೇವೆ ಆದ್ದರಿಂದ ಇದನ್ನು ತಾವು ಕನ್ಸಿಡರ್ ಮಾಡುತ್ತೀರಾ?

ಶ್ರೀ ಹೆಚ್ ಡಿ ರೇವಣ್ಣ ಮಾನ್ಯ ಅಧ್ಯಕ್ಷರೆ, ಆ ವಿಷಯ ಏನೆಂಬುದನ್ನು ನಾನು ಕರೆಕ್ಟ್ ಆಗಿ ನೋಡಿ ಹೇಳುತ್ತೇನೆ

ಒಪ್ಪಂದಗಳನ್ನು ಮರು ಪರಿಶೀಲಿಸುವುದು

158 (1257) ಶ್ರೀ ಡಿ ಆರ್ ಪಾಟೀಲ್ (ಗದಗ್) ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಏಪ್ರಿಲ್ 2006ರಿಂದ ಜನವರಿ 2007ರ ಅವಧಿಯಲ್ಲಿ ಎಂ ಎಂ ಟಿ ಸಿ ನಿಗದಿಪಡಿಸಿದ ಕಬ್ಬಿಣದ ಲಂಪ್ಸ್ ಮತ್ತು ಫೈನ್ಸ್‌ಗಳ ಬೇರೆ ಬೇರೆ ಗುಣಮಟ್ಟದ ಅದಿರಿನ ಬೆಲೆ ಏನು (ತಿಂಗಳವಾರು, ಪ್ರತಿ ವಾರದ ವಿವರ ನೀಡುವುದು),

ಆ) ಸರ್ಕಾರಿ ಸ್ವಾಮ್ಯದ ಎಂ ಎಂ ಎಲ್ ಸಂಸ್ಥೆ ಈ ಅವಧಿಯಲ್ಲಿ ಯಾವ ಯಾವ ಗುಣಮಟ್ಟದ ಅದಿರನ್ನು ತಾನಾಗಲೀ ಇಲ್ಲವೇ ಬೇರೆ ಯಾವುದಾದರೂ ಸಂಸ್ಥೆ ಅಥವಾ ವ್ಯಕ್ತಿಯಿಂದಾಗಲೀ ಗುತ್ತಿಗೆ ಆಧಾರದ ಮೇಲೆ ತೆಗೆಯಿಸಿ ಮಾರಾಟ ಮಾಡಿದ ಮೇಲ್ಕಂಡ ಅದಿರಿನ ಬೆಲೆ ಹಾಗೂ ಪ್ರಮಾಣ ಎಷ್ಟು (ತಿಂಗಳುವಾರು, ಪ್ರತಿ ವಾರದ, ಸಂಸ್ಥೆ ಹಾಗೂ ವ್ಯಕ್ತಿವಾರು ವಿವರ ನೀಡುವುದು),

ಇ) ಇದು ಎಂ ಎಂ ಟಿ ಸಿ ನಿಗದಿಪಡಿಸಿದ ಬೆಲೆಗಿಂತ ಕಡಿಮೆ ಇದೆಯೇ ಅಥವಾ ಹೆಚ್ಚಿದೆಯೇ,

ಈ) ಕಡಿಮೆ ಇದ್ದಲ್ಲಿ ಆ ದರದಲ್ಲಿ ಮಾರಾಟ ಮಾಡಲು ಕಾರಣಗಳೇನು, (ಒಪ್ಪಂದವಿದ್ದಲ್ಲಿ ಅದರ ಪ್ರತಿ ನೀಡುವುದು),

ಉ) ಈ ಅವಧಿಯಲ್ಲಿ ಎಂ ಎಂ ಎಲ್ ಯಾವುದಾದರೂ ಒಪ್ಪಂದವನ್ನು ಮರು ಪರಿಶೀಲಿಸಿ ಹೆಚ್ಚಿನ ಬೆಲೆ ನಿಗದಿಪಡಿಸಿದೆಯೇ, ನಿಗದಿಪಡಿಸಿದ್ದಲ್ಲಿ ಅದಕ್ಕೆ ಕಾರಣಗಳೇನು,

ಊ) ಇದರಿಂದ ಸಂಸ್ಥೆಗೆ ಆದ ಲಾಭ ಏನು,

ಋ) ಇದೇ ರೀತಿ ಕ್ರಮ ಕೈಗೊಳ್ಳಲು ಬೇರೆ ಬೇರೆ ಸಂಸ್ಥೆ ಹಾಗೂ ವ್ಯಕ್ತಿಗಳ ಜೊತೆ ಮಾಡಿದ ಒಪ್ಪಂದಗಳನ್ನು ಮರು ಪರಿಶೀಲಿಸಲು ಇರುವ ತೊಂದರೆಗಳೇನು?

ಶ್ರೀ ಹೆಚ್ ಡಿ ಕುಮಾರಸ್ವಾಮಿ (ಮುಖ್ಯಮಂತ್ರಿಗಳು)

ಅ) ಕಬ್ಬಿಣದ ಲಂಪ್ಸ್ ಮತ್ತು ಫೈನ್ಸ್‌ಗೆ (Lumps and Iron ore fines) ಎಂ ಎಂ ಟಿ ಸಿ ದರಪಟ್ಟಿಯನ್ನು ಅನುಬಂಧ–1ರಲ್ಲಿ ನೀಡಲಾಗಿದೆ

ಆ) ಲಂಪಿ, ಕ್ಯಾಲಿಬ್ರೇಟೆಡ್ ಅದಿರು ಮತ್ತು ಫೈನ್ಸ್ ಅನ್ನು ಎಂ ಎಂ ಎಲ್ ಸಂಸ್ಥೆಯಿಂದ ಪಡೆದ ಸಂಸ್ಥೆಗಳು ಖರೀದಿದಾರರ ಹೆಸರುಗಳನ್ನು ಹಾಗೂ ಮಾರಾಟದ ಬೆಲೆಯನ್ನು ಅನುಬಂಧ–2ರಲ್ಲಿ ನೀಡಲಾಗಿದೆ

ಇ) ರೈಸ್ ಕಂ ಸೇಲ್ ಒಪ್ಪಂದ ಟೆಂಡರ್ ಹಾಗೂ ನ್ಯಾಯಾಲಯದ ಆಚೆ (Out of Court settlement) ತೀರ್ಮಾನಿಸಲಾದ ಪ್ರಕರಣಗಳನ್ನು ಹೊರತುಪಡಿಸಿ, ಎಂ ಎಂ ಎಲ್ ಸಂಸ್ಥೆಯು ಫೈನ್ಸ್ ಹಾಗೂ ಕಬ್ಬಿಣದ ಅದಿರನ್ನು ಪ್ರಸ್ತುತದಲ್ಲಿರುವ ಎಂ ಎಂ ಟಿ ಸಿ ದರದಲ್ಲಿ ರೂ 98/– ಪ್ರತಿ ಮೆಟ್ರಿಕ್ ಟನ್‌ಗೆ ಕಡಿತ ಮಾಡಿ (ಸಾಗಾಣಿಕೆ ವೆಚ್ಚವಾಗಿ) ಎಕ್ಸ್–ಮೈನ್ಸ್ ಆಧಾರದಲ್ಲಿ ಮಾರಾಟ ಮಾಡುತ್ತಿದೆ ಎಂ ಎಂ ಟಿ ಸಿ ದರವು F O R (Free on Rail) ಮೂಲದ್ದಾಗಿದ್ದು, ಇದರಲ್ಲಿ ರಾಯಲ್ಟಿ, ಸೆಸ್, ವೇ ಪರ್ಮಿಟ್ ಚಾರ್ಜು, ಲೋಡಿಂಗ್, ಅನ್‌ಲೋಡಿಂಗ್ ಮತ್ತು ಗಣಿ ಪ್ರದೇಶದಿಂದ ಬನಹಟ್ಟಿ ರೈಲ್ವೇ ಯಾರ್ಡ್, ಸಂಡೂರು ತಾಲ್ಲೂಕುವರೆಗೆ ಸಾಗಿಸುವ ಸಾಗಾಣಿಕೆಯ ವೆಚ್ಚವೂ ಸೇರಿರುತ್ತದೆ

ಎಂ ಎಂ ಟಿ ಸಿ ಯ ಪ್ರತಿ ಟನ್ನಿನ ದರದಲ್ಲಿ ರೂ 98/– ಕಡಿತಗೊಳಿಸಿದ ಬೆಲೆಯು ಎಂ ಎಂ ಎಲ್ ಸಂಸ್ಥೆಯ ಎಕ್ಸ್ ಮನ್ ದರವಾಗಿದೆ (ಇದರಲ್ಲಿ ರಾಯಲ್ಟಿ, ಸೆಸ್, ವೇಪರ್ಮಿಟ್ ಚಾರ್ಜು, ಲೋಡಿಂಗ್, ಅನ್‌ಲೋಡಿಂಗ್ ಸಾಗಾಣಿಕೆ ವೆಚ್ಚವು ಸೇರಿರುವುದಿಲ್ಲ) ಹಿಂಬದಿ ಲೆಕ್ಕಾಚಾರದಂತೆ (On working backwards) ಎಕ್ಸ್ ಮೈನ್ ಆಧಾರಿತ ಹಾಗೂ ಸಾಗಾಣಿಕೆ ವೆಚ್ಚಗಳನ್ನು ಪರಿಗಣಿಸಿದಲ್ಲಿ, ಎಂ ಎಂ ಎಲ್ ಸಂಸ್ಥೆಯ ದರವು ಎಂ ಎಂ ಟಿ ಸಿ ನಿಗದಿಪಡಿಸಿರುವ ದರಕ್ಕಿಂತ ಪ್ರತಿ ಟನ್ನಿಗೆ ಸುಮಾರು 100 00 ರೂ ಗಳಷ್ಟು ಹೆಚ್ಚಾಗಿರುತ್ತದೆ

ಮುಂದುವರೆದು, ಎಂ ಎಂ ಟಿ ಸಿ ಸಂಸ್ಥೆಯು ಖರೀದಿ ಮಾಡುವ ದರವು ಶುಲ್ಕ ತೂಕದ (Dry/weight) ಆಧಾರಿತವಾಗಿದ್ದು, ಆರ್ದ್ರತೆಯ (Moisture content) ತೂಕವನ್ನು ಕಳೆಯಲಾಗುತ್ತದೆ ಎಂ ಎಂ ಎಲ್ ಸಂಸ್ಥೆಯು ಅದಿರನ್ನು as is where is basis ರೂಪದಲ್ಲಿ ಮಾರಾಟ ಮಾಡುತ್ತಿದೆ

ಈ) ರೈಸ್ ಕಂ ಸೇಲ್ ಅಗ್ರಿಮೆಂಟ್‌ಗೆ ಸಂಬಂಧಿಸಿದಂತೆ ಟೆಂಡರ್ ಮೂಲಕ ನಿಗದಿಪಡಿಸಿರುವ ಮಾರಾಟ ದರವು ಪ್ರಸ್ತುತ ಎಂ ಎಂ ಟಿ ಸಿ ದರಕ್ಕಿಂತ ಕಡಿಮೆ ಇರುತ್ತದೆ ಎಂ ಎಂ ಎಲ್ ಸಂಸ್ಥೆಯು ಇನ್‌ಪುಟ್ ಕಾಸ್ಟ್ ಆಧಾರದ ಮೇಲೆ ರೈಸಿಂಗ್ ವೆಚ್ಚವನ್ನು (Raising cost) ನಿಗದಿಪಡಿಸುತ್ತದೆ ಎಂ ಎಂ ಎಲ್ ಸಂಸ್ಥೆಯು ಮಾರುಕಟ್ಟೆ ಒಪ್ಪಂದವನ್ನು ಟೆಂಡರ್ ಪ್ರಕ್ರಿಯೆ ಮುಖಾಂತರ ಹೆಚ್ಚಿನ ದರ ನಮೂದಿಸಿದ ಸಂಸ್ಥೆಗೆ ನೀಡಲಾಗುವುದು ಸದರಿ ಮಾರುಕಟ್ಟೆ ಒಪ್ಪಂದವನ್ನು ಪಡೆದ ಸಂಸ್ಥೆಯು ಸೂಚಿಸಿದ ಸಂಸ್ಥೆಗೆ ರೈಸಿಂಗ್ ಕಾಂಟ್ರ್ಯಾಕ್ಟ್ ಅನ್ನು ಎಂ ಎಂ ಎಲ್ ಸಂಸ್ಥೆಯು ನಿಗದಿಪಡಿಸಿದ ರೈಸಿಂಗ್ ವೆಚ್ಚಕ್ಕೆ ನೀಡಲಾಗುವುದು ಇಂತಹ ರೈಸಿಂಗ್ ಕಾಂಟ್ರ್ಯಾಕ್ಟರ್‌ಗಳು ಯಂತ್ರೋಪಕರಣಗಳ ಮೇಲೆ ಬಂಡವಾಳ ಹೂಡುವುದಲ್ಲದೆ, ಅವರದೇ ಆದ ಸಿಬ್ಬಂದಿಯನ್ನು ಗಣಿಗಾರಿಕೆಗೆ ಉಪಯೋಗಿಸುವರು

ಎಂ ಎಂ ಎಲ್ ಸಂಸ್ಥೆಯು ರೈಸಿಂಗ್ ಮತ್ತು ಮಾರ್ಕೆಟಿಂಗ್ ಸಂಸ್ಥೆಗಳೊಂದಿಗೆ ಮಾಡಿಕೊಂಡಿರುವ ಒಪ್ಪಂದಾನ್ವಯ ಕ್ಯಾಲಿಬ್ರೇಟೆಡ್/ಫೈನ್ಸ್ ಅದಿರನ್ನು ಒಪ್ಪಂದದಲ್ಲಿ ನಿರ್ಣಯಿಸಿದ ದರದಲ್ಲಿ ಪೂರೈಕೆ ಮಾಡಲು ಬದ್ಧವಾಗಿರುತ್ತದೆ ಒಪ್ಪಂದದ ಪ್ರಾಥಮಿಕ ಅವಧಿ ಮುಗಿದ ನಂತರ (Initial block-in period) ಈ ದರಗಳನ್ನು ಆಗಿಂದಾಗ್ಗೆ ಪರಿಷ್ಕರಿಸಲಾಗುವುದು

ಎಂಎಂಎಲ್ ಸಂಸ್ಥೆಯು 7 ಸಾಮೂಹಿಕ ಕಂಪನಿಗಳ ಜೊತೆಗೆ ಮಾಡಿಕೊಂಡ Out of Court settlement ನಂತೆ 1 75 ಲಕ್ಷ ಮೆಟ್ರಿಕ್ ಟನ್ ಅಧಿಕ ಪ್ರಮಾಣದ ಅದಿರನ್ನು ಮಾರುಕಟ್ಟೆ ಬೆಲೆಗಿಂತ ಕಡಿಮೆ ಬೆಲೆಯಾದ ಪ್ರತಿ ಟನ್ನಿಗೆ ರೂ 577 00ರಂತೆ ನೀಡುವ ಬಗ್ಗೆ ಸಂಸ್ಥೆಯು ಹಿಂದಿನ ಒಪ್ಪಂದದ ಪತ್ರದ ಮೇಲೆ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಪ್ರಶ್ನಿಸಿ ರಿವಿಷನ್ ಅರ್ಜಿಯನ್ನು ಸಲ್ಲಿಸಲಾಗಿದೆ ಈ ರಿವಿಷನ್ ಅರ್ಜಿಯು ಉಚ್ಚ ನ್ಯಾಯಾಲಯದಲ್ಲಿ ಬಾಕಿ ಇರುತ್ತದೆ

ಜೂನ್ 2005ರ ಟೆಂಡರ್ ಪ್ರಕ್ರಿಯೆಯಲ್ಲಿ ಮೆ ಸ್ಟೇಟ್ ಟ್ರೇಡಿಂಗ್ ಕಾರ್ಪೋರೇಷನ್ (ಮೆ ಎಸ್ ಟಿ ಸಿ) ಸಂಸ್ಥೆಯು ಐರನ್ ಓರ್ ಫೈನ್ಸ್ ಕೊಳ್ಳಲು ಅತಿ ಹೆಚ್ಚಿನ ಬೆಲೆಯಲ್ಲಿ ನೀಡಿರುವರು ಈಗ, ಎಂ ಎಂ ಎಲ್ ಸಂಸ್ಥೆಯು ಹಾಲಿ ಎಂ ಎಂ ಟಿ ಸಿ ದರದಲ್ಲಿ (ಪ್ರತಿ ಟನ್‌ಗೆ ರೂ 1,070/–) ಐರನ್ ಓರ್ ಫೈನ್ಸ್ ಅನ್ನು ಖರೀದಿ ಮಾಡಲು, ಮೆ ಎಸ್ ಟಿ ಸಿ ಸಂಸ್ಥೆಗೆ

ಪ್ರೇರೇಪಿಸಲಾಗಿ, ಅದರಂತೆ, 40,000 ಮೆಟ್ರಿಕ್ ಟನ್ ಐರನ್ ಓರ್ ಫೈನ್ಸ್ ಅನ್ನು ಪ್ರಸ್ತುತ ಎಂ ಎಂ ಟಿ ಸಿ ದರದಲ್ಲಿ ಮೆ ಎಸ್ ಟಿ ಸಿ ಸಂಸ್ಥೆಗೆ ಮಾರಾಟ ಮಾಡಲಾಗಿದೆ ಈ ಮಾರಾಟದಿಂದ, ಎಂ ಎಂ ಎಲ್ ಸಂಸ್ಥೆಗೆ ರೂ 158 00 ಲಕ್ಷಗಳ ಅಧಿಕ ಹಣ ಸಂದಾಯವಾಗಿರುತ್ತದೆ

ಊ) ಹಿಂದೆ ಮಾಡಿಕೊಳ್ಳಲಾದ ರೈಸ್ ಕಂ ಸೇಲ್ ಕಾಂಟ್ರ್ಯಾಕ್ಟ್ ಒಪ್ಪಂದಗಳು, ಮಾರಾಟ ಒಪ್ಪಂದಗಳು, ಖರೀದಿದಾರರಿಗೆ ಪ್ರಸ್ತುತ ಜಾರಿಯಲ್ಲಿದ್ದ ಮಾರುಕಟ್ಟೆ ದರಕ್ಕಿಂತ ಕಡಿಮೆ ದರದಲ್ಲಿ ಖನಿಜ ಪೂರೈಕೆ ಮಾಡಲು ಮಾಡಿಕೊಳ್ಳಲಾದ ಹಿಂದಿನ ಬದ್ಧತೆ (earlier commitments) ಎಂ ಎಂ ಎಲ್ ಸಂಸ್ಥೆಗೆ ಹಾನಿಕಾರಕವಾಗುವಂತಹ ಸನ್ನಿವೇಶಗಳ ಬಗ್ಗೆ ಪುನರ್ವಿಮರ್ಶಿಸಲಾದ ವಿವರಗಳನ್ನು ಅನುಬಂಧ–3ರಲ್ಲಿ ನೀಡಲಾಗಿದೆ

ಋ) ಸಂಸ್ಥೆಯ ಆರ್ ಸಿ ಎಸ್, ಜಂಟಿ ಸ್ವಾಮ್ಯ, ಮಾರಾಟ ಒಪ್ಪಂದ ಹಾಗೂ ಖರೀದಿದಾರರೊಂದಿಗೆ ಸಮಾಲೋಚನೆ ಹಾಗೂ ಶ್ರಮದಿಂದಾಗಿ ಅಧಿಕ ಆದಾಯವು ಸಂಸ್ಥೆಗೆ ಬಂದಿರುತ್ತದೆ

ಋ) ಎಂ ಎಂ ಎಲ್ ಸಂಸ್ಥೆಯ ಹಿತಾಸಕ್ತಿಗೆ ಧಕ್ಕೆಯಾಗಿರುವ ಒಪ್ಪಂದಗಳ ಬಗ್ಗೆ ಮರು ಪರಿಶೀಲಿಸಲಾಗುತ್ತಿದೆ ಸಂಸ್ಥೆಗೆ ಆಗುವ ತಾರತಮ್ಯ ಮತ್ತು ಅನ್ಯಾಯಗಳನ್ನು ಸರಿಪಡಿಸಲು ಕ್ರಮಕೈಗೊಳ್ಳಲಾಗುತ್ತಿದೆ

Mysore Minerals Limited

Subbarayanahalli Iron Ore Mines

Annexure-1

Statement showing price of Iron Ore (Lumps, Calibrated Ore and Fines) fixed by MMTC time to time

Price Date	BG Lumps 64%	HG Lumps 67%	BG CAL 64%	HG CAL 67%	HG Fines for 65%	Ex Plot 65-65%	Ex Plot 64-63%	Remarks
Price w e f 3-3-2006	975 00	1075 00	1028 00	1178 00	1350 00			All inclusive
Price w e f 22-4-2006	975 00	1075 00	1028 00	1178 00	1350 00			All inclusive
Price w e f 11-5-2006	975 00	1075 00	1028 00	1178 00	1450 00			All inclusive
Price w e f 18-5-2006	975 00	1075 00	1028 00	1178 00	1310 00			All inclusive

Price w e f 18-5-2006	975 00	1075 00	1028 00	1178 00	1450 00	1400 00	1200 00	All inclusive
Price w e f 21-6-2006	975 00	1075 00	1400 00	1178 00	1450 00	1400 00	1200 00	All inclusive
Price w e f 22-4-2006	975 00	1075 00	1028 00	1178 00	1350 00			All inclusive
Price w e f 11-5-2006	975 00	1075 00	1028 00	1178 00	1310 00	1260 00	1100 00	All inclusive
Price w e f 18-5-2006	975 00	1075 00	1028 00	1178 00	1450 00	1400 00	1200 00	All inclusive
Price w e f 8-9-2006	975 00	1075 00	1028 00	1178 00	1375 00	1325 00	1125 00	All inclusive
Price w e f 7-11-2006	975 00	1075 00	1370 00	1178 00	1345 00	1295 00	1095 00	All inclusive

Price w e f 22-11-2006	975 00	1075 00	1370 00	1178 00	1430 00	1380 00	1180 00	All inclusive

Note. 1. All inclusive Means.- It is inclusive of permit charges, Loading, Transport, Tax etc , i e , all the expenditure involved in transporting material from Mine head to Railway Plot or free on rail (FOR) & Basic Price of material

2 The prices of mentioned in the statement shown as & when MMTC prices are changed, the same rate is continued in between the dates

Mysore Minerals Limited

1) Subbarayanahalli Iron Ore Mine (SIOM)

Annexure – 2

(a) Caliberated Ore – under Raise cum Sale Contract Rate Rs 314/-pmt less Royalty, Cess and way permit charges

Sl No	Name of the Buyer	Month	Quantity (MTS)	Grade	Basic Price (Rs)	Amount (Rs)	Remarks
1	Kalyani Steels	April-06	18660 145	C-Ore	283 53	5290711 00	Price is fixed

	Ltd						as per the RCS agreement for the period from 1-4-05 to 31-3-2006 (M/s KSL is claiming the validity period upto 31-3-2007)
		May-06	21166 654		283 53	6001381 00	
		June-06	23227 979		283 53	6585829 00	
		July-06	29115 965		283 53	8255250 00	
		Aug-06	19198 169		284 13	5454776 00	
		Sep-06	20156 585		284 13	5727090 00	
		Oct-06	25021 364		284 13	7109320 00	
		Nov-06	24564 961		284 13	6979642 00	
		Dec-06	25711 695		284 13	7305464 00	
		Jan-07	17209 117		284 13	4889626 00	
	Total		**224032 634**			**63599089 00**	
2	Mukund Steels	April-06	27499 425	C-Ore	283 53	7796912 00	Price is fixed as per the RCS agreement for the period from
	Ltd	May-06	24527 656		283 53	6954326 00	
		June-06	30606 211		283 53	8677779 00	
		July-06	37998 465		283 53	10773705 00	

		Aug-06	37015 551		284 13	10517228 00	1-4-05 to 31-3-2006 (M/s Mukund Steels is claiming the validity period upto 31-3-2007)
		Sep-06	30645 235		284 13	8707231 00	
		Oct-06	33962 076		284 13	9649645 00	
		Nov-06	34800 734		284 13	9881933 00	
		Dec-06	34490 550		284 13	9799800 00	
		Jan-07	19302 013		284 13	5484281 00	
	Total		**310847 916**			**88242840 00**	
b)	Iron Ore Fines						
3	Kineta Minerals	Sep-06	39254 470	-65%	1076 90	42273139 00	MMTC Rate
	& Metals Limited	Oct-06	20077 540	-65%	1076 90	21621503 00	MMTC Rate
		Nov-06	2545 150	-65%	1076 90	2740872 00	MMTC Rate
		Dec-06	24123 340	-65%	1131 90	27305209 00	MMTC Rate
		Jan-07	4984 350	-65%	1131 90	5641786 00	MMTC Rate
	Total		**90984 850**			**99582509 00**	

4	Mysore Sales International						
		July-06	5754 250	-65%	1151 90	6628321 00	MMTC Rate
	Total		**5754 250**			**6628321 00**	
5	Pacific Enterprises	April-06	32 000	-65%	1080 60	34579 00	MMTC Rate
	Total		**32 000**			**34579 00**	
6	K Mark	April-06	1701 000	-65%	1080 60	1838101 00	MMTC Rate
	Total		**1701 000**			**1838101 00**	
7	Karishma Exports	Nov-06	6594 420	-65%	1046 90	6903698 00	MMTC Rate
	Total		**6594 420**			**6903698 00**	
8	**State Trading Corporation**						
		April-06	5287 090	+65%	1230 60	6506293 00	MMTC Rate
			25823 230	-65%	1080 60	27904582 00	MMTC Rate
		June-06	36237 690	-65%	1125 00	40767401 00	Tender Rate
		July-06	3750 760	-65%	1125 00	4219605 00	Tender Rate

		Nov-06	15172 890	-65%	1046 00	15884499 00	MMTC Rate
			14284 250	-65%	1131 90	16168343 00	MMTC Rate
		Dec-06	11596-690	-65%	1131 90	13126180 00	MMTC Rate
	Total		**112152.500**			**124576903.00**	
9	Rajamahal Silks	Sep-06	3670 610	-65%	1151 90	4228176 00	MMTC Rate
			16618 550	-65%	1076 90	17896516 00	MMTC Rate
		Oct-06	4263 950	-65%	1076 90	4591848 00	MMTC Rate
		Jan-07	22984 180	-65%	1131 90	26015793 00	MMTC Rate
	Total		**47537.290**			**52732333 00**	
10	Orient Goa Pvt Ltd	April-06	13830 170	-65%	1200 00	16596204 00	MMTC Rate
		May-06	6162 820	-65%	1200 00	7395384 00	MMTC Rate
		June-06	3474 570	-65%	1251 90	4002357 00	MMTC Rate
		July-06	2766 600	-65%	1151 90	3186847 00	MMTC Rate
		Oct-06	6489 560	-65%	1076 90	6988607 00	MMTC Rate

		Nov-06	11347 890	-65%	1076 90	1222543 00	MMTC Rate
			7552 380	-65%	1046 90	7906587 00	MMTC Rate
			1517 370	-65%	1131 90	1717511 00	MMTC Rate
		Dec-06	34713 750	-65%	1131 90	32992494 00	MMTC Rate
		Jan-07	14016 110	-65%	1131 90	15864835 00	MMTC Rate
	Total		**101871 220**			**97873369 00**	
11	V S Dempo	April-06	19819 830	-65%	1080 60	21417308 00	MMTC Rate
		May-06	11444 620	-65%	1130 60	12939287 00	MMTC Rate
	Total		31264 450			34356595 00	
12	Skanda Exports	April-06	3929 360	-65%	555 70	2183543 00	As per Court settlement which has been contested and no fresh supplies made at earlier rates

							inspite of contempt proceedings
	Total		**3929 360**			**2183543 00**	
13	S Pradeep Exports	May-06 June-06 July-06	10133 400 9852 790 143 600	-65% -65% -65%	555 70 555 70 555 70	5631130 00 5475195 00 79799 00	As per Court settlement which has been contested and no fresh supplies made at earlier rates inspite of contempt proceedings
	Total		**20129 790**			**11186124 00**	

14	Balabanu Enterprises Pvt Ltd	June-06 July-06	4911 230 83 840	-65% -65%	1130 60 1130 60	5552637 00 94790 00	MMTC Rate MMTC Rate
	Total		**4995 070**			**5647427 00**	
15	S S Exports	April-06	1712 000	-65%	1080 60	1849987 00	MMTC Rate
	Total		**1712 000**			**1849987 00**	
16	Kabini Minerals	April-06	310 520	-65%	1080 60	335548 00	MMTC Rate
	Total		**310.520**			**335548 00**	
17	MMTC-Bannihatti	June-06 July-06	14539 480	-65%	1302 00	18078534 00	MMTC Rate inclusive of Transport
	Total		**14539 480**			**18078534 00**	
II Jambunathanahalli Iron Ore Mine (JIOM-ML No 1659) **(a) Calibrated Ore under RCS Contract**							
	Kalyani Steels Ltd	Apr-06	3004 00	-65%	253 00	759902 00	Selling price fixed as per

							RCS agreement for the period from 3-5-2003 to 2-5-2006
(b) Fines							
	Orient Goa (P) Ltd ,	Apr-06	5296 00	+66%	1468 00	77741320 00	MMTC Rate
	Total		**8300.000**			**8534034 00**	
III Ubbalagundi Iron Ore Mine (UIOM-ML No. 995)							
(a) Lump ore under RCS Contract – Selling Price – Lumps – Rs 231/-							
	Shivashankar Granite P Ltd	Nov-06 Dec-06 Jan-07	120 000 2874 000 3303 000	-65% -65% -65%	231 00 231 00 231 00	22787 00 663924 00 762993 00	Price fixed as per RCS agreement valid for two

							years prices will be revised thereafter Fines however are being supplied at MMTC rates
	Total		**6297.00**			**1449704.00**	
(b) Fines							
	Shivashankar Granite P Ltd ,	Sept-06	2627 00	-65%	1055 00	2454590 00	MMTC Rate
		Oct-06	4361 000	-65%	1055 00	4601281 00	MMTC Rate
		Nov-06	5578 000	-65%	1055 00	5912793 00	MMTC Rate
		Jan-07	3417 000	-65%	1110 00	3792870 00	MMTC Rate
	Total		**15983.000**			**16761534.00**	

IV. Thimmappagudi Iron Ore Mines – TIOM ML No 2002 – Joint Venture with M/s JSWL M/s Vijayanagar Minerals Pvt Ltd.							
18	M/s VMPL	April-06	89304 018	Fines	10	893040 00	Premium is fixed by M/s VMPL the Joint Venture Company Efforts are being made to revise the premium rates on ad-valorem @ 6% and 10% for fines and calibrated ore
			20316 476	C-Ore	61	1239305 00	
		May-06	89245 227	Fines	10	892452 00	
			15966 140	C-Ore	61	973935 00	
		June-06	67812 383	Fines	10	678124 00	
			12258 708	C-Ore	61	747781 00	
		July-06	92855 346	Fines	10	928553 00	
			16841 640	C-Ore	61	1027340 00	
		Aug-06	94065 780	Fines	10	940658 00	
			15084 470	C-Ore	61	920153 00	
		Sep-06	92048 030	Fines	10	920480 00	
			12310 670	C-Ore	61	750951 00	
		Oct-06	90348 030	Fines	10	903480 00	
			13420 990	C-Ore	61	818668 00	

		Nov-06	95724 420	Fines	10	957244 00	respectively, as against the fixed premium being paid so far
			8001 390	C-Ore	61	488085 00	
		Dec-06	95390 769	Fines	10	953908 00	
			19364 381	C-Ore	61	1181227 00	
		Jan-07	66794 180	Fines	10	667942 00	
			6824 670	C-Ore	61	416305 00	
	Total		**1013977 718**			**17299631 00**	

Annexure-3 (L A Q No 1257)

Raising cum Sale Contract & Joint Venture

Sl No	Mines	Marketing Agency	Selling price PMT in Rs	Period	Remarks
1	Subbarayanahalli Iron Ore Mines (SIOM)	M/s Kalyani Steels Limited (KSL)	314/-	1-4-2005 to 31-3-2006	The validity period of selling price of Rs 314/- PMT was fixed for two year i e from 1-4-2005 to 31-3-2007, instead of one year as

					envisaged in the RCS agreement The discrepancy in this regard was made known to kalyani Steels Limited This is contested by M/s KSL and they are insisting the validity period of selling price of Rs 314/- up to 31-3-2007 Based on the legal opinion given by the Company Legal Advisor, action is being taken for withdrawal of the earlier letter of fixing the selling price for a period of two years

2	Jambunathana hallı Iron Ore Mınes (JIOM)	M/s Kalyanı Steels Lımıted (KSL)	250/-	3-5-2003 to 2-5-2006	The agreement was ınıtıally for a perıod of three years (3-5-2003 to 2-5-2006) and extendable for another five years Sınce, the sellıng prıce fixed was much less than the prevaılıng market prıce for calıbrated ore, company decıded not to extend the RCS contract for the further perıod Thıs was contested by M/s KSL, the marketıng agency The matter ıs before the Arbıtrator Because of the dıspute, the mıne ıs not ın operatıon sınce 2-5-2006

3	Ubbalagundı Iron Ore Mınes (UIOM)	M/s Shıva shankar Granıtes Lımıted (SGL)	231	1-4-2005 to 31-3-2007	The RCS agreement ıs ınıtıally for a perıod of five years and extendable for another three years The sellıng prıce of at Rs 231 PMT ıs firm for a perıod of two years The development of mıne was commenced on 1-4-2005, based on the workıng permıssıon granted by MOEF, GoI On the orders of the Hon'ble Supreme Court, bannıng mınıng operatıon on "workıng permıssıon"

					operation of mine was suspended during September 2005 The mine was in operation for a period of seven months After getting final clearance from MOEF, GOI, development of mine was restored The selling price at Rs 231/- was retained for the balance period of seventeen months
4	Thimmappanagudi Iron Ore mines (TIOM)	M/s Vijaya nagar Minerals Pvt Ltd , (VMPL)	Premium-6% Fines-10% C Ore (MMTC Price)	From 2000 – 2001	As per the MOU between MML and M/s JSW, the joint venture company M/s VMPL to pay premium at 6% and 10% of the

					prevailing MMTC price However, the JV company is paying Rs 10/- and Rs 61/- PMT respectively for fines and Cal ore MML has sent notices to M/s VMPL & JSW asking them to pay, besides revised premium as per the MOU realization from sale of cal ore at MMTC price, net present value (NPV), compensation towards Voluntary Retirement Scheme (VRS) M/s JSW has responded to the notice and paid

					Rs 484 16 lakhs towards VRS & NPV sofar Negotition Committee has been constituted to resolve the other issues Committee has also been constituted under the Chairmanship of Commissioner, Dept of Mines & Geology for finalization of share Holders Agreement

Sale Agreement

In view of unprecedented and abrupt increase in iron ore prices, MML has convinced the sale agreement holder M/s Orient Goa Pvt Limited, about the justification in upward revision of prices deviation from the agreed terms and conditions had in the agreement dated 4th July 2003, which is valid up to 3rd July

2008 The said agreement was entered, when there is recession in steel sector and demand for iron ore was very limited By upward revision of prices w e f 1-1-2004, for the iron ore fines already supplied, MML has realized an additional amount of Rs 190 00 lakhs

Further, M/s State Trading Corporation (STC) was the successful bidder through tender process for iron ore fines on 30th June 2005 at Rs 773/- PMT 90,000 Tonnes of iron ore fines was supplied accordingly during September 2005 and June, 2006 Now, MML has persuaded STC to purchase at the prevailing MMTC price (around Rs 1070/- PMT) Accordingly, around 40,000 MTs of iron ore fines were sold to M/s STC at the prevailing MMTC price By doing so, the Company has realized on additional amount of Rs 158 00 lakhs

Revision of prices of Iron Ore fines & Dumps

Company in its 259th Board Meeting held on 28th July 2006 tool a policy decision of fixint the selling price on par with the MMTC prevailing price (around Rs 1070/- PMT) and limps at the highest quoted tender rate of Rs 175/- PMT This was made applicable to all the buyers from whom MML has received the payment in advance and committed to supply the material at lesser price of around Rs 100/- to Rs 675/- PMT in case of fins and for dumps at Rs 25/- to Rs 135/- PMT

Now, except under RCS & Joint Venture agreement, the Company has uniform price structure for selling of iron ore, fines and dumps to the buyers

ಶ್ರೀ ಡಿ ಆರ್ ಪಾಟೀಲ್ ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯ ಮಂತ್ರಿಗಳು ಉತ್ತರವನ್ನು ಕೊಟ್ಟಿದ್ದಾರೆ MMTC rate ಒಂದು ಟನ್‌ಗೆ 1075 and 1350 ರೂಪಾಯಿಗಳಿದ್ದಾಗ 314 ಮತ್ತು 283 ರೂಪಾಯಿಯಂತೆ ಒಂದು ಟನ್‌ಗೆ ಕಲ್ಯಾಣಿ ಮತ್ತು ಮುಕುಂದ್ ಸ್ಟೀಲ್ಸ್‌ನವರಿಗೆ ನಾವು ಇವತ್ತಿನವರೆಗೂ ಸರಬರಾಜು ಮಾಡುತ್ತಿದ್ದೇವೆ, ಏಕೆ? ಇವತ್ತಿನದಿವಸ MMTC rate 1100, 1200, 1300 ರೂಪಾಯಿಗಳಷ್ಟಿದೆ ಆದರೆ, ಅವರಿಗೆ ಮಾತ್ರ ಒಂದು ಟನ್‌ಗೆ 314 ಮತ್ತು 283 ರೂಪಾಯಿಗಳಂತೆ ಇವತ್ತಿಗೂ ಸರಬರಾಜು ಮಾಡುತ್ತಿದ್ದೇವೆ ಇದು ಮಾನ್ಯ ಮುಖ್ಯಮಂತ್ರಿಯವರ ಗಮನಕ್ಕೆ ಬರುತ್ತದೆಯೋ ಅಥವಾ ಇಲ್ಲವೋ ಗೊತ್ತಿಲ್ಲ ಕಂಪನಿ ಲೆವೆಲ್‌ನಲ್ಲಿ ಏನೇನೋ ಅಗ್ರಿಮೆಂಟ್ ಆಗುತ್ತಿವೆ ಈ ರೀತಿಯಾಗಿ ಎಲ್ಲಾ ಕಡೆ ಮೋಸವಾಗಿ ಸರ್ಕಾರದ ಸಂಸ್ಥೆಗೆ ಸಾಕಷ್ಟು ಲುಕ್ಸಾನಾಗುತ್ತಿದೆ ಈ ರೀತಿ ಏತಕ್ಕೆ ಆಗುತ್ತಿದೆ ಮತ್ತೆ ಇದನ್ನು ಬಂದ್ ಮಾಡುವುದಕ್ಕೆ ಏತಕ್ಕೆ ಆಗುತ್ತಿಲ್ಲ Government of Indiaಗೆ ಸಂಬಂಧಪಟ್ಟಂತಹ State Trading Corporation ನಲ್ಲಿಯೂ ಕೂಡ ಒಪ್ಪಂದ ಮಾಡಿಕೊಂಡಿರತಕ್ಕಂಥದನ್ನು ಕ್ಯಾನ್ಸಲ್ ಮಾಡಿ ಅಲ್ಲಿ ರೇಟ್ ಜಾಸ್ತಿ ಮಾಡಿದ್ದಾರೆ That is a Government of India Company It is a Government owned Company, not a private company Private company ಯವರಿಗೆ ರೇಟ್ ಜಾಸ್ತಿ ಮಾಡುವುದಕ್ಕೋಸ್ಕರ ಬಹಳ ತೊಂದರೆ ಇದೆ Government company ಗೆ they could persuade them, agreement ಪ್ರಕಾರ ಇದ್ದಂಥ ರೇಟ್ ಅನ್ನು ಕಡಿಮೆ ಮಾಡಿ ಅಂದರೆ, ರೇಟ್ ಅನ್ನು ರಿವೈಸ್ಡ್ ಮಾಡಿ Higher rateಗೆ Government of India Company ಅವರನ್ನು ಒಪ್ಪಿಸಿದ್ದಾರೆ ಕಲ್ಯಾಣಿ ಮತ್ತು ಇತರೇ ಕಂಪನಿಗಳು ಖಾಸಗಿ ಕಂಪನಿಯಾಗಿರುವುದರಿಂದ ಇವರನ್ನು ಒಪ್ಪಿಸುವುದಕ್ಕೆ MMLನವರಿಗೆ ಏಕೆ ಸಾಧ್ಯವಾಗಿಲ್ಲ ?

ಶ್ರೀ ಹೆಚ್ ಡಿ ಕುಮಾರಸ್ವಾಮಿ ಮಾನ್ಯ ಅಧ್ಯಕ್ಷರೆ, ಕಲ್ಯಾಣಿ ಸಂಸ್ಥೆಗೆ ಹಣವನ್ನು ನಿಗದಿ ಮಾಡಿರತಕ್ಕಂಥದರ ಬಗ್ಗೆ ಮಾನ್ಯ ಸದಸ್ಯರು ಇಲ್ಲಿ ಪ್ರಸ್ತಾಪ ಮಾಡಿದ್ದಾರೆ ನಮ್ಮ ಸರ್ಕಾರ ಬರುವುದಕ್ಕಿಂಥ ಮುಂಚಿತವಾಗಿಯೇ ಬೆಲೆ ನಿಗದಿಯಾಗಿರತಕ್ಕಂಥ ತೀರ್ಮಾನಗಳು ಇದಾಗಿವೆ ಆದರೆ, ಇದು ನಮ್ಮ ಗಮನಕ್ಕೆ ಬಂದ ನಂತರ, ಒಂದು ಸಂಸ್ಥೆಗೆ ಸೇರಿದಂಥ ಜಂಬುನಾಥನ

ಹಳ್ಳಿಯ ವ್ಯಾಪ್ತಿಗೆ ಬರತಕ್ಕಂಥ ಒಂದು ಜಾಗದಲ್ಲಿ ನಾವು ಈಗಾಗಲೇ ಕೆಲಸವನ್ನು ನಿಲ್ಲಿಸಿದ್ದೇವೆ ಆದರೆ, ಅವರು ಕೋರ್ಟ್ ಮುಂದೆ ಹೋಗಿದ್ದಾರೆ MMTC ಏನೊಂದು ರೇಟ್‌ನ್ನು ನಿಗದಿ ಮಾಡಿದೆಯೋ, ಅದಕ್ಕಿಂಥ ಕಡಿಮೆ ಇದ್ದಂಥವುಗಳ ಮೇಲೆ ಈಗಾಗಲೇ ನಾವು ಕ್ರಮ ತೆಗೆದುಕೊಂಡಿದ್ದು, ನಮ್ಮ ಸರ್ಕಾರ ಬಂದ ನಂತರ ಇವತ್ತಿನ ದಿವಸ MMTC ರೇಟ್ ಪ್ರಕಾರ ಕೊಡಲು ಈಗಾಗಲೇ ಕ್ರಮವನ್ನು ತೆಗೆದುಕೊಂಡಿದೆ ಆದುದರಿಂದ ನಮ್ಮ ಸರ್ಕಾರ ಬಂದ ನಂತರ MMTC ಬೆಲೆ ಏನು ನಿಗದಿಯಾಗಿದೆಯೋ ಅದಕ್ಕಿಂಥ ಕಡಿಮೆ ದರದಲ್ಲಿ ಕೊಡುವುದಕ್ಕೆ ನಮ್ಮ ಸರ್ಕಾರ ಅವಕಾಶವನ್ನು ಕೊಟ್ಟಿಲ್ಲವೆಂದು ಮಾನ್ಯ ಸದಸ್ಯರ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ

ಶ್ರೀ ಡಿ ಆರ್ ಪಾಟೀಲ್ ಸನ್ಮಾನ್ಯ ಮುಖ್ಯಮಂತ್ರಿಗಳು ನಮ್ಮ ಸರ್ಕಾರ ಮತ್ತು ಹಿಂದಿನ ಸರ್ಕಾರವೆಂದು ದಯವಿಟ್ಟು differentiate ಮಾಡಬೇಡಿ ಈ ವಿಷಯ ಹಿಂದಿನ ಮುಖ್ಯಮಂತ್ರಿಗಳ ಗಮನಕ್ಕೂ ಸಹ ಬಂದಿರುವುದಿಲ್ಲ ಮತ್ತೆ ಇದು ನಿಮ್ಮ ಗಮನಕ್ಕೂ ಸಹ ಬಂದಿರುವುದಿಲ್ಲ ಆಫಿಸರ್ಸ್ ಈ ಅಗ್ರಿಮೆಂಟ್ ಮಾಡಿಕೊಳ್ಳುವ ಮುನ್ನಾ ಸರ್ಕಾರದ ಸಂಸ್ಥೆಯ ಹಿತಾಸಕ್ತಿಯನ್ನು ಸೇಫ್‌ಗಾರ್ಡ್ ಮಾಡುವ ಬದಲು ಆ ಖಾಸಗಿ ಸಂಸ್ಥೆಯವರ ಹಿತಾಸಕ್ತಿಯನ್ನು ಸೇಫ್‌ಗಾರ್ಡ್ ಮಾಡುವ ಹಾಗೆ ಅಗ್ರಿಮೆಂಟ್ ಅನ್ನು ಏಕೆ ಮಾಡಿಕೊಳ್ಳುತ್ತಾರೆ? ಟರ್ಮ್ಸ್ ಆಫ್ ಅಗ್ರಿಮೆಂಟ್ ಗೊತ್ತಾಗುತ್ತದಲ್ಲವೆ ನಮಗೆ ನಿಮಗೆ ಇಂಗ್ಲಿಷ್ ತಿಳಿಯುತ್ತದೆಯೋ ಅದಕ್ಕಿಂಥ ಚೆನ್ನಾಗಿ ಅವರಿಗೆ ಇಂಗ್ಲಿಷ್ ತಿಳಿಯುತ್ತದೆ ಆದರೂ ಅವರಿಗೆ ಫೇವರಬಲ್ ಆಗುವಂತೆ ಅಗ್ರಿಮೆಂಟ್ ಏಕೆ ಆಗುತ್ತದೆ ? ಅವರ ಹತ್ತಿರ terms of agreement ಬಗ್ಗೆ ಒಪ್ಪಂದ ಮಾಡಿಕೊಳ್ಳುವ ಪೂರ್ವದಲ್ಲಿ ನಮ್ಮ ಕಂಪನಿಯ ಲಾ ಆಫಿಸರ್ ಆಗಲಿ ಅಥವಾ ಕಾನೂನು ಇಲಾಖೆಯವರ ಕನ್ಸ್‌ಲ್‌ಟೇಶನ್ ಆಯಿತೋ ಅಥವಾ ಇಲ್ಲವೋ? ನಿಮ್ಮ agreement copy ಅನ್ನು ಎನ್‌ಕ್ಲೋಸ್ ಮಾಡಿ ಎಂದು ಹೇಳಿದ್ದೆ ಆದರೆ, ಅಗ್ರಿಮೆಂಟ್ ಕಾಪಿಯನ್ನು ಕೊಟ್ಟಿಲ್ಲ ಆಮೇಲೆ ಅಗ್ರಿಮೆಂಟ್ ಕಾಪಿಯನ್ನು ಕಳುಹಿಸಿ ಕೊಡಿ ಆದರೆ, ಈ ರೀತಿ ಏಕೆ ಆಗುತ್ತದೆ? ನೀವೇ ಕೊಟ್ಟಿರುವ ಉತ್ತರದಲ್ಲಿ ಏನಿದೆ ಎಂಬುದನ್ನು ನಿಮ್ಮ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ M/S State Trading Corporation was the successful bidder through

tender process for iron ore fines on 30th June 2005 at Rs 773/- PMT 90,000 Tonnes of iron fines was supplied accordingly during September 2005 and June 2006 Now, MML has persuaded State Trading Corporation to purchase at the prevailing MMTC price (around Rs 1070/- PMT) Accordingly, around 40,000 MTS of iron ore fines were sold to M/S STC at the prevailing MMTC price ಸರ್ಕಾರಿ ಸಂಸ್ಥೆಯನ್ನು persuade ಮಾಡಿ, ಹೆಚ್ಚಿನ ರೇಟ್‌ಗೆ ಮಾರಾಟ ಮಾಡುವುದಕ್ಕೆ MML ಗೆ ಬರುತ್ತದೆ ಖಾಸಗಿ ಸಂಸ್ಥೆಗಳನ್ನು persuade ಮಾಡಿ ರೇಟ್ ಹೆಚ್ಚು ಮಾಡುವುದಕ್ಕೆ ಬರುವುದಿಲ್ಲ ಇದರ ಅರ್ಥ ಏನು ಎಂಬುದನ್ನು ಮಾನ್ಯ ಮುಖ್ಯಮಂತ್ರಿಯವರು ಹೇಳಬೇಕು ಇದು ನಿಮಗೂ ಕೂಡ ಏಕೆ ಗೊತ್ತಾಗುವುದಿಲ್ಲ ?

ಶ್ರೀ ಹೆಚ್ ಡಿ ಕುಮಾರಸ್ವಾಮಿ ಮಾನ್ಯ ಅಧ್ಯಕ್ಷರೇ, ಖಾಸಗಿ ಸಂಸ್ಥೆಗಳನ್ನು ಒಪ್ಪಿಸಲು ಸರ್ಕಾರ ಏತಕ್ಕಾಗಿ ಕ್ರಮ ತೆಗೆದುಕೊಳ್ಳುತ್ತಿಲ್ಲವೆಂದು ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ ಇದಕ್ಕೆ ನನ್ನ ಸಹಮತವನ್ನು ವ್ಯಕ್ತಪಡಿಸುವುದಕ್ಕೆ ಬಯಸುತ್ತೇನೆ MMTC ಬೆಲೆಗಿಂಧ ಕಡಿಮೆ ಕೊಟ್ಟಿರತಕ್ಕಂಧದರಲ್ಲಿ ಸರ್ಕಾರಿ ಅಧಿಕಾರಿಗಳು ಕೋರ್ಟ್‌ಗೆ ಹೋಗಿ ಅಫಿಡವಿಟ್ ಹಾಕಿರತಕ್ಕಂಧದ್ದು ಇದೆ ಇದು ಹಿಂದೆ ನಡೆದಿರತಕ್ಕಂಧದ್ದು, ಇದರ ಬಗ್ಗೆ ನಾನು ದೋಷ ಮಾಡುವುದಕ್ಕೆ ಹೋಗುವುದಿಲ್ಲ ಸದನದಲ್ಲಿ ಈ ಒಂದು ಇಲಾಖೆಗೆ ಸಂಬಂಧಪಟ್ಟಂತೆ ಸುಧೀರ್ಘವಾಗಿ ಚರ್ಚೆಗಳು ನಡೆದಿವೆ ನನ್ನ ಅಧಿಕಾರವಧಿಯಲ್ಲಿ, ನನ್ನ ಗಮನಕ್ಕೆ ಈ ವಿಷಯ ಬಂದ ಮೇಲೆ ಈಗಾಗಲೇ ಕ್ರಮವನ್ನು ತೆಗೆದುಕೊಂಡಿದ್ದೇವೆ ಹಿಂದೆ ಆಗಿರತಕ್ಕಂಧ ವಿಷಯಗಳನ್ನು ಸರಿಪಡಿಸಲು ನಮ್ಮ ಸರ್ಕಾರ ಈಗಾಗಲೇ ಕ್ರಮವನ್ನು ತೆಗೆದುಕೊಂಡು, MMTC ಬೆಲೆಗಿಂಧ ಕಡಿಮೆ ಕೊಡತಕ್ಕಂಧ ಒಂದು ಸನ್ನಿವೇಶ ಏನಿತ್ತು ಅದನ್ನು ಸಂಪೂರ್ಣವಾಗಿ ನಿಲ್ಲಿಸಿ, ಇವತ್ತು MMTC ಬೆಲೆಗೆ ನಿಗದಿ ಮಾಡುವುದಕ್ಕೆ ನಾವು ಕ್ರಮ ತೆಗೆದುಕೊಂಡಿದ್ದೇವೆ ಒಂದು ವರ್ಷಕ್ಕೆ ಗುತ್ತಿಗೆಯನ್ನು ನಿಗದಿ ಮಾಡತಕ್ಕಂಧ ಸಂದರ್ಭ ಇದ್ದಾಗ ಹಿಂದೆ ಎರಡು ವರ್ಷಕ್ಕೊಂದು ಏನು ನಿಗದಿ ಮಾಡಿರತಕ್ಕಂಧ ವಿಷಯಗಳ ಬಗ್ಗೆ ನಾವು

ಈಗಾಗಲೇ ಕ್ರಮವನ್ನು ತೆಗೆದುಕೊಂಡಿದ್ದೇವೆ ಇವತ್ತಿನ ದಿವಸ ಸರ್ಕಾರಕ್ಕೆ ಯಾವುದೇ ರೀತಿಯ ನಷ್ಟ ಉಂಟಾಗದಂತೆ ಕ್ರಮವನ್ನು ನಾವು ತೆಗೆದುಕೊಂಡಿದ್ದೇವೆ ಹಿಂದೆ ಆಗಿರುವುದರಲ್ಲಿ ಅಧಿಕಾರಿಗಳು ಏನು ತಪ್ಪು ಮಾಡಿದ್ದಾರೆಯೋ ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಸರ್ಕಾರ ಈಗಾಗಲೇ ಅಧಿಕಾರಿಗಳಿಗೆ ಸೂಚನೆ ಕೊಟ್ಟಿದೆ

ಶ್ರೀ ಕೆ ಆರ್ ರಮೇಶ್‌ಕುಮಾರ್ ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯ ಮಂತ್ರಿಗಳು ಈ ವಿಚಾರದಲ್ಲಿ ಬಹಳ controversial ವ್ಯಕ್ತಿಯಾಗಿದ್ದಾರೆ He has taken a lead ಅವರು ಧೈರ್ಯವಾಗಿ ತೆಗೆದುಕೊಂಡಿರತಕ್ಕಂಥ ನಿಲುವಿಗೆ ನಾವೆಲ್ಲಾ ಅವರನ್ನು ಅಭಿನಂದಿಸುತ್ತೇವೆ ನಿಷ್ಠುರವಾದಂಥ ನಿಲುವನ್ನು ತೆಗೆದುಕೊಂಡಿರುವ ಕಾರಣಕ್ಕಾಗಿ ನನ್ನ ಮೇಲೆ ಆಪಾಧನೆ ಬಂದಿದೆ ಎಂದು ಅವರು ತಮ್ಮ ನೋವನ್ನು ವ್ಯಕ್ತಪಡಿಸಿದ್ದಾರೆ ಹೇಗಾದರೂ ಅಂಥ ನಿಷ್ಠುರವಾದಂಥ ನಿಲುವನ್ನು ತೆಗೆದುಕೊಂಡಿದ್ದೀರಿ ಆದರೆ, ನೀವು ಈಗ ಜಾರಿಕೆ ಉತ್ತರವನ್ನು ಕೊಡುತ್ತಿದ್ದೀರಿ ನಿಗದಿತವಾದಂಥ ಉತ್ತರವನ್ನು ನೀವು ಕೊಡಲಿಲ್ಲ ಸ್ಪೆಸಿಫಿಕ್ ಆದಂಥ ಪ್ರಶ್ನೆ ಇಲ್ಲಿದೆ ಅದೇನೆಂದರೆ, MMTC ರವರು ವಿವಿಧವಾದಂಥ qualities ಗೆ ಏನು ರೇಟ್ ಫಿಕ್ಸ್ ಮಾಡಿದ್ದಾರೆ ಮತ್ತೆ MML ರವರು ಯಾವ ರೇಟ್‌ಗೆ ಮಾರಾಟ ಮಾಡಿದ್ದಾರೆ? ಅವರು ಕಡಿಮೆ ಅಥವಾ ಜಾಸ್ತಿ ರೇಟ್‌ಗೆ ಮಾರಾಟ ಮಾಡಿದ್ದಾರೆಯೇ? ಕಡಿಮೆ ದರದಲ್ಲಿ ಮಾರಾಟ ಮಾಡಿದರೆ ದ್ರೋಹವಾಗುತ್ತದೆ ತಾವು ಹಿಂದಿನ ಸರ್ಕಾರದ ಬಗ್ಗೆ ಹೇಳುತ್ತಿದ್ದೀರಿ ಆದರೆ, ಸರ್ಕಾರ ಎನ್ನತಕ್ಕಂಥದ್ದು ನಿರಂತರ, ಅವತ್ತು ಯಾರಿದ್ದರು ಅಥವಾ ಇವತ್ತು ಯಾರಿದ್ದಾರೆ ಮತ್ತು ಮುಂದೆ ಯಾರು ಬರುತ್ತಾರೆ ಎನ್ನತಕ್ಕಂಥದ್ದು ನಮಗೆ ಗೊತ್ತಿಲ್ಲ ನಾವು ಮಾನ್ಯ ಅಧ್ಯಕ್ಷರ ಮುಖಾಂತರ ಸರ್ಕಾರವನ್ನು ಕೇಳುತ್ತಿದ್ದೇವಷ್ಟೆ ಸರ್ಕಾರದ ಖಜಾನೆಗೆ ಬರಬೇಕಾಗಿರತಕ್ಕಂಥ ಹಣ ಉದ್ದೇಶ ಪೂರ್ವಕವಾಗಿ ಕಡಿಮೆಯಾದರೆ ಸಂಬಂಧಪಟ್ಟವರ ಮೇಲೆ ಕ್ರಮ ಜರುಗಿಸಿದ್ದೇವೆಂದರೆ ತಾವು ಯಾರನ್ನಾದರೂ ಜೈಲಿಗೆ ಕಳುಹಿಸಿದ್ದೀರಾ? Dismiss ಮಾಡಿರುತ್ತೀರಾ? Criminal case ಹಾಕಿರುತ್ತೀರಾ? ಎಷ್ಟು ಜನರ ಮೇಲೆ ಹಾಕಿರುತ್ತೀರಿ? ಯಾವ ಆಫೀಸರ್ಸ್ ಮೇಲೆ, ನೀವು ಕೇಸ್ ಹಾಕದಿದ್ದರೆ ನೀವು ಹೇಳತಕ್ಕಂಥ ಮಾತಿನಲ್ಲಿ ನಿಮಗೆ ನಂಬಿಕೆ ಇಲ್ಲ ಸುಮ್ಮನೆ ಪ್ರಚಾರಕ್ಕಾಗಿ ಹೇಳುತ್ತಿದ್ದೀರಿ

ಇಲ್ಲದಿದ್ದರೆ 8 ರಿಂದ 10 ದಿವಸದೊಳಗಾಗಿ ಇವರು ಯಾರ್ಯಾರಿದ್ದಾರೆ, ಹಿಂದೆ ಮತ್ತು ಮುಂದೆ, ನಮಗೆ ಅವತ್ತು ಮತ್ತು ಇವತ್ತು ಯಾರೂ ಬೇಕಾದವರು ಇಲ್ಲ ಅವರೆಲ್ಲರ ಮೇಲೆ criminal case ನ್ನು ಹಾಕಿಸಿ immediate ಆಗಿ arrest ಮಾಡಿಸುತ್ತೇವೆ, judicial custody ಗೆ ಕಳುಹಿಸುತ್ತೇವೆ ಎಂದು ನೀವು ಹೇಳಬೇಕು ಅದರ ಮೇಲೆ ಅವರು ಬೇಲ್ ತೆಗೆದುಕೊಳ್ಳುವುದು ಇನ್ನೊಂದು ಮಾಡುವುದು ಅವರ ಹಣೇಬರಹ ನೀವು ಸ್ಪಷ್ಟವಾಗಿ ಹೇಳಬೇಕಾಗುತ್ತದೆ ಏಕೆಂದರೆ, you have taken a stand The whole Country is watching you ನಿಮ್ಮ ಮೇಲೆ ಜವಾಬ್ದಾರಿ ಇದೆ ನೀವು ಕ್ರಮ ಜರುಗಿಸುತ್ತೇವೆ, ನೋಡುತ್ತೇವೆ, ವಿಚಾರಿಸುತ್ತೇವೆಂದು ಹೇಳಿದರೆ ಸಮಾಧಾನವಾಗುವುದಿಲ್ಲ ನಿಮ್ಮ ಅಭಿಮಾನಿಯಾಗಿ ನಿಮಗೆ ಹೆಚ್ಚು ಗೌರವ ಬರಬೇಕೆಂದು ಹೇಳಿ ಈ ಸಜೆಷನ್ ಕೊಡುತ್ತಿದ್ದೇನೆ

ಶ್ರೀ ಹೆಚ್ ಡಿ ಕುಮಾರಸ್ವಾಮಿ ಅಧ್ಯಕ್ಷರೇ, MMTC ಯ Chief General Manager ಅವರನ್ನು suspention ನಲ್ಲಿಟ್ಟಿದ್ದೇವೆ ನಮ್ಮ ಮಾನ್ಯ ಡಿ ಆರ್ ಪಾಟೀಲ್‌ರು ಕೇಳಿರತಕ್ಕಂಥ ಅವರ ಪ್ರಶ್ನೆಗೆ ಉತ್ತರವನ್ನು ಒದಗಿಸಿ ಕೊಟ್ಟಿದ್ದೇನೆ ಈಗ ಕಾನೂನಿನ ಚೌಕಟ್ಟಿನಲ್ಲಿ ಕ್ರಮ ತೆಗೆದುಕೊಳ್ಳುವುದಕ್ಕೆ ಹಿಂದೆ ಬೀಳತಕ್ಕಂಥ ಪ್ರಶ್ನೆ ಇಲ್ಲ ಇದರಲ್ಲಿ ಯಾರನ್ನು safeguard ಮಾಡತಕ್ಕಂಥ ಪ್ರಶ್ನೆ ಇಲ್ಲ, ಈ ಬಗ್ಗೆ ಸರ್ಕಾರ ಕರಿಣವಾದ ಕ್ರಮವನ್ನು ತೆಗೆದುಕೊಳ್ಳುತ್ತದೆ

ಶ್ರೀ ಡಿ ಆರ್ ಪಾಟೀಲ್ ತಾವು ಉತ್ತರವನ್ನು ಕೊಟ್ಟಿರುತ್ತೀರಿ The validity period of selling price of Rs 314 per M T was fixed for two years i e from 01 04 2005 to 31 03 2007, instead of one year as envisaged in the RCS agreement. ನಿಮ್ಮ agreement ಪ್ರತಿವರ್ಷ ರಿವೈಸ್ ಮಾಡಬೇಕೆಂದು ಇದೆ ಆದರೂ ಎರಡು ವರ್ಷಕ್ಕೆ ಫಿಕ್ಸ್ ಮಾಡಿದ್ದಾರೆ, ಇವತ್ತಿಗೂ 314 ರೂಗಳಂತೆ ಸಪ್ಲೈ ಮಾಡುತ್ತಿದ್ದಾರೆ ಅದನ್ನು immediate ನಿಲ್ಲಿಸುವುದಕ್ಕೆ ಏನು ತೊಂದರೆ ಇವು terms of agreement, ನಿಮಗೆ ನಮಗೆ ತಿಳಿಯಲಾರದಂತೆ ಈ ಎಲ್ಲಾ ವ್ಯವಸ್ಥೆ ನಡೆದಿರುತ್ತದೆ ಸರ್ಕಾರಿ ಕಂಪನಿಗೆ ನಾವು ಹೆಚ್ಚು ಮಾಡುತ್ತೇವೆ ಖಾಸಗೀ ಕಂಪನಿಗೆ ಹೆಚ್ಚುಮಾಡುವುದಕ್ಕೆ we plead our inability ಏಕೆ?

ಅದಕ್ಕೆ ನಾನು ಈ RCS agreement copy ಬೇಕು ಎಂದು ಕೇಳಿದ್ದು Agreement ನಲ್ಲಿ ಪ್ರತಿವರ್ಷ ರಿವೈಸ್ ಮಾಡಬೇಕೆಂದು ಇದೆ ಎರಡನೇ ವರ್ಷಕ್ಕೆ continue ಮಾಡಿದ್ದೀರಿ ನೀವೇ ಏಕೆ ಸಪ್ಲೈ ಬಂದು ಮಾಡುವುದಿಲ್ಲ ಬೇಕಾದರೆ ಅವರು ಕೋರ್ಟಿಗೆ ಹೋಗಲಿ

ಶ್ರೀ ಹೆಚ್ ಡಿ ಕುಮಾರಸ್ವಾಮಿ ಮಾನ್ಯ ಅಧ್ಯಕರೇ, 1-4-2005 ರಂದು ಎರಡು ವರ್ಷಕ್ಕೆ ಏನು ಕಂಟ್ರಾಕ್ಟ್‌ನ್ನು ಕೊಟ್ಟಿದ್ದಾರೆ ಪ್ರತಿ ವರ್ಷಕ್ಕೆ ಕಂಟ್ರಾಕ್ಟ್‌ನ್ನು ಏನು ರಿವೈಸ್ ಮಾಡುವುದು ಇದೆ, ಆ ಸಂದರ್ಭದಲ್ಲಿ ಅದನ್ನು ಎರಡು ವರ್ಷಕ್ಕೆ ಎಂದು ಏನು ತೀರ್ಮಾನವಾಗಿದೆ, ಈಗಾಗಲೇ ಅವರಿಗೆ ವಿಧಡ್ರಾ ಲೇಟರ್‌ನ್ನು ನಾವು ಕಳುಹಿಸಿರುತ್ತೇವೆ ಮತ್ತು ಅದರ ಮೇಲೆ ಕ್ರಮವನ್ನು ತೆಗೆದುಕೊಂಡಿರುತ್ತೇವೆ ಅದನ್ನು cancel ಮಾಡುತ್ತೇವೆ ಎನ್ನುವುದನ್ನು ಅವರಿಗೆ ನಾನು ತಿಳಿಸಲಿಕ್ಕೆ ಬಯಸುತ್ತೇನೆ

ಅಧ್ಯಕ್ಷರು ಮುಂದಿನ ಪ್ರಶ್ನೆಗೆ ಹೊಗೋಣ

ಶ್ರೀ ಡಿ ಆರ್ ಪಾಟೀಲ್ ಇಲ್ಲದಿದ್ದರೆ ನೀವು ಇದರ ಮೇಲೆ ಅರ್ಧಗಂಟೆ ಕಾಲಾವಕಾಶಕ್ಕೆ ಅನುಮತಿಯನ್ನು ಕೊಡಬೇಕು

ಅಧ್ಯಕ್ಷರು ಏನಾಗಿದೆ ಎಂದರೆ, ಎಲ್ಲ ಪ್ರಶ್ನೆಗೂ ಅರ್ಧಗಂಟೆ ಚರ್ಚೆಗೆ ಕೇಳಿದರೆ, ಕೆಲವೆಲ್ಲಾ ಕೊಟ್ಟಿದ್ದೇವೆ ಅವೆಲ್ಲಾ ರೀಚ್ ಆಗುತ್ತಿಲ್ಲ

ಶ್ರೀ ಕೆ ಆರ್ ರಮೇಶ್‌ಕುಮಾರ್ ಇದು ಇಡೀ ರಾಜ್ಯದ ಗಮನವನ್ನು ಸೆಳೆಯುವಂಥ ವಿಚಾರ ಮಾನ್ಯ ಮುಖ್ಯಮಂತ್ರಿಗಳು ಸ್ಪಷ್ಟವಾದ ನಿಗದಿತವಾದ ಉತ್ತರವನ್ನು ಹೇಳಲಿಲ್ಲ ಆಕಾಶದಷ್ಟು ಜವಾಬ್ದಾರಿ ಅವರ ಮೇಲೆ ಇತ್ತು ಅವರು ಮಾಡಿದ ಹೇಳಿಕೆಗಳಿಗೆ ಅವರು ಮಾಡಿದಂಥ declarations ಗೆ ಕೇಳಿರುವ ಪ್ರಶ್ನೆಗೆ ಇವತ್ತು ಅವರು ಕೊಟ್ಟಂಥ ಉತ್ತರಕ್ಕೆ ನಾವು ಸಾರ್ವಜನಿಕರ ವಿವೇಚನೆಗೆ ಬಿಡುತ್ತೇವೆ ಯಾರ್ಯಾರು ಎಷ್ಟಕ್ಕೆ ಬದ್ಧರಾಗಿದ್ದಾರೆಂದು ಹೇಳಿ It is unfortunate ನಮಗೆ ನೋವಾಗುತ್ತದೆ ಏಕೆ ಅವರು ಮೆತ್ತಗಾಗಿದ್ದಾರೂ ನಮಗೆ ಗೊತ್ತಾಗುತ್ತಿಲ್ಲ ನಾನು ಅಂದುಕೊಂಡೆ, ನಾವು ಅವರನ್ನು ಈ ಪ್ರಶ್ನೆಯನ್ನು ಕೇಳುವುದರ ಮುಖಾಂತರ ಅವರು ಉಗ್ರಾವತಾರದಲ್ಲಿ ಇವತ್ತು ಈಚೆಗೆ ಬರುತ್ತಾರೆ, ಏನೋ ಒಂದು ಒಳ್ಳೆಯದಾಗುತ್ತದೆಂದು ನಾವು ನಿರೀಕ್ಷೆಯನ್ನು ಮಾಡಿದ್ದೆವು, ಆದರೆ ಮೆತ್ತಗಾಗಿ ಬಿಟ್ಟಿದ್ದಾರೆ ಅದು ಇವರನ್ನು ಮೆತ್ತಗೆ ಮಾಡಿದಂತೆ ಕಾಣುತ್ತದೆ

ಶ್ರೀ ಹೆಚ್ ಡಿ ಕುಮಾರಸ್ವಾಮಿ ಅಧ್ಯಕ್ಷರೆ, ಇದರಲ್ಲಿ ಮೆತ್ತಗಾಗುವಂಥ ಪ್ರಶ್ನೆ ಏನು ಇಲ್ಲ ಈ ದೇಶದ ಕಾನೂನು ವ್ಯವಸ್ಥೆಯೊಳಗೆ 50 ವರ್ಷದಲ್ಲಿ ಯಾರಿಗೆ ಏನು ಶಿಕ್ಷೆಯನ್ನು ಕೊಟ್ಟಿದ್ದೀರಿ, ಇಂತಹ ಕೆಲಸವನ್ನು ಮಾಡತಕ್ಕಂಥ ಸಂದರ್ಭದಲ್ಲಿ ಯಾವ ಸರ್ಕಾರಗಳು ಏನು ಮಾಡಲಿಲ್ಲ

ಶ್ರೀ ಕೆ ಆರ್ ರಮೇಶ್‌ಕುಮಾರ್ ಹಿಂದೆ ಇರುವ ಸರ್ಕಾರಗಳು ಮಾಡಲಿಲ್ಲವೆಂದು ಹೇಳಿ, ಮೊದಲನೇ ಭಾರಿಗೆ ನೀವು ಅಧಿಕಾರಕ್ಕೆ ಬಂದವರು, ನಿಮಗೆ ಏಕೆ ಅಧಿಕಾರವನ್ನು ಕೊಟ್ಟಿದ್ದು ಎಂದರೆ, ಅವರೆಲ್ಲಾ ಅವಿವೇಕಿಗಳು ಮಾಡುವುದಕ್ಕಾಗಲಿಲ್ಲ ನೀವಾದರೆ ಹೊಸ ಪ್ರಯೋಗವನ್ನು ಮಾಡುತ್ತೀರಿ, ಕ್ಷಿಪ್ರ ಕ್ರಾಂತಿಯನ್ನೆ ಮಾಡಿ ಬಿಡುತ್ತೀರಿ, ಎಲ್ಲವನ್ನು ರಾತ್ರೋ ರಾತ್ರಿ ಸುಧಾರಿಸುತ್ತೀರಿ ಎಂದು ಹೇಳಿ ವಿಶ್ವಾಸವನ್ನು ಇಟ್ಟು ನಿಮಗೆ ಜವಾಬ್ದಾರಿಯನ್ನು ಕೊಟ್ಟಿರುವುದು ನೀವು ಅವರಂತೆ ಮಾಡುವುದಾದರೆ ಏನು ಪ್ರಯೋಜನ, ವ್ಯತ್ಯಾಸವೇನಾಯಿತು ದಯಮಾಡಿ ಹೇಳಿ, ನಮಗೆ ನಿರಾಶೆಯಾಯಿತು ಅಲ್ಲವೆ? ನಿಮ್ಮ ಮೇಲೆ ನಾವು ಎಷ್ಟು ಆಶೆಯನ್ನು ಇಟ್ಟುಕೊಂಡಿದ್ದೆವು

ಶ್ರೀ ಹೆಚ್ ಡಿ ಕುಮಾರಸ್ವಾಮಿ ಅಧ್ಯಕ್ಷರೆ, ನಾನು ರಾಜಿಗೆ ಒಳಗಾಗತಕ್ಕಂಥ ಪ್ರಶ್ನೆ ಏನು ಇಲ್ಲ ಈಗಾಗಲೇ ನಮ್ಮ ಅಧಿಕಾರಿಗಳು ಈ ವಿಷಯದಲ್ಲಿ ಗಂಭೀರವಾದ ಕ್ರಮವನ್ನು ತೆಗೆದುಕೊಂಡಿದ್ದಾರೆ ಈಗಾಗಲೇ ಅವರಿಗೆ ಕ್ಯಾನ್ಸಲೇಶನ್ ಲೇಟರನ್ನು ಕೂಡ ಕೊಟ್ಟಿದ್ದಾರೆ legal action ಗಳು ಏನು ತೆಗೆದುಕೊಳ್ಳಬೇಕು, ಅದನ್ನು ತೆಗೆದುಕೊಳ್ಳುತ್ತಿದ್ದಾರೆ ಹಿಂದೆ ಮಾಡಿರತಕ್ಕಂಥ ಅಗ್ರಿಮೆಂಟ್‌ಗಳು ಏನಿವೆ, ಆ ಅಗ್ರಿಮೆಂಟ್‌ಗಳನ್ನು ರಾತ್ರೋರಾತ್ರಿ ಕ್ಯಾನ್ಸಲ್ ಮಾಡತಕ್ಕಂಥದ್ದಕ್ಕೆ ಕಾನೂನಿನ ಚೌಕಟ್ಟಿನಲ್ಲಿ ಅವಕಾಶವಿಲ್ಲ ಅದಕ್ಕೆ ಸ್ವಲ್ಪ ಸಮಯ ಬೇಕಾಗುತ್ತದೆ ಆ ವಿಷಯದಲ್ಲಿ ನಾವು ಯಾವುದೇ ಕಾರಣಕ್ಕೂ ರಾಜಿಯಾಗತಕ್ಕಂಥ ಪ್ರಶ್ನೆ ಇಲ್ಲ, ಸರ್ಕಾರಕ್ಕೆ ಆದಾಯ ಬರತಕ್ಕಂಥದ್ದರಲ್ಲಿ ನಷ್ಟವಾಗುವುದಕ್ಕೆ ನನ್ನ ಅಧಿಕಾರದ ಅವಧಿಯಲ್ಲಿ ಅದಕ್ಕೆ ಅವಕಾಶವನ್ನು ಕೊಡುವುದಿಲ್ಲ ಇದರ ಬಗ್ಗೆ ಮಾನ್ಯ ರಮೇಶ್‌ಕುಮಾರ್‌ರವರಿಗೆ ಗೊತ್ತಿರತಕ್ಕಂಥ ವಿಚಾರ ಇವತ್ತಿನ ಕಾನೂನಿನ ವ್ಯವಸ್ಥೆಗಳು ಯಾವ್ಯಾವ ರೀತಿಯಲ್ಲಿ ರಕ್ಷಣೆ ಕೊಡುತ್ತಿವೆ ಎಂದು ಅವರಿಗೂ ಗೊತ್ತಿದೆ

ಶ್ರೀ ಕೆ ಆರ್ ರಮೇಶಕುಮಾರ್ ಅಧ್ಯಕ್ಷರೆ, ಅತ್ಯಂತ ನಮ್ರತೆಯಿಂದ ಕೈಜೋಡಿಸಿ ತಮ್ಮಲ್ಲಿ ಮಾನ್ಯ ಅಧ್ಯಕ್ಷರ ಮೂಲಕ ನಾನು ಕೇಳಿಕೊಳ್ಳುತ್ತೇನೆ ಕಳ್ಳರನ್ನು ನೀವು ಈ ಕೇಸ್‌ನಲ್ಲಿ ಹುಡುಕಬೇಕಾಗಿಲ್ಲ MMTC rate ಗಿಂತ ಕಡಿಮೆ rate ಗೆ ಮಾರಾಟವನ್ನು ಮಾಡಿದ್ದರೆ ಅದು 100% prima facie ಮೇಲ್ನೋಟಕ್ಕೆ ಖಚಿತವಾಗಿ ಈ ರಾಜ್ಯಕ್ಕೆ ಮಾಡಿದಂಥ ದ್ರೋಹ, ಅವನು ನಿಮ್ಮ ಎದುರಿಗೆ ಬೋರ್ಡ್ ಹಾಕಿಕೊಂಡು ನಿಂತಿದ್ದಾನೆ ನಾನು ಕಳ್ಳ ಕದ್ದವನು ಎಂದು, ಅವನ ಮೇಲೆ ಕ್ರಮ ಜರುಗಿಸುವುದಕ್ಕೆ, ಕಾನೂನು ವ್ಯವಸ್ಥೆ ಎಂದು ಹೇಳಿ ಒಂದು ವರ್ಷದಿಂದ "ನೋಡುತ್ತೇವೆ" "ಮಾಡುತ್ತೇವೆ" ಎಂದು ಹೇಳಿದರೆ, ನೀವು ಬೇರೆ ಕಳ್ಳರನ್ನು ಮತ್ತು ಬಚ್ಚಿಟ್ಟುಕೊಂಡವರನ್ನು ಯಾವಾಗ ಹಿಡಿದು ಶಿಕ್ಷೆ ಕೊಡುವುದು? ನಿಮ್ಮ ಎದುರಿಗೆ ಅವನು ನಾನೇ ಕಳ್ಳ ಎಂದು ಬೋರ್ಡ್ ಹಾಕಿಕೊಂಡು ಏನು ಮಾಡುತ್ತೀರಿ ಎಂದು ನಿಂತಿದ್ದಾನೆ ಅವನನ್ನು ಹಿಡಿದುಕೊಳ್ಳುವುದಕ್ಕೆ ನೀವು ತಯಾರಿಲ್ಲ

ಅಧ್ಯಕ್ಷರು Let us go to the next question

ಶ್ರೀ ಎಂ ಪಿ ಪ್ರಕಾಶ್ ಅಧ್ಯಕ್ಷರೆ, ಕಾನೂನಿನ ಪ್ರಕಾರವೇ ಕ್ರಮ ಕೈಗೊಳ್ಳಬೇಕು ನಾನೇ ಕಳ್ಳ ಎಂದು ಅವನು ಹೇಳಿದರೂ ಕೂಡ ಕಾನೂನಿನ ಪ್ರಕಾರವೇ ಕ್ರಮ ಕೈಗೊಳ್ಳಬೇಕು, ಅದೇ ದುರ್ದೈವ, ಹಾಗೆ ನಮ್ಮ law ಹೇಳುತ್ತದೆ ಅವನನ್ನು ಹಿಡಿಯಬಹುದು ಅಷ್ಟೆ ಬೇರೆ ಏನು ಇಲ್ಲ

ಶ್ರೀ ಹೆಚ್ ಡಿ ಕುಮಾರಸ್ವಾಮಿ ನಿಷ್ಪಾವಂತ ಅಧಿಕಾರಿಗಳು ಆ ಕಳ್ಳರನ್ನು ಹಿಡಿಯಲಿಕ್ಕೆ ಹೋಗಿ Court ಮುಂದೆ contempt ನ್ನು ಇವತ್ತು ಎದುರಿಸುತ್ತಿದ್ದಾರೆಂದು ಈ ಸದನಕ್ಕೆ ಹೇಳಲು ಬಯಸುತ್ತೇನೆ

ಶ್ರೀ ಕೆ ಆರ್ ರಮೇಶಕುಮಾರ್ ಆದರೂ ಕೂಡ ಅದರಿಂದ ಸದನಕ್ಕೆ ಬೆನೆಫಿಟ್ ಆಗುತ್ತದೆ ಮಾನ್ಯ ಪ್ರಕಾಶ್‌ರವರ ಗಮನಕ್ಕೆ ಕೃಷ್ಣಯ್ಯನವರ ಒಂದು Off the Bench ಒಂದು ಕಡೆ ಅವರು ಹೀಗೆ ಹೇಳುತ್ತಾರೆ It is by the goodness of God that in our Country we have those three unspeakably precious things Freedom of speech, freedom of conscience and the prudence never to practice either of them

ಶ್ರೀ ಎಂ ಪಿ ಪ್ರಕಾಶ್ ಪಾಪ ಕೃಷ್ಣಯ್ಯನವರ ಪರಿಸ್ಥಿತಿ ಏನಾಯಿತು ಎಂದು ತಮಗೆ ಗೊತ್ತಿದೆ He was superseded Not only he but our K.S Hegde was superseded All the three of them ಪಾಪ ಯಾರು candid ಆಗಿ ಮಾತನಾಡುತ್ತಾರೆ, ಅವರಿಗೆ ನ್ಯಾಯ ಸಿಗುವುದಿಲ್ಲ

ಶ್ರೀ ಕೆ ಆರ್ ರಮೇಶ್‌ಕುಮಾರ್ ನೀವು ಅರ್ಥವನ್ನು ಮಾಡಿಕೊಳ್ಳಲಿಲ್ಲ unspeakably precious things Freedom of speech, freedom of conscience and the prudence never to practice either of them It is more applicable to people like you

ಶ್ರೀ ಡಿ ಆರ್ ಪಾಟೀಲ್ Half an hour discussionಗೆ allow ಮಾಡಿ ನಾನು ಅಗ್ರಿಮೆಂಟ್ ಕಾಪಿಯನ್ನು ಕೇಳಿದ್ದೇನೆ

ಅಧ್ಯಕ್ಷರು ಏನಾಗಿದೆ ಎಂದರೆ, ಎರಡು ಮೂರಕ್ಕೆ ನಾನು ಅಲೋ ಮಾಡಿದ್ದೇನೆ, ಯಾವುದು ರೀಚ್ ಆಗುತ್ತಿಲ್ಲ

ಶ್ರೀ ಡಿ ಆರ್ ಪಾಟೀಲ್ ನಮಗೆ ಅಗ್ರಿಮೆಂಟ್ ಕಾಪಿಯನ್ನು ಕೊಟ್ಟಿಲ್ಲ

ಅಧ್ಯಕ್ಷರು Half an hour discussionಗೆ ಇದನ್ನು ತೆಗೆದು ಕೊಳ್ಳುತ್ತೇನೆ

ಶ್ರೀ ಡಿ ಆರ್ ಪಾಟೀಲ್ ಮಾನ್ಯ ಮುಖ್ಯಮಂತ್ರಿಗಳಿಗೆ, ನನ್ನ ಒಂದು ಸೂಚನೆ, ಈಗ ಜಿಂದಾಲ್ ಕಂಪನಿಯನ್ನು ಕೂಡ ಜಾಯಿಂಟ್ ವೆಂಚರ್ ಮಾಡಿಕೊಂಡಿದ್ದೇವೆ

ಶ್ರೀ ಹೆಚ್ ಡಿ ರೇವಣ್ಣ ಒಂದೊಂದು ತಾಸು ಪ್ರಶ್ನೋತ್ತರಕ್ಕೆ ಕೊಟ್ಟರೆ ಹೇಗೆ ಆಗುತ್ತದೆ ಸ್ವಾಮಿ ಮಾನ್ಯ ಸಭಾಧ್ಯಕ್ಷರು ಇದರ ಬಗ್ಗೆ ಹೇಳಬೇಕು

ನಾನು ಮುಖ್ಯಮಂತ್ರಿಯಾದೆ ಮತ್ತೊಮ್ಮೆ ನಾವು Supreme Courtಗೆ ಹೋಗತಕ್ಕ ರೀತಿಯಲ್ಲಿ ಬಹಳಷ್ಟು ವಿವಾದಗಳ ಮಧ್ಯದಲ್ಲಿ ಇವತ್ತು ನಮ್ಮ ಸರ್ಕಾರವನ್ನು ಮುಂದುವರೆಸಿಕೊಂಡು ಹೋಗಬೇಕಾಗುತ್ತದೆ, ಅವರು ರಾಷ್ಟ್ರಾಧ್ಯಕ್ಷರಿದ್ದಾರೆ ಎನ್ನತಕ್ಕ ರೀತಿಯಲ್ಲಿ ಆಗಲೂ ಕೂಡ ನಾವು ಹೋದೆವು ಆಗಲೂ ಕೂಡ reject ಆಯಿತು ಮತ್ತು ಯಾವ ರೀತಿಯಾಗಿ stricture ವಾಸಾಗಿದೆ ಎನ್ನುವುದು ಕೂಡ ಇದೆ ಇವತ್ತು ಅವರೇನು ಹೇಳುತ್ತಿದ್ದಾರೆ, ಇವತ್ತು ಪ್ರಧಾನ ಮಂತ್ರಿಗಳಿಗೆ, this is a golden opportunity ಹೇಗೆ ಸಿಕ್ಕಿಸಿ ಹಾಕುತ್ತಿದ್ದಾರೆಂದರೆ This is a golden opportunity, he has to take a decision ಇವತ್ತು ನಮ್ಮ rescue ಗೆ ಬರಬೇಕೆನ್ನುವ ಮಾತನ್ನು ಕೂಡ ಹೇಳಿದ್ದಾರೆ ಇದೆಲ್ಲ ಕೂಡ ಒಂದು ಕಡೆಗೆ ಇದೆ ಇವತ್ತು ಕರ್ನಾಟಕದಲ್ಲಿ ಬಂದ್ ಆಗಿದೆ ಬಂದ್‌ನ್ನು ಏಕೆ ಮಾಡಬೇಕು? ಅದರಿಂದ ಏನೂ ಪ್ರಯೋಜನ ಇಲ್ಲ ಬಂದ್‌ನಿಂದ ನಾವೇನು ಕೂಡ achieve ಮಾಡುವುದಕ್ಕೆ ಸಾಧ್ಯವಿಲ್ಲ ಎನ್ನುವ ಮಾತನ್ನು ಕೂಡ ಪ್ರಸ್ತಾಪ ಮಾಡಿದ್ದಾರೆ ಮತ್ತು ತಾವೇನು ಇವತ್ತು ಹೇಳಿಕೆಯನ್ನು ಕೊಟ್ಟಿದ್ದೀರಿ, ತಾವು ಮತ್ತು ಉಪ ಮುಖ್ಯಮಂತ್ರಿಗಳು ನಾಳೆ ಪ್ರಧಾನ ಮಂತ್ರಿಗಳನ್ನು ಭೇಟಿ ಆಗುತ್ತೇವೆಂದು ಹೇಳಿದ್ದೀರಿ ಒಂದು ಕಡೆ ಸರ್ವ ಪಕ್ಷದ ಸಭೆ 22 ನೇ ತಾರೀಖಿಗೆ ಕರೆಸತಕ್ಕದ್ದು ತೀರ್ಪಿನ ಬಗ್ಗೆ ನಮಗೆಲ್ಲರಿಗೂ ಕಾಪಿ ಬಂದಿದೆ, ಅದರ ಬಗ್ಗೆ ನಾವು study ಮಾಡತಕ್ಕದ್ದು ಮತ್ತು ನಮ್ಮ ರಾಜ್ಯದ ನಿಲುವು ಏನು ಇದೆ ಎನ್ನತಕ್ಕದ್ದು ಇಲ್ಲದೇ ಇವತ್ತು ಪ್ರಧಾನ ಮಂತ್ರಿಗಳ ಹತ್ತಿರ ಹೋಗತಕ್ಕದ್ದು ಇದು ರಾಜ್ಯದ ಪ್ರಶ್ನೆ ಇದೆ ನೀರಾವರಿ ಪ್ರಶ್ನೆ ಇದೆ ಇವತ್ತು ರಾಜ್ಯದ ಉದ್ದಗಲಕ್ಕೂ ಕೂಡ ಪಕ್ಷಭೇದವನ್ನು ಮರೆತು ಪ್ರತಿಭಟನೆ ಮಾಡಿದ್ದಾರೆ ಇವತ್ತು ಸರ್ಕಾರಕ್ಕೆ ನೆರವಾಗಿ ನಿಂತಿದ್ದಾರೆ ಇಂತಹ ಒಂದು ಸಂದರ್ಭದಲ್ಲಿ ಇವತ್ತಿನ ದಿವಸ ಮಾನ್ಯ ಮುಖ್ಯಮಂತ್ರಿಗಳು ಕೂಡ ನಾಳೆ ದೆಹಲಿಗೆ ಹೋಗುತ್ತಿದ್ದಾರೆ ನಿಯೋಗ ಅಲ್ಲ ದೆಹಲಿಗೆ ಹೋಗುತ್ತಿದ್ದಾರೆ ಇವತ್ತು experts opinion ತೆಗೆದುಕೊಳ್ಳಲಾರದೇ ಇವರು ಒಂದು ಕಡೆ ಹೇಳಿದರು ಇವತ್ತು ರಾಜ್ಯದ ನಿಲುವು ಏನು ಇದೆ? Advocate General ಹೇಳಿದ್ದಾರೆ ಮತ್ತು Chairman ಆದಂತಹ ಶ್ರೀ ನಾರಿಮನ್ ಅವರು ಹೇಳಿದ್ದಾರೆ ಶ್ರೀ ಕಾತರಕಿ ಅವರು ಹೇಳಿದ್ದಾರೆ ಅದು ಅವರ ಅಭಿಪ್ರಾಯ ಆದರೂ

ಕೂಡ ಯಾರೂ ತೀರ್ಪನ್ನು ಧಿಕ್ಕರಿಸಿ ಏನೂ ಕೂಡ ಪತ್ರಿಕಾ ಹೇಳಿಕೆಯನ್ನು ಕೊಟ್ಟಿಲ್ಲ ಇವರೇ ಹೇಳಿದ್ದಾರೆ ನದನದಲ್ಲಿ ಚರ್ಚೆ ಆದ ಮೇಲೆ ಮಾನ್ಯ ಮುಖ್ಯಮಂತ್ರಿಗಳು ಹೇಳಿದರು ಅದು ಅವರ ವೈಯಕ್ತಿಕ ಅಭಿಪ್ರಾಯ ಎಂದು ಹೇಳಿದರು ಇವತ್ತು ರಾಜ್ಯದ ಒಂದು ಪ್ರಶ್ನೆ ಬಂದ ಹಾಗೆ, ಕಾವೇರಿ ಜಟಿಲವಾದ ಪ್ರಶ್ನೆ ಬಂದ ಹಾಗೆ 17 ವರ್ಷದ ನಂತರ ತೀರ್ಪು ರಾಜ್ಯದ ಜನತೆಗೆ ಅನುಕೂಲ ಆಗಲಾರದಂತಹ ರೀತಿಯಲ್ಲಿ ಬಂದ ಹಾಗೆ you have to take a collective decision in democratic set up because you are running the Government. You are having a greater responsibility ಇವತ್ತು ನಿಮಗೆ ಜವಾಬ್ದಾರಿ ಇದೆ ಮನುಷ್ಯನಿಗೆ ಅಧಿಕಾರ ಬರುತ್ತದೆ ಹೋಗುತ್ತದೆ ನಾನು ಸಹ ಅಲ್ಲಿ ಕುಳಿತು ಇಲ್ಲಿ ಬಂದಿದ್ದೇನೆ ಯಾವಾಗಲೂ ಅಧಿಕಾರ ಶಾಶ್ವತ ಅಲ್ಲ ಆದರೆ ಅಧಿಕಾರ ಸಿಕ್ಕಾಗ ಸರಿಯಾದ ರೀತಿಯಲ್ಲಿ ರಾಜ್ಯದ ಜನತೆಯಲ್ಲಿ ವಿಶ್ವಾಸ ಮೂಡತಕ್ಕ ರೀತಿಯಲ್ಲಿ ಕೆಲಸ ಮಾಡಬೇಕಾಗುತ್ತದೆ ನಾವು ಮೊದಲೇ ನಾವು ಹೇಳಿದ್ದೇವೆ ಏನೋ ಇದರಲ್ಲಿ ಎಡವಿದ್ದೇವೆ ಎನ್ನತಕ್ಕದ್ದನ್ನು ಹೇಳಿದ್ದೇವೆ ಇಂತಹ ಬೆಂಬಲ ಯಾವಾಗಲೂ ಸಿಕ್ಕಿಲ್ಲ ಬಂದ್ ಯಶಸ್ವಿ ಆಗಿದೆ ಕಾಂಗ್ರೆಸ್ ಪಕ್ಷದವರು ನದನಕ್ಕೆ ಬಂದಿಲ್ಲವೆಂದು ಹೇಳಿ you have not appreciated ಅವರು ತಮ್ಮದೇ ಆದ ಧಾಟಿಯಲ್ಲಿ ಭಾಷಣ ಹೊಡೆದರು ಪಾಪ ಅವರ ವರಿಶ್ರಮ ಇವತ್ತಿನ ದಿವಸ ಏನಾಗಬೇಕು? ನಾನು ಹೇಳತಕ್ಕದ್ದು ಇಷ್ಟೇ ಮಾನ್ಯ ಸಭಾಧ್ಯಕ್ಷರೇ ಇವತ್ತು ಈ ಎಲ್ಲಾ ವಿಷಯಗಳಿಂದ ರಾಜ್ಯದ ಜನರ ಮನಸ್ಸಿನಲ್ಲಿ ಏನೋ ಒಂದು ತರಹದ ರಾಜಕೀಯ ಮಾಡುತ್ತಿದ್ದಾರೆ ಎಲ್ಲೋ ಒಂದು ಕಡೆ ಹೋಗಬೇಕೆನ್ನ ತಕ್ಕ ಅವರ ಆಸೆ ಆಕಾಂಕ್ಷೆ ಏನು ಇದೆ ಅದನ್ನು ಈಡೇರಿಸತಕ್ಕ ರೀತಿಯಲ್ಲಿ ಕಾವೇರಿ ವಿಷಯವನ್ನು ಅವರು ಉಪಯೋಗ ಮಾಡುತ್ತಿದ್ದಾರೆ ಎನ್ನತಕ್ಕ ಮಾತು ಕೂಡ ಬಂದಿದೆ ಅದಕ್ಕೆ ನಾನು ಪ್ರಸ್ತಾಪ ಮಾಡಿದ್ದೇನೆ ಇನ್ನೂ ಕೂಡ ನಮ್ಮೆಲ್ಲ ಹಿರಿಯ ಸದಸ್ಯರು ಕೂಡ ಪ್ರಸ್ತಾಪ ಮಾಡುವವರು ಇದ್ದಾರೆ ಮಾನ್ಯ ಮುಖ್ಯಮಂತ್ರಿಗಳು ಕೂಡ fortunately he is here, ಅವರು ಕೊನೆಗೆ ಉತ್ತರ ಕೊಡುತ್ತಾರೆ ಇಷ್ಟು ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳುತ್ತಿದ್ದೇನೆ

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ (ಗುರುಮಿಠಕಲ್) ಮಾನ್ಯ ಸಭಾಧ್ಯಕ್ಷರೇ ಈಗಾಗಲೇ ಮಾನ್ಯ ವಿರೋಧ ಪಕ್ಷದ ನಾಯಕರು ಈ ವಿಚಾರದ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ ಪ್ರಸ್ತಾಪ ಮಾಡುವಾಗ ಸವಿಸ್ತಾರವಾಗಿ ಈ ಒಂದು ತೀರ್ಪಿನ ಬಗ್ಗೆ ಮತ್ತು 5ನೇ ತಾರೀಖು ತೀರ್ಪು ಆದ ಮೇಲೆ ಮುಂದೆ ಯಾವ ರೀತಿಯಾಗಿ ರಾಜ್ಯ ಸರ್ಕಾರ, ವಿರೋಧ ಪಕ್ಷದ ನಾಯಕರು ಮತ್ತು Floor Leaders ಎಲ್ಲರನ್ನೂ ಕೂಡ ಕರೆಸಿ ಮಾತನಾಡಿದರು ಎಂದು ತಿಳಿಸಿದ್ದಾರೆ ಮಾತನಾಡಿದ ಮೇಲೆ ಅಲ್ಲಿ ಬಂದಂತಹ ತೀರ್ಮಾನ ಎಂದರೆ ನಾವೆಲ್ಲರೂ ಸೇರಿ ಏನು 900 ಪುಟದ ತೀರ್ಪು ಇದೆ ಅದನ್ನು ಸಂಪೂರ್ಣವಾಗಿ, ಆಳವಾಗಿ ಅಭ್ಯಾಸ ಮಾಡಿ ಯಾವ ನಿಲುವನ್ನು ತೆಗೆದುಕೊಳ್ಳಬೇಕು ಎನ್ನತಕ್ಕದ್ದನ್ನು ನಿರ್ಣಯ ಮಾಡಿ ಸರ್ವ ಪಕ್ಷದವರೂ ಒಂದೇ ನಿರ್ಣಯವನ್ನು ರಾಜ್ಯದ ಹಿತದೃಷ್ಟಿಯಿಂದ ಮತ್ತು ಕಾವೇರಿಯ ಒಂದು ಬೆಲ್ಟ್‌ನಲ್ಲಿ ಇರತಕ್ಕ ರೈತರ ಹಿತದೃಷ್ಟಿಯಿಂದ ಹೋಗೋಣ ಎನ್ನತಕ್ಕ ಅಭಿಪ್ರಾಯ ಮೂಡಿದ ಮೇಲೆ, ಆ ಸಭೆಯನ್ನು ಬರ್ಖಾಸ್ತ್ ಮಾಡಲಾಯಿತು ನಮಗೂ ಕೂಡ, ವಿರೋಧ ಪಕ್ಷದಲ್ಲಿದ್ದಂತಹ ನಾಯಕರಿಗೂ ಕೂಡ ಮತ್ತು ಶಾಸಕರಿಗೂ ಕೂಡ ಅನೇಕ ಸಾರಿ. ಮಾಧ್ಯಮದ ಮಿತ್ರರು, Electronic Media, ಪತ್ರಿಕೆಯವರು ಎಲ್ಲರೂ ಕೂಡ ಕೇಳಿದರೂ, ನಾನು ಒಂದೇ ಮಾತನ್ನು ಹೇಳಿದ್ದೇನೆ ರಾಜ್ಯದ ಹಿತದೃಷ್ಟಿಯಿಂದ ಸರ್ವ ಪಕ್ಷದ ನಿರ್ಣಯ ಏನಾಗುತ್ತದೆ ಅದಕ್ಕೆ ನಾವೆಲ್ಲರೂ ಬದ್ಧರಿದ್ದೇವೆ ಎಲ್ಲರೂ ಒಗ್ಗಟ್ಟಾಗಿ ಒಂದೇ voiceನಲ್ಲಿ ಹೋಗಬೇಕಾಗಿದೆ ನಮ್ಮ ಒಗ್ಗಟ್ಟನ್ನು ಪ್ರದರ್ಶನ ಮಾಡದೇ ಹೋದರೆ ಖಂಡಿತವಾಗಿ ನಮಗೆ ಇದರಲ್ಲಿ ನಮಗೆ ಇನ್ನೂ ಅನ್ಯಾಯ ಆಗುತ್ತದೆ ನಾವು ನಗೆಪಾಟಲಿಗೆ ಒಳಗಾಗುತ್ತೇವೆ ಎನ್ನತಕ್ಕ ದೃಷ್ಟಿಯಿಂದ ನಾವ್ಯಾರೂ ಕೂಡ ಮಾತನಾಡಿಲ್ಲ ನಮಗೆ ಆ ವಿಷಯ ಗೊತ್ತಿದ್ದರೂ ಕೂಡ ನಾವು ಹೇಳಲಿಕ್ಕೆ ಹೋಗಲಿಲ್ಲ ಭಿನ್ನಾಭಿಪ್ರಾಯ ವ್ಯಕ್ತಪಡಿಸಲಿಲ್ಲ ನಮ್ಮದೇ ನಡೆಯಬೇಕು ಎನ್ನತಕ್ಕ ದೃಷ್ಟಿಯಿಂದ ಕೂಡ ಹೇಳಲಿಲ್ಲ ಅಲ್ಲಿ ಈಗಾಗಲೇ ಅವರು ಹೇಳಿದ ಹಾಗೆ,ಪ್ರಸ್ತಾಪ ಮಾಡಿದ ಹಾಗೆ ಶ್ರೀ ನಾರಿಮನ್ ಅವರ ಅಭಿಪ್ರಾಯ ಕೂಡ ಪತ್ರಿಕೆಯಲ್ಲಿ ಬಂದಿತ್ತು ಮಾಧ್ಯಮದಲ್ಲಿ ಬಂದಿತ್ತು ಅದೇ ರೀತಿಯಾಗಿ ಶ್ರೀ ಕಾತರಕಿ ಅವರದ್ದು ಕೂಡ ಬಂದಿತ್ತು ಮತ್ತು Advocate General ಅವರ ಹೇಳಿಕೆ ಕೂಡ ಪತ್ರಿಕೆಯಲ್ಲಿ ಬಂದಿತ್ತು ಪತ್ರಿಕೆಯಲ್ಲಿ ಬಂದಿದ್ದನ್ನು ಸರ್ವ

ಪಕ್ಷದ ಸಭೆಯಲ್ಲಿ ಪ್ರಸ್ತಾಪ ಮಾಡಿದಾಗ, ಮಾನ್ಯ ಮುಖ್ಯಮಂತ್ರಿಗಳು ಹೇಳಿದರು ಅದು ಸರ್ಕಾರದ ನಿಲುವು ಅಲ್ಲ ಅದು ವೈಯಕ್ತಿಕವಾಗಿ ಅವರು ಹೇಳಿಕೊಂಡಿರಬಹುದೇ ಹೊರತಾಗಿ ನಾವು ಇದನ್ನು ಹೇಳಿ ಎಂದು ಎಂದೂ ಕೂಡ ಹೇಳಿಲ್ಲ ಎನ್ನತಕ್ಕ ಮಾತನ್ನು ಅವರು ಹೇಳಿದರು ಅದು ಸಂತೋಷ ಅದು ಅಲ್ಲಿಗೇ ನಿಂತಿದೆ ಅದೇ ರೀತಿಯಾಗಿ ಅಲ್ಲಿರತಕ್ಕಂಥ Advocate General ಅವರು clarify ಮಾಡಿದರು ನಾನು ಆ ರೀತಿಯಾಗಿ ಹೇಳಲೇ ಇಲ್ಲ ಅದನ್ನು ನನ್ನ opinion ಎಂದು ಹೇಳಿ ಪತ್ರಿಕೆಯಲ್ಲಿ ಬಂದರೆ ಅದು ತಪ್ಪು ಎಂದು ಅವರು ಕೂಡ ಹೇಳಿಕೊಂಡಿದ್ದಾರೆ ಆದರೆ ಮಾಧ್ಯಮದಲ್ಲಿ, ಟಿ ವಿ ಮೀಡಿಯಾದಲ್ಲಿ, ಎಲೆಕ್ಟ್ರಾನಿಕ್ ಮೀಡಿಯಾದಲ್ಲಿ ಅವರ ಮುಖವನ್ನು ಅವರ voice ಅನ್ನು ಶ್ರೀ ಕಾತರಕಿ ಅವರದ್ದು ಆಗಲಿ, Advocate General ಅವರದ್ದು ಆಗಲೀ ಹೇಳಿದ್ದನ್ನು ನೀವೆಲ್ಲರೂ ಕೂಡ ನೋಡಿದ್ದೀರಿ ದುರ್ದೈವ ಏನೆಂದರೆ ಇಷ್ಟು ಸ್ಪಷ್ಟವಾಗಿ ಮಾಧ್ಯಮದಲ್ಲಿ ಚಿತ್ರ ಸಹಿತ ಬಂದರೂ ಕೂಡ ಅವರ ಬಾಯಿ ಉಚ್ಚಾರಗಳು ಕೂಡ ಅದರಲ್ಲಿ ಬಂದರೂ ಕೂಡ ಅದು ನನ್ನ voice ಅಲ್ಲ" ಎಂದು ಹೇಳಿದ ಮೇಲೆ ಇದು ಯಾವ ನ್ಯಾಯ? ನಾವು ಎಲ್ಲಿಗೆ ಹೋಗಬೇಕು? ಯಾರ ಮುಂದೆ ಹೇಳಬೇಕು? ಹೇಗೆ ನಡೆದುಕೊಳ್ಳಬೇಕು ಎನ್ನತಕ್ಕದ್ದೇ ನನಗೆ ಗೊತ್ತಾಗುತ್ತಿಲ್ಲ ಇದು ಒಂದು ಕಡೆ ಅದನ್ನೂ ನಾವು ಸಹನೆ ಮಾಡಿಕೊಂಡು, ಅವರು ಹೇಳದೇ ಇದ್ದರೆ ಇರಲಿ, ರಾಜ್ಯದ ಹಿತದೃಷ್ಟಿಯಿಂದ ನಾವೇನು ಮಾಡಬೇಕು? ಅದನ್ನು ಮಾಡೋಣ ಎಂದು ಹೇಳಿ ಎಲ್ಲರೂ ಕೂಡ ಒಂದು ಸಭೆ ನಡೆಸಿ ಅದನ್ನು ಅಲ್ಲಿಗೆ ಮುಕ್ತಾಯ ಮಾಡಿದರು ಈತನ್ಮಧ್ಯೆ ಜೆಡಿಎಸ್ ವಕ್ತಾರರೊಬ್ಬರು statement ಕೊಟ್ಟರು ಕಾಂಗ್ರೆಸ್‌ನವರೇ ಇದಕ್ಕೆ ಕಾರಣಕರ್ತರು ಮತ್ತು ಮಾನ್ಯ ದೇವೇಗೌಡರು ಮೌನ ಏಕೆ ವಹಿಸಿದ್ದಾರೆ ಎಂದು ಕೇಳುತ್ತಾರೆ ಅಥವಾ ಜೆಡಿಎಸ್ ಸುಮ್ಮನೇ ಇದೆ ಎಂದು ಕೇಳುತ್ತಾರೆ ಎನ್ನತಕ್ಕ ಪ್ರಚೋದನೆ ಮಾತು ಪತ್ರಿಕೆಯಲ್ಲಿ ಬಂತು ಅದು ಅವಶ್ಯ ಇರಲಿಲ್ಲ ಏಕೆಂದರೆ ಪದೇ ಪದೇ ಸಹಜವಾಗಿ ಒಬ್ಬರು ರಾಷ್ಟ್ರೀಯ ನಾಯಕರು, ಮಾಜಿ ಪ್ರಧಾನಿಗಳು ಹಿಂದೆ ಅನೇಕ ಸಾರಿ ತೀರ್ಪುಗಳು ಬಂದಾಗ ತಕ್ಷಣವೇ react ಮಾಡಿದ್ದನ್ನು ನೀವೆಲ್ಲರೂ ಕೂಡ ಈ ಕಡತದಲ್ಲಿ ತೆಗೆದು ನೋಡಿ ಅಥವಾ ಪತ್ರಿಕೆಯಲ್ಲಿ ನೋಡಿ React ಮಾಡಿದ್ದಾರೆ ಈ ಸಾರಿ ಮಾತ್ರ 3–4 ದಿವಸ ಏಕೆ ಸುಮ್ಮನೆ

ಇದ್ದರು ಎಂದು ಸಹಜವಾಗಿ ಕೇಳುತ್ತಾರೆ ಅವರು ಹಿಂದೆ react ಮಾಡದೇ ಇದ್ದಿದ್ದರೆ ಅಥವಾ ಅವರು ಈ ಹಿಂದೆ ಅದರ ಬಗ್ಗೆ ಚಿಂತನೆಯನ್ನೇ ಮಾಡದೇ ಇದ್ದಿದ್ದರೆ ಯಾರೂ ಕೇಳುತ್ತಿರಲಿಲ್ಲ ಆದರೆ ಅನೇಕ ಸಾರಿ ತೀರ್ಮ ಬಂದ ತಕ್ಷಣ ಅಥವಾ ತೀರ್ಪು ಬರುವ ಮುಂಚೆ ವಿಚಾರ ಮಾಡತಕ್ಕದ್ದು ಅನೇಕ ಸಾರಿ ಆಗಿದೆ

ಶ್ರೀ ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಸಚಿವರು) ಮಾನ್ಯ ಖರ್ಗೆಯವರು ಹಿರಿಯ ಸದಸ್ಯರು ಅವರು ಕಾವೇರಿ ವಿಚಾರ discussion ಮಾಡುತ್ತಿದ್ದಾರೋ ಅಥವಾ ಮಾನ್ಯ ದೇವೇಗೌಡರ ಬಗ್ಗೆ discussion ನಡೆಯುತ್ತಿದೆಯೋ ಎಂದು ಒಂದೂ ಗೊತ್ತಾಗುತ್ತಿಲ್ಲ

ಶ್ರೀ ಮಲ್ಲಿಕಾರ್ಜುನ ಖರ್ಗೆ ಇಲ್ಲ ದೇವೇಗೌಡರ ಬಗ್ಗೆ ಅಲ್ಲ

ಶ್ರೀ ಹೆಚ್ ಡಿ ರೇವಣ್ಣ ಅವರು ಇಲ್ಲಿ ಇಲ್ಲವಲ್ಲ ಅವರು ಸಭೆಯಲ್ಲಿ ಇಲ್ಲ ಅವರು ಸಭೆಯಲ್ಲಿ ಇದ್ದು argue ಮಾಡುವುದಕ್ಕೆ ಆಗುವುದಿಲ್ಲ ನಾನು ಹೇಳುವುದು ಅವರ ಹೆಸರು ಹೇಳುವುದು ಬೇಡ ದಯಮಾಡಿ ಏನಾದರೂ ವಿಷಯ ಇದ್ದರೆ ಹೇಳಲಿ, ಬೇಕಾದರೆ ಚರ್ಚೆ ಮಾಡಲಿ ನಮ್ಮದೇನೂ ಅಭ್ಯಂತರ ಇಲ್ಲ ವ್ಯಕ್ತಿಗತವಾಗಿ ಒಬ್ಬರ ಬಗ್ಗೆ ಹೇಳುವುದು ಸೂಕ್ತವಲ್ಲ ಎಂದು ನನ್ನ ಭಾವನೆ

ಶ್ರೀ ಮಲ್ಲಿಕಾರ್ಜುನ ಖರ್ಗೆ ನಾನು ಶ್ರೀ ದತ್ತ ಅವರ ವಿಷಯವನ್ನು ಪ್ರಸ್ತಾಪ ಮಾಡುತ್ತಿದ್ದೇನೆ

ಶ್ರೀ ಹೆಚ್ ಡಿ ರೇವಣ್ಣ ಅವರು ಈ ಮನೆಯ ಸದಸ್ಯರಲ್ಲ

ಶ್ರೀ ಆರ್ ವಿ ದೇಶಪಾಂಡೆ ಅವರು ನಿಮ್ಮ ಪಕ್ಷದ spokesman ನಿಮ್ಮ ಪಕ್ಷದ spokesman ಅವರು ಹೇಳಿದ್ದಾರೆ ಕಾಂಗ್ರೆಸ್ ಬಗ್ಗೆ ಕೆಲವು ದೂರುಗಳನ್ನು ಮಾಡಿದಾಗ ಅದನ್ನು ಹೇಳಬೇಕಾಗುತ್ತದಲ್ಲ

ಶ್ರೀ ಹೆಚ್ ಡಿ ರೇವಣ್ಣ ಸಾರ್, ತಾವು ಹಿರಿಯ ಸದಸ್ಯರು ಇದ್ದೀರಿ ಪತ್ರಿಕೆಯಲ್ಲಿ ಮತ್ತು ಯಾರೋ ಹೇಳಿಕೆಯನ್ನು ಕೊಡುವುದನ್ನು ಸದನದಲ್ಲಿ ಪ್ರಸ್ತಾಪ ಮಾಡುವುದು ಸೂಕ್ತವಲ್ಲ ಎಂದು ನನ್ನ ಭಾವನೆ

ಶ್ರೀ ಮಲ್ಲಿಕಾರ್ಜುನ ಖರ್ಗೆ ಆಯಿತು, ಅದನ್ನು ಆಮೇಲೆ ಸಮರ್ಥನೆ ಮಾಡಿಕೊಳ್ಳುತ್ತೇನೆ ಬೇಡ ಎಂದು ಹೇಳುವುದಿಲ್ಲ ನಮ್ಮಲ್ಲಿ ಏನು ಒಗ್ಗಟ್ಟು ಇತ್ತು? ಆ ಒಗ್ಗಟ್ಟನ್ನು

ಶ್ರೀ ಎಂ ಪಿ ಪ್ರಕಾಶ್ (ಗೃಹ, ಕಾನೂನು ಹಾಗೂ ಸಂಸದೀಯ ಸಚಿವರು) ಮಾನ್ಯ ಅಧ್ಯಕ್ಷರೇ, ತಾವು ಇದರ ಬಗ್ಗೆ ಚರ್ಚೆ ಮಾಡಲು ಆಕ್ಷೇಪಣೆ ಇಲ್ಲ ಮಾನ್ಯ ವಿರೋಧ ಪಕ್ಷದ ನಾಯಕರು ಎದ್ದಾಗ ಕೂಡ ಅವರು ಹೇಳಲಿ ಎಂದು ನಾವು ಸುಮ್ಮನೇ ಇದ್ದೆವು ಈಗ ಅವರು ನಮಗೆ ನೋಟೀಸ್ ಕೊಟ್ಟಿಲ್ಲ ಯಾವ ನಿಯಮಾವಳಿಗಳ ಕೆಳಗೆ ಇದನ್ನು ಎತ್ತಿದ್ದಾರೆ ಎನ್ನತಕ್ಕದ್ದು ಕೂಡ ಇಲ್ಲ ಹೀಗೆ ತಕ್ಷಣದಲ್ಲಿ ಈ ವಿಷಯಗಳನ್ನು ಪ್ರಸ್ತಾಪ ಮಾಡಿದರೆ, ನಮಗೆ ಉತ್ತರ ನೀಡಲು ಕಷ್ಟವಾಗುತ್ತದೆ ಅದು ಯಾವ ಉದ್ದೇಶವೆಂದು ಗೊತ್ತಾದರೆ ಅದಕ್ಕೆ ನರ್ಕಾರದಿಂದ ನಾವು ಒಂದು ಪ್ರತಿಕ್ರಿಯೆ ಕೊಡಬಹುದು ಆ ಕಾರಣಕ್ಕಾಗಿ ದಯವಿಟ್ಟು ಇದನ್ನು ತಾವು ಪರಾಮರ್ಶಿಸಬೇಕು ಈಗಾಗಲೇ ವಿರೋಧ ಪಕ್ಷದ ನಾಯಕರು ಹೇಳಿದ್ದಾರೆ ಎಲ್ಲಾ ಸದಸ್ಯರು ಇದರಲ್ಲಿ ಭಾಗವಹಿಸುವುದಾಗಿದ್ದರೆ, ಯಾವ ನಿಯಮಾವಳಿ ಕೆಳಗೆ ಇದನ್ನು ತಂದಿದ್ದಾರೆ? ಮತ್ತು ತಾವು ಯಾವ ನಿಯಮಾವಳಿ ಕೆಳಗೆ ಅವರಿಗೆ permission ಕೊಟ್ಟಿದ್ದೀರಿ? ಇದಾದರೂ ನಮಗೆ ಗೊತ್ತಾಗಬೇಕಲ್ಲ ಕಾರ್ಯಕಲಾಪಗಳನ್ನು ಬದಿಗೊತ್ತಿ ಮಾತನಾಡತಕ್ಕಂಥಾದ್ದೂ ಕೂಡ ಇದಲ್ಲ

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ Zero Hourನಲ್ಲಿ ನಾವು ಎತ್ತಿದ್ದೇವೆ, ತಾವು ಅನುಮತಿ ಕೊಟ್ಟಿದ್ದೀರಿ ಅವರು ಮಾತನಾಡಿದ ನಂತರ ನಾನು ಮಾತನಾಡಲು ನಿಂತೆ ತಾವು permission ಕೊಟ್ಟಿರಿ ತಾವು permission ಕೊಟ್ಟ ನಂತರ ನಾನು ಮಾತನಾಡುತ್ತಿದ್ದೇನೆ

ಶ್ರೀ ಎಂ ಪಿ ಪ್ರಕಾಶ್ Zero Hour ಎಂಬುದು ತಮಗೆಲ್ಲರಿಗೂ ಗೊತ್ತಿದೆ ನಿನ್ನೆ ಸದನ adjourn ಆದ ಮೇಲೆ ಇವತ್ತು ಸದನ ಸೇರಿದ ಮಧ್ಯದಲ್ಲಿ ಏನಾದರೂ ಘಟನೆ ನಡೆದಾಗ ಮಾತ್ರ ಶೂನ್ಯವೇಳೆಯಲ್ಲಿ ಈ ವಿಚಾರವನ್ನು ಪ್ರಸ್ತಾಪ ಮಾಡಬಹುದು ಅವರು react ಮಾಡಿರುವುದು ನಮ್ಮ ವಕ್ತಾರ ಎಂದು ಆ ತರಹ ಇರುವುದರಿಂದ ಮಧ್ಯದ ಅವಧಿಯಲ್ಲಾಗಿದ್ದರೆ ಮಾತ್ರ ಶೂನ್ಯವೇಳೆಯ ಪ್ರಶ್ನೆ ಬರುತ್ತದೆ ನಮಗೆ ಅದರ notice ಕೊಟ್ಟಿಲ್ಲ ಸದನಕ್ಕೂ ಕೊಟ್ಟಿಲ್ಲ ಶೂನ್ಯವೇಳೆಯಲ್ಲಿ ಪ್ರಸ್ತಾಪವಾದರೆ, ನಮಗೆ ಪ್ರತಿಕ್ರಿಯೆ ನೀಡಲು ಕಷ್ಟವಾಗುತ್ತದೆ

ಶ್ರೀ ಎನ್ ಧರ್ಮಸಿಂಗ್ ಕಾವೇರಿ ರಾಜ್ಯದ ಅತ್ಯಂತ ಜಟಿಲವಾದ ಸಮಸ್ಯೆ ನಾಳೆ ಪ್ರಧಾನಮಂತ್ರಿ ಬಳಿಗೆ ನಿಯೋಗ ಹೋಗುತ್ತಿರುವುದಾಗಿ ಮುಖ್ಯಮಂತ್ರಿಗಳು ಹೇಳಿದ್ದಾರೆ ತಾವೇ ಹೋಗುತ್ತೇವೆಂತಲೂ ಹೇಳಿದ್ದಾರೆ ಇದಕ್ಕೆ ಯಾವ ನಿಯಮವಿದೆ? ಕಾವೇರಿ ಬಗ್ಗೆ ನಿನ್ನೆ ನಡೆದಂಥ ಬಂದ್ ಏನಿದೆ, ಅದರ ಹಿನ್ನೆಲೆಯಲ್ಲಿ ಆಗತಕ್ಕಂಥ ವಿವರಗಳನ್ನು ಪ್ರಸ್ತಾಪ ಮಾಡುತ್ತಿದ್ದೇವೆ ಕಾವೇರಿ ಬಗ್ಗೆ ಪ್ರಸ್ತಾಪಿಸಲು ಶೂನ್ಯವೇಳೆಯಲ್ಲಿ ಯಾವ ನಿಯಮ ಬೇಕು? ಇವತ್ತು ಎಲ್ಲ ಜನರಿಗೂ ಕಾವೇರಿ ನೀರು ಬೇಕು ನಾವು ಒಪ್ಪುತ್ತೇವೆ ತಾವು ಸಂಸದೀಯ ವ್ಯವಹಾರಗಳ ಮಂತ್ರಿಗಳಾಗಿದ್ದೀರಿ ಯಾವ ನಿಯಮದೊಳಗೆ ತಾವು ಪ್ರಸ್ತಾಪ ಮಾಡಿದ್ದೀರಿ? ಎಲ್ಲರೂ ಮಾತನಾಡುತ್ತಿರುವುದನ್ನು ಒಪ್ಪುತ್ತೇವೆ ಆದರೆ, ಜಟಿಲವಾದ ಇಂತಹ ಒಂದು ವಿಷಯದ ಬಗ್ಗೆ ತಾವು ಆಕ್ಷೇಪಣೆ ಮಾಡಬಾರದು ನಾವು ಏನು ಹೇಳಬೇಕಾಗಿದೆಯೋ, ಅದನ್ನು ಹೇಳುತ್ತೇವೆ ಸರ್ಕಾರದ ಕಡೆಯಿಂದ ಉತ್ತರ ಕೊಡಬೇಕು

ಶ್ರೀ ಎಂ ಪಿ ಪ್ರಕಾಶ್. ನಮಗೆ ಆ notice ಆದರೂ ಬೇಕಲ್ಲ ನಮ್ಮಿಂದ ತಾವು ಉತ್ತರ ಬಯಸುತ್ತೀರಿ ಆ notice ಆದರೂ ಕೊಡಬೇಕು ಕಛೇರಿಯಲ್ಲಾದರೂ ಇರಬೇಕು ವಿಷಯವನ್ನು ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡಿದರೂ ಕೂಡ ನಾವು ಅದಕ್ಕೆ ಆಕ್ಷೇಪಣೆ ಮಾಡುತ್ತಿಲ್ಲ ಇದಕ್ಕೆ ನಾವು ಉತ್ತರ ಕೊಡಬೇಕಲ್ಲ ಆ noticeನ copy ಆದರೂ ಬೇಕಲ್ಲ ನೋಡಿ, all of a sudden ಹೇಳಿದರೆ ನಮಗೆ ಪ್ರತಿಕ್ರಿಯೆ ನೀಡಲು ಕಷ್ಟವಾಗುತ್ತದೆ

ಶ್ರೀ ಕೆ ಆರ್ ರಮೇಶ್‌ಕುಮಾರ್ It is only mentioning

ಶ್ರೀ ಎಂ ಪಿ ಪ್ರಕಾಶ್ ವಿಷಯವನ್ನು mention ಮಾಡಲಿ ಈಗ ದೀರ್ಘವಾಗಿ ಎಲ್ಲರೂ ಮಾತನಾಡುವುದಕ್ಕೆ ಅವಕಾಶವಿದೆ ತಮಗೂ ಗೊತ್ತಿರುವಂತೆ, ಶೂನ್ಯವೇಳೆಯಲ್ಲಿ ವಿಷಯವನ್ನು ಯಾರು ಪ್ರಸ್ತಾಪ ಮಾಡುತ್ತಾರೋ, ಅವರನ್ನು ಬಿಟ್ಟು ಬೇರೊಬ್ಬರು ಮಾತನಾಡಲು ಅವಕಾಶವಿಲ್ಲ

ಶ್ರೀ ಆರ್ ವಿ ದೇಶಪಾಂಡೆ ತಾವು ಆಕ್ಷೇಪಣೆ ಎತ್ತಿದಿರಲ್ಲ ಅದನ್ನು ತಾವು ಮುಂಚಿತವಾಗಿಯೇ ಹೇಳಬೇಕಾಗಿತ್ತು

ಶ್ರೀ ಎಂ ಪಿ ಪ್ರಕಾಶ್ ವಿರೋಧ ಪಕ್ಷದ ನಾಯಕರು ಹೇಳುತ್ತಾರೆಂದಾಗ ನಾವು ಅದಕ್ಕೆ ಗೌರವ ಕೊಡಬೇಕಾಗುತ್ತದೆ

ಶ್ರೀ ಆರ್ ವಿ ದೇಶಪಾಂಡೆ ತಾವು ಮುಂಚಿತವಾಗಿಯೇ ಆಕ್ಷೇಪಣೆ ಎತ್ತಿದ್ದರೆ, I could understand, ಅದರ ಬಗ್ಗೆ debate ಸಹ ಆಗುತ್ತಿತ್ತು ಆದರೆ, ನೀವು ಮುಂಚಿತವಾಗಿ ಆಕ್ಷೇಪವೆತ್ತಿಲ್ಲ ಮಾನ್ಯ ವಿರೋಧ ಪಕ್ಷದ ನಾಯಕರು ಏನು ಹೇಳಿದ್ದಾರೆ, ಅದರ ಬಗ್ಗೆ ಮಾನ್ಯ ಖರ್ಗೆಯವರು ಸಹ ಪ್ರಸ್ತಾಪಿಸುತ್ತಿದ್ದಾರೆ, ಮಾನ್ಯ ಅಧ್ಯಕ್ಷರು ಅನುಮತಿ ಕೊಟ್ಟಿದ್ದಾರೆ ಇಂತಹ ಪರಿಸ್ಥಿತಿಯಲ್ಲಿ ತಾವು ಈಗ ಆಕ್ಷೇಪಣೆ ಎತ್ತಿದರೆ ಹೇಗೆ? ಕಾವೇರಿ ಬಗ್ಗೆ ಪ್ರಸ್ತಾಪವಾಗಬಾರದೆಂದು ಏನಾದರೂ ತಮ್ಮ ಮನಸ್ಸಿನಲ್ಲಿದೆಯೇ? ಹಾಗಿದ್ದರೆ, ಹೇಳಿ ಮೊದಲು ತಾವು ಹೇಳಿದ ಹಾಗೆ 24 ಗಂಟೆಯಲ್ಲಿ ಏನಾಗಿದೆ, ಆಗಿದೆ, ಅದನ್ನು ಹೇಳುತ್ತಾರೆ ಮಾನ್ಯ ಮುಖ್ಯಮಂತ್ರಿಗಳು statement ಮಾಡಿದ್ದಾರೆ

ಅಧ್ಯಕ್ಷರು ಇದು ಬಹಳ ಪ್ರಾಮುಖ್ಯವಾದ ವಿಚಾರ ಇದು emotional subject ಆದ್ದರಿಂದ, ಮಾನ್ಯ ವಿರೋಧ ಪಕ್ಷದ ನಾಯಕರು ಪ್ರಸ್ತಾಪ ಮಾಡಿದಾಗ ನಾನು ಸುಮ್ಮನೆ ಅವಕಾಶ ಮಾಡಿಕೊಟ್ಟಿದ್ದೇನೆ ಅದರ ಬಗ್ಗೆ ವಿವರವಾದ ಚರ್ಚೆಯ ಅಗತ್ಯವಿಲ್ಲ ಅವರು ಗಮನ ಸೆಳೆದಿದ್ದರೂ, ನೀವು ಏನು ಹೇಳಬೇಕೋ ಹೇಳಿ,

ಶ್ರೀ ಮಲ್ಲಿಕಾರ್ಜುನ ಖರ್ಗೆ ನಾನು ಚರ್ಚೆ ಮಾಡುವುದಕ್ಕೆ ಹೋಗುತ್ತಿಲ್ಲ ಕೇವಲ ಕೆಲವು ವಿಷಯಗಳು ಮಾತ್ರ ತಮ್ಮ ಗಮನಕ್ಕೆ, ಸದನದ ಗಮನಕ್ಕೆ ಮತ್ತು ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ ಅಂದರೆ, ಎಷ್ಟರ ಮಟ್ಟಿಗೆ ಇದು ಸಮಂಜಸ? ನಾವು ಒಗ್ಗಟ್ಟಿನ ಪ್ರದರ್ಶನ ಮಾಡಿದರೂ ಕೂಡ ಒಡಕಿನ ಮಾತನಾಡತಕ್ಕಂಥಾದ್ದು ಒಳ್ಳೆಯದೇ? ಅಥವಾ ತಾಳ್ಮೆ ಇಲ್ಲದೆ ಅದೇ ಮಾತನ್ನು ನಮ್ಮ ಸರ್ವ ಪಕ್ಷದ ಸಭೆಯಲ್ಲಿ ಹೇಳಿ ಅಥವಾ ನಮ್ಮನ್ನು ಕರೆದು ಹೇಳಿದಿರಿ ನೋಡಿ ಈ ರೀತಿಯಾಗಿದೆ, ಈ ರೀತಿಯಾಗಿ ನಾವು ನಡೆದುಕೊಳ್ಳಬೇಕೆಂದಿದ್ದರೆ, ಒಪ್ಪಿಕೊಳ್ಳಬಹುದು ಆದರೆ, ಪತ್ರಿಕೆಗಳ ಮುಖಾಂತರ ಎಲ್ಲರೂ ಹೇಳಿಕೆಗಳನ್ನು ಕೊಟ್ಟುಕೊಂಡು ಹೋದರೆ ಇಲ್ಲೇನಾಗುತ್ತದೆ? ಕೊನೆಗೆ, ಪಕ್ಷ ರಾಜಕಾರಣ ಬರುತ್ತದೆಯೇ ಹೊರತು ರಾಜ್ಯದ ಹಿತ ಮತ್ತು ರೈತರ ಹಿತವನ್ನು ನಾವು ಬದಿಗಿಟ್ಟಂತಾಗುತ್ತದೆ ಅದಕ್ಕೋಸ್ಕರ, ನಾನು ಇದನ್ನು ಪ್ರಸ್ತಾಪ ಮಾಡಿದ್ದು ಅದಕ್ಕೆ ಅವರು ಉತ್ತರ ಕೊಡಬೇಕೆಂದೇನೂ ಇಲ್ಲ ಅನೇಕ ಸಲ ಯಾವ ರೀತಿಯಾಗಿ ನಡೆದಿದೆ? ಏನು ನಡೆದಿದೆಯೆಂದು ಗೊತ್ತಿದೆ ಸುಪ್ರಿಂಕೋರ್ಟ್‌ನಲ್ಲಿ 2 ಸಲ ನಮ್ಮ petition

P2
13

ಯಾವ ರೀತಿ ತಿರಸ್ಕೃತವಾಯಿತು? ಅದಕ್ಕೆ ಯಾರು ಕಾರಣರು? ಏನೆಂದು ನಾವು ಹೇಳುವುದಕ್ಕೆ ಹೋಗುವುದಿಲ್ಲ ಆದರೆ, ಒಂದು ಮಾತನ್ನು ನಾನು ಸ್ಪಷ್ಟವಾಗಿ ಕೇಳುವುದಕ್ಕೆ ಇಷ್ಟಪಡುತ್ತಿದ್ದೇನೆ ಸರ್ವ ಪಕ್ಷಗಳ ಸಭೆಯಾದ ನಂತರ ಒಂದು ತೀರ್ಮಾನ ತೆಗೆದುಕೊಂಡು ತದನಂತರ ನಾವು ಮುಂದಿನ ನಿರ್ಣಯ ಕೈಗೊಳ್ಳಬೇಕೆಂಬುದು ತೀರ್ಮಾನವಾದ ನಂತರ ಸರ್ವಾನುಮತದಿಂದ ಹೆಚ್ಚು ಕಡಿಮೆ ಬಂದರೂ ಕೂಡ ಸರ್ಕಾರ ಪ್ರತ್ಯಕ್ಷವಾಗಿ, ಅಪ್ರತ್ಯಕ್ಷವಾಗಿ ಬೆಂಬಲ ನೀಡಿತು ಸರ್ವ ಪಕ್ಷದವರು ಬೆಂಬಲ ನೀಡಿದರು ಇವತ್ತು ಬಹಳ ಯಶಸ್ವಿಯಾಗಿ ಶಾಂತ ರೀತಿಯಿಂದ ಜನತೆ ಬಂದ್ ಆಚರಣೆ ಮಾಡಿದೆ ಬೀದರ್‌ನಿಂದ ಕೋಲಾರದವರೆಗೆ ಮತ್ತು ಹಾಸನ, ಮಂಡ್ಯದಿಂದ ಬೆಳಗಾಂವರೆಗೆ ಎಲ್ಲರೂ ಕೂಡ ಸಹಕರಿಸಿದ್ದಾರೆ ನಿಜವಾಗಿಯೂ, ಈ ಸದನದ ಮುಖಾಂತರ ಈ ರಾಜ್ಯದ ಜನತೆಗೆ ನಾನು ಅಭಿನಂದನೆಗಳನ್ನು ಸಲ್ಲಿಸುತ್ತೇನೆ ಎಲ್ಲಾ ಸಂಘಟನೆಗಳಿಗೂ ಕೂಡ ನಾನು ಅಭಿನಂದಿಸುತ್ತೇನೆ ರೈತರಿಗೂ ಅಭಿನಂದಿಸುತ್ತೇನೆ ಹಿಂದೆ ಬಂದ್ ಆದ ಸಮಯದಲ್ಲಿ ಎಷ್ಟೋ ಸಲ ಅನಾಹುತಗಳಾಗಿದ್ದನ್ನು ನಾವು ಕಣ್ಣಾರೆ ನೋಡಿದ್ದೇವೆ ಆದರೆ ಈ ಸಲ ಆ ರೀತಿ ಆಗಿಲ್ಲ ಈಗ ನಾನು ಇನ್ನೊಂದು ಮಾತು ಹೇಳಿದರೆ ನೀವು ಸಿಟ್ಟಿಗೆ ಬರುತ್ತೀರಿ ಗದ್ದಲ ಮಾಡಿಸುವವರು ಅಧಿಕಾರದಲ್ಲಿ ಇದ್ದ ಮೇಲೆ ಗದ್ದಲ ಎಲ್ಲಿ ಆಗುತ್ತದೆ?

ಶ್ರೀ ಎಂ ಪಿ ಪ್ರಕಾಶ್ ಪಾಪ! ತಾವು ಅಭಿನಂದನೆ ಸಲ್ಲಿಸಿದಿರಿ

ಶ್ರೀ ಮಲ್ಲಿಕಾರ್ಜುನ ಖರ್ಗೆ ನಾನು ಎಲ್ಲರದ್ದೂ ಎಂದು ಹೇಳುತ್ತಿದ್ದೇನೆ ಅದಕ್ಕೋಸ್ಕರ, ಇಡೀ ರಾಜ್ಯಾದ್ಯಂತ ಶಾಂತ ವಾತಾವರಣದಲ್ಲಿ ಬಂದ್ ಆಯಿತು ಅದಕ್ಕೋಸ್ಕರ, ನಿಜವಾಗಿಯೂ ಈ ಸದನ ಜನರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತದೆ ನಾವೆಲ್ಲರೂ ಕೂಡ ಅಭಿನಂದನೆಗಳನ್ನು ಸಲ್ಲಿಸುತ್ತೇವೆ ಇದರಲ್ಲಿ ಎಲ್ಲರೂ ಸಹಕರಿಸಿದ್ದಾರೆ ಪತ್ರಿಕಾ ಮಿತ್ರರು ಇರಬಹುದು, ಕನ್ನಡ ಪರ ಚಳವಳಿಗಾರರು ಇರಬಹುದು, ಎಲ್ಲಾ ಸಂಘಟನೆಗಳೂ ಸರ್ಕಾರ ಆದಿಯಾಗಿ, ವಿರೋಧ ಪಕ್ಷಗಳಾದಿಯಾಗಿ ಎಲ್ಲರೂ ಒಮ್ಮತದಿಂದ ಇದ್ದರೂ ಒಡಕಿನ ಮಾತನ್ನು ನೀವೇ ತರುತ್ತಿದ್ದೀರಲ್ಲ ಈ ಒಡಕಿನ ಮಾತು ತರುವುದರಿಂದ ಇವತ್ತು ಏನಾಗಿದೆಯೆಂದರೆ, ನಮ್ಮೆಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ನಿರ್ಣಯ ತೆಗೆದುಕೊಳ್ಳುತ್ತೇವೆ ಎಂದು

ಹೇಳಿ ತರಾತುರಿಯಲ್ಲಿ ಯಡಿಯೂರಪ್ಪನವರು ದೆಹಲಿಗೆ ಹೋಗಿ, ನಾವೇ Prime Minister ಭೇಟಿಗೆ date fix ಮಾಡುತ್ತೇವೆಂದು ಹೇಳಿದರು ಹಾಗೆಯೇ, ರಾಷ್ಟ್ರಾಧ್ಯಕ್ಷರ ಭೇಟಿಗೂ date ಅನ್ನು fix ಮಾಡಿ ಕಾವೇರಿ ಬಗ್ಗೆ ಮಾತನಾಡುತ್ತೇವೆಂದು ಹೇಳಿಕೆ ಕೊಟ್ಟರು ತಾವೂ ಕೂಡ ನಾನೂ ಹೋಗುತ್ತೇನೆಂದು ಒಂದು ಹೇಳಿಕೆ ಕೊಟ್ಟಿರಿ ನಾನೇ ಹೋಗುತ್ತೇನೆ, ಅವರನ್ನು ಭೇಟಿಯಾಗುತ್ತೇನೆ ಎಂದರೆ, ಸರ್ವ ಪಕ್ಷಗಳ ಸಭೆ ಕರೆಯದೆ ನಮ್ಮೆಲ್ಲರ ಅಭಿಪ್ರಾಯಗಳನ್ನು ತೆಗೆದುಕೊಳದೇ, floor leaders ಕೂಡ ಕರೆಯದೇ ಮುಂದಿನ ಹೆಜ್ಜೆ ಏನು ಎನ್ನತಕ್ಕಂಥಾದ್ದನ್ನು ಕೂಡ ಗಣನೆಗೆ ತೆಗೆದುಕೊಳ್ಳದೇ ತಾವು ಈ ರೀತಿ ಏಕಪಕ್ಷೀಯವಾಗಿ ನಾವು ನಾಳೆ ಹೋಗುತ್ತೇ" ಎಂದರೆ, ನಾವೇನು ಮಾಡಬೇಕು? ನಾವು ಕೈಕಟ್ಟಿಕೊಂಡು ಕೂರಬೇಕೆ? ಅಥವಾ ನಾವು ಮೂಕಪ್ರೇಕ್ಷಕರಾಗಿ ಇರಬೇಕೇ? ನಾವೇನು ಮಾಡಬೇಕು ಹೇಳಿ? ಅಂದರೆ, ಈ ರೀತಿಯಾಗಿ ವಿಶ್ವಾಸಕ್ಕೆ ತೆಗೆದುಕೊಳ್ಳುವಂತೆ ಮಾಡುವುದು, ಒಗ್ಗಟ್ಟಿನ ಪ್ರದರ್ಶನ ತೋರಿಸುತ್ತೇವೆಂದು ಹೇಳುವುದು, ನಮಗೆ ಒಗ್ಗಟ್ಟಿನ ಮಾತು ಹೇಳುವುದು, ರೈತರ ಪರವಾಗಿ ಮಾತು ಹೇಳುವವರು, ನೀವು ಪುನ ಅದರೊಳಗೆ ರಾಜಕೀಯ ಮಾಡುವುದು, ಈ ರೀತಿಯಾಗಿ ಮಾಡಿದರೆ, ಅಧ್ಯಕ್ಷರೆ, ಯಾವ ರೀತಿಯಾಗಿ ರೈತರ ಹಿತ ಕಾಪಾಡುತ್ತೀರಿ ಎಂಬುದನ್ನು ತಾವೇ ಹೇಳಿ ನನ್ನ ಜಾಗದಲ್ಲಿದ್ದರೆ, ತಾವು ಕೇಳಬೇಕು ಅದವಾ ಏಕಾಏಕಿಯಾಗಿ decision ತೆಗೆದುಕೊಂಡು ನೀವು ಮಾಡಿದರೆ, ಇದು ಎಷ್ಟರ ಮಟ್ಟಿಗೆ ನ್ಯಾಯ? ದುರ್ದೈವದಿಂದ ನೀವು ಏನೇ ಹೇಳಿದರೂ ಕೂಡ ಅದಕ್ಕೆ ಹೆಚ್ಚಿನ ಮಹತ್ವ ಬರುತ್ತದೆ ಮತ್ತು ಇಂತಹ ಲೋಪಗಳ ಮಧ್ಯೆ ಇವತ್ತಿನ ದಿವಸ ಯಾವ ಪಕ್ಷವನ್ನು ಕೂಡ ವಿಶ್ವಾಸಕ್ಕೆ ತೆಗೆದುಕೊಳ್ಳದೇ ನಾವು ಏಕಾಏಕಿ ನಿರ್ಣಯಗಳನ್ನು ಮಾಡತಕ್ಕಂಥಾದ್ದು ಸರಿಯಲ್ಲ, ಸಮಂಜಸವೂ ಅಲ್ಲ ಇದರಿಂದ ಒಡಕುಂಟಾಗುತ್ತದೆ ನಾಳೆ ನೀವು ಒಂದು delegation ಹೋದರೆ, ನಾವೂ ಒಂದು delegation ಹೋಗಬೇಕು ನೀವು ಹೇಳತಕ್ಕಂಥ ಮಾತಿಗೆ ನಾವು ಬೇರೆ ಹೋಗಿ, ಅದಕ್ಕೋಸ್ಕರ, ನಾವೂ ಕೂಡ ಬಂದಿದ್ದೇವೆಂದು ಹೇಳಬೇಕು ಅಂದರೆ, ಏನರ್ಥ? You do not want to take all the leaders into confidence ಮತ್ತು ಯಾವ political partyಗೆ ನೀವು ಮಾತು ಕೊಟ್ಟಿದ್ದೀರಿ, ಆ ಮಾತಿನ ಪ್ರಕಾರ ನಡೆದುಕೊಳ್ಳುತ್ತಿಲ್ಲ ನಿಜವಾಗಿಯೂ ಇದೊಂದು

ದುರ್ದೈವ ಹಾಗೂ ದುಃಖಕರವಾದ ಸಂಗತಿ ಈ ರೀತಿಯಾಗಿ ನೀವು ನಡೆದುಕೊಳ್ಳುವುದು, ಪುನ ಇನ್ನೊಂದು ಪಕ್ಷಗಳ ಮೇಲೆ ಗೂಬೆ, Central Government ಮೇಲೆ ಗೂಬೆ ಕೂರಿಸುವುದು, tribunalನಲ್ಲಿ ಆದಂತ ನಿರ್ಣಯಗಳ ಬಗ್ಗೆ ಏನಾದರೊಂದು ನಮಗೆ ಹೇಳುವುದು ಅಥವಾ Supreme Courtನಲ್ಲಿ ಆದಂಥ ನಿರ್ಣಯಗಳಿಗೆ ಪಕ್ಷವನ್ನು ತಲೆ ಮೇಲೆ ಕಟ್ಟುವುದು, ಈ ರೀತಿಯಾಗಿ ಕ್ಷುಲ್ಲಕ ರಾಜಕಾರಣ ಮಾಡಿದರೆ ನಿಜವಾಗಿಯೂ ಇದು ಯಾರಿಗೂ ಶೋಭೆ ತರತಕ್ಕಂಥಾದ್ದಲ್ಲ ಇದರಿಂದ ಪುನ ರಾಜ್ಯದಲ್ಲಿ ವಾತಾವರಣ ಕೆಡಿಸತಕ್ಕಂಥಾದ್ದು ಆಗುತ್ತದೆಯೇ ಹೊರತು ತಿಳಿ ವಾತಾವರಣ ಇರುವುದಿಲ್ಲ ಎನ್ನುವ ಮಾತನ್ನು ಬಹಳ ಸ್ಪಷ್ಟವಾಗಿ ಹೇಳುವುದಕ್ಕೆ ಬಯಸುತ್ತಿದ್ದೇನೆ ಯಾವ ಕಾರಣಕ್ಕಾಗಿ ಇಂತಹ ಒಂದು unilateral decision ಅನ್ನು ನೀವು ತೆಗೆದುಕೊಂಡಿದ್ದೀರಿ ಉಪ ಮುಖ್ಯಮಂತ್ರಿಗಳು ನೀವು ತೀರ್ಮಾನ ತೆಗೆದುಕೊಂಡು, ಈ ಘೋಷಣೆ ಮಾಡಿದಿರಿ ಯಾವ ಮಾತನ್ನು ಈ ಸದನದಲ್ಲಿ ಹೇಳಬೇಕು ಯಾವ ಮಾತನ್ನು ಸರ್ವಪಕ್ಷದಲ್ಲಿ ಹೇಳಬೇಕು, ಯಾವ ಮಾತನ್ನು floor leaders ಗೂ ಹೇಳದೇ, ವಿರೋಧ ಪಕ್ಷದ ನಾಯಕರನ್ನು ಕರೆಯದೆ, ಹೇಳತಕ್ಕಂತದ್ದನ್ನು ಮಾಡಿದ್ದು, ನಿಜವಾಗಲೂ ಇದು ಅಕ್ಷಮ್ಯ ಅಪರಾಧ, ಇದು ಸರಿಯಲ್ಲ ಎನ್ನತಕ್ಕಂತಹ ಮಾತನ್ನು ನಾನು ಹೇಳುತ್ತೇನೆ ಇದನ್ನು ನಾನು ಖಂಡಿಸುತ್ತೇನೆ ಅದಕ್ಕೆ ಅವರು ಒಪ್ಪುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ ಏಕೆಂದರೆ ಹೇಳುವುದು ಒಂದು ,ತೋರಿಸುವುದು ಒಂದು ಮಾಡುವುದು ಒಂದು ಕೊಡುವುದು ಒಂದು ಹೇಳುವುದು ಒಂದು ನಿಜವಾಗಲೂ ಇದನ್ನು ನಾನು ಖಂಡಿಸುತ್ತೇನೆ

ಶ್ರೀ ವಾಟಾಳ್ ನಾಗರಾಜ್ ಮಾನ್ಯ ಮುಖ್ಯ ಮಂತ್ರಿಗಳ ಪ್ರತಿಕ್ರಿಯೆ ಪತ್ರಿಕೆಗಳಲ್ಲಿ ಬಂದಿದೆ ಪ್ರಪ್ರಥಮ ಬಾರಿಗೆ, ಅವರ ಪ್ರತಿಕ್ರಿಯೆ ಪತ್ರಿಕೆಯಲ್ಲಿ ಓದಿದೆ ಸಂತೋಷ ಅದರ ಬಗ್ಗೆ ಎರಡನೇ ಅಭಿಪ್ರಾಯವಿಲ್ಲ ನಮ್ಮ ಉದ್ದೇಶವೇನು?

ಶ್ರೀ ಮಲ್ಲಿಕಾರ್ಜುನ ಖರ್ಗೆ ಪತ್ರಿಕೆಗಳಲ್ಲಿ ಬಂದಿರುವುದಕ್ಕೆ ನಮ್ಮ ಅಭಿಪ್ರಾಯ ಬೇರೆ ಇದೆ

ಶ್ರೀ ವಾಟಾಳ್ ನಾಗರಾಜ್ ನಮ್ಮ ಮೇಲೆ ಬೀಳುತ್ತಿದ್ದಿರಲ್ಲ ಖರ್ಗೆ ಸಾಹೇಬರೇ, ನಾನು ಹೇಳುತ್ತಿದ್ದೇನೆ, ನಿಮ್ಮ ಮೇಲೆ ನಾನು ಏನೂ ಹೇಳಲಿಲ್ಲ

ಪ್ರಧಾನ ಮಂತ್ರಿಗಳನ್ನು ಭೇಟಿ ಮಾಡುತ್ತೇವೆಂದು ಹೇಳಿದ್ದಾರೆ ಒಂದು ಕಡೆ ಈಗಾಗಲೇ ಅವರು ಅದನ್ನೇ ಹೇಳಿದ್ದಾರೆ ಅದನ್ನೇ ನಾನು ಸಹ ಹೇಳುತ್ತಿದ್ದೇನೆ ವ್ರಧಾನ ಮಂತ್ರಿಗಳನ್ನು ಭೇಟಿ ಮಾಡುತ್ತೇವೆಂದು ಹೇಳಿದ್ದಾರೆ ಸರ್ವ ಪಕ್ಷಗಳ ಸಭೆ ಇನ್ನೂ ಅಪೂರ್ಣ, ನನ್ನ ಪ್ರಕಾರ ಇದು ಇಷ್ಟು ನಿಧಾನ ಆಗಲೇಬಾರದಾಗಿತ್ತು 5 ನೇ ತಾರೀಖು ನಮಗೆ ತೀರ್ಪು ಬಂತು ಈಗ 13ನೇ ತಾರೀಖು ಆಗಿದೆ ಇನ್ನೂ ನಾವು ಸ್ಪಷ್ಟವಾಗಿ ಏನು ಮಾಡಬೇಕು ಎನ್ನುವ ಒಂದು ಚಿತ್ರ ನಮ್ಮಲ್ಲಿ ಹೊರಗಡೆ ಬರಲೇ ಇಲ್ಲ ಈ ಸದನದಲ್ಲಿಯಾದರೂ ಅದು ತೀರ್ಮಾನವಾಗಬೇಕಾಗಿತ್ತು ಈ ಸದನದಲ್ಲಿ ನಾವು ಏನು ಮಾಡುತ್ತೇವೆ 5ನೇ ತಾರೀಖು ತೀರ್ಪು ಬಂತು ನಮಗೆ ಈ ತೀರ್ಪಿನಿಂದ ಆಗಿರತಕ್ಕಂತಹ ಅನಾನುಕೂಲಗಳು ಏನು? ರಾಜ್ಯಕ್ಕೆ ಆಗಿರತಕ್ಕಂತಹ ಅನ್ಯಾಯವೇನು ಎನ್ನುವುದರ ಬಗ್ಗೆ ಈಗಾಗಲೇ ಜನ ನಿನ್ನೆ ಇಡೀ ಒಕ್ಕೊರಲಿನಿಂದ ಪಕ್ಷ ಭೇದ ಮರೆತು ಯಾವುದೇ ಒಂದು ರೀತಿಯ ಅನಾಹುತವಾಗದೇ, ಇಡೀ ಸಮಗ್ರ ಕರ್ನಾಟಕವೇ, ನಿನ್ನೆ ಬಂದ್ ಮಾಡಿ ಸಂಪೂರ್ಣವಾಗಿ ಇಡೀ ರಾಜ್ಯ ಸರ್ಕಾರಕ್ಕೆ ನೀವು ಏನು ತೀರ್ಮಾನ ತೆಗೆದುಕೊಳ್ಳುತ್ತೀರಿ ಅದಕ್ಕೆ ನಾವು ತಯಾರಾಗಿದ್ದೇವೆ ಎನ್ನುವ ರೀತಿಯಲ್ಲಿ ಬೆಂಬಲವನ್ನು ಕೊಟ್ಟಿದ್ದಾರೆ ಜೊತೆಗೆ ಆ ತೀರ್ಪು ಅನ್ಯಾಯವಾಗಿದೆ ಎನ್ನುವಂತದ್ದನ್ನು ಸ್ಪಷ್ಟವಾಗಿ ನೇರವಾಗಿ ವ್ಯಕ್ತಪಡಿಸಿದ್ದಾರೆ ಅದರಲ್ಲೂ ಉತ್ತರ ಕರ್ನಾಟಕದ ಭಾಗದಲ್ಲಿ ಕೊಟ್ಟಂತಹ ಅಭೂತ ಪೂರ್ವವಾದಂತಹ ಸ್ವಾಗತಕ್ಕೆ ನಿಜಕ್ಕೂ ನಾನು ಅಭಿನಂದಿಸುತ್ತೇನೆ ಇದು ಬಹಳ ಒಳ್ಳೆಯ ಸೂಚನೆ ಇದು ನಮ್ಮ ರಾಜ್ಯದ ಹಿತದೃಷ್ಟಿಯಿಂದ ಒಳ್ಳೆಯ ಸೂಚನೆ ಎಂದು ನನಗನಿಸುತ್ತದೆ ಕಾವೇರಿ ನ್ಯಾಯಮಂಡಳಿಯವರು ಈ ತೀರ್ಪನ್ನು ಕೊಟ್ಟಿದ್ದಾರೆ ಅನೇಕರು ಇದನ್ನು ನೋಡಿದ್ದಾರೆ ಅನೇಕರು ಇದನ್ನು ಅಭ್ಯಾಸ ಮಾಡಿದ್ದಾರೆ ಈ ತೀರ್ಪು ನಿಜಕ್ಕೂ ನಮಗೆ ಮರಣಶಾಸನ ಅದರಲ್ಲಿ ಎರಡನೇ ಮಾತು ಇಲ್ಲವೇ ಇಲ್ಲ ನಮ್ಮ ರಕ್ಷಣೆಗೆ ಈಗ ಬರತಕ್ಕಂತಹವರು ಯಾರು ಎನ್ನತಕ್ಕಂತದ್ದು ಬಹಳ ಪ್ರಮುಖವಾದಂತಹ ಒಂದು ಆಂಶ, ನೀವು ಸರ್ವಪಕ್ಷಗಳು ಬೇಡ ಎನ್ನುವುದಾದರೆ ಅದು ತಮಗೆ ಸೇರಿದ್ದು ಸರ್ವ ಪಕ್ಷಗಳ ಸಭೆ ಬೇಡವೆಂದರೆ ಅದು ತಮಗೆ ಸೇರಿದ್ದು ನೀವು ಈಗ ಏನು ಹೊರಗಡೆ ಹೇಳಿದ್ದೀರಿ, ಆ ತೀರ್ಪನ್ನು ನಾವು ಒಪ್ಪುತ್ತೇವೆ ಅಥವಾ ತಿರಸ್ಕರಿಸುತ್ತೇವೆ

ಎನ್ನುವುದನ್ನು ಈ ಸದನದಲ್ಲಿ ಒಂದು ನಿರ್ಣಯದ ರೂಪದಲ್ಲಿಯಾದರೂ ತೆಗೆದುಕೊಂಡು ಬನ್ನಿ ಅಥವಾ ಸದನದಲ್ಲಿ ನಮ್ಮ ಸರ್ಕಾರದ ನಿಲುವು ಇದು, ಸ್ಪಷ್ಟ ಅಂತ ಈಗ ನೀವು ಏನು ಹೊರಗಡೆ ಹೇಳಿದ್ದೀರಿ, ಈ ತೀರ್ಮ ಏನಿದೆ ಈ ಬಗ್ಗೆ ನಾವು ಪ್ರಧಾನಿಯವರ ಮೇಲೆ ಒತ್ತಡ ತರುತ್ತಿದ್ದೇವೆ, ಮತ್ತು ಒಂದು ಕಡೆ ತಾವು ಏನು ಹೇಳಿದ್ದೀರಿ ಸ್ಪಷ್ಟವಾಗಿ ಹೇಳಿದ್ದೀರಿ ಪ್ರಧಾನಿಯವರನ್ನು ಭೇಟಿ ಮಾಡಿ ನ್ಯಾಯ್ಯಾಧೀಕರಣದ ತೀರ್ಪಿನಿಂದ ರಾಜ್ಯಕ್ಕೆ ಆಗಿರುವ ಅನ್ಯಾಯವನ್ನು ವಿವರಿಸುವ ಪತ್ರವನ್ನು ಖುದ್ದಾಗಿ ಹಸ್ತಾಂತರಿಸಲಾಗುವುದು, ಎಂದು ಹೇಳಿದ್ದೀರಿ ಏನು ಪತ್ರ? ಪತ್ರ ಬರೆಯತಕ್ಕಂತಹ ವಿಚಾರ ಏನು? ಅದಕ್ಕಿಂತ ಮೊದಲು ನಾವು ನಿಜವಾಗಿಯು ಎಲ್ಲರೂ ಪಕ್ಷಭೇದವಿಲ್ಲದೇ ಒಟ್ಟಾಗಿದ್ದೇವೆ, ಈ ರಾಜ್ಯದಲ್ಲಿ ನಾವೆಲ್ಲರೂ ಒಗ್ಗಟ್ಟಿನಿಂದ ಇದ್ದೇವೆ ಎನ್ನುವುದನ್ನು ಮೊದಲು ತೋರಿಸತಕ್ಕಂತಹ ಕಾರ್ಯ ಆಗಬೇಕು ಆದ್ದರಿಂದ ನಾವೆಲ್ಲರೂ ಯಾರೂ, ಯಾರ ಮೇಲೂ ಮಾತನಾಡದೇ "ನಿಮ್ಮಿಂದ ಆಯಿತು ನಿಮ್ಮ ಪಕ್ಷದಿಂದ ಆಯಿತು" ಎಂದು ಹೇಳುವುದು ಬೇಡ ನಾವೆಲ್ಲಾ ಒಟ್ಟಾಗಿದ್ದೇವೆ ನೀವು ಸರ್ವಪಕ್ಷಗಳ ನಿಯೋಗವನ್ನಾದರೂ ಕರೆದುಕೊಂಡು ಹೋಗಿ ಅಥವಾ ನೀವಿಬ್ಬರೇ ಹೋಗಿ ತೀರ್ಮಾನ ಮಾಡಿಕೊಂಡು ಬನ್ನಿ ನಮ್ಮ ಇಡೀ ರಾಜ್ಯದ ಸಮಸ್ಯೆಯನ್ನು ನೀವಿಬ್ಬರೇ ಬಗೆಹರಿಸಿಕೊಂಡು ಬಂದರೂ ನಾವು ಅದನ್ನು ಸ್ವಾಗತ ಮಾಡುತ್ತೇವೆ ಇದರಲ್ಲಿ ಯಾರು ಹೋಗಬೇಕು ನಾವು 15 ಜನ ಬರಬೇಕು ಎನ್ನತಕ್ಕಂತಹದ್ದು ಏನೂ ಇಲ್ಲ ನೀವಿಬ್ಬರೇ ಮುಖ್ಯಮಂತ್ರಿಗಳು, ಉಪ ಮುಖ್ಯಮಂತ್ರಿಗಳು ಪ್ರಧಾನ ಮಂತ್ರಿಗಳನ್ನು ಭೇಟಿ ಮಾಡಿ ನಮ್ಮ ರಾಜ್ಯಕ್ಕೆ ಆಗಿರುವ ಅನ್ಯಾಯಗಳ ಬಗ್ಗೆ ತಾವೇ ನೇರವಾಗಿ ಅದನ್ನು ತೀರ್ಮಾನ ಮಾಡಿಕೊಂಡು ಬಂದರೆ ಇಡೀ ರಾಜ್ಯದ ಜನತೆ ಸಂಪೂರ್ಣವಾಗಿ ಸ್ವಾಗತಿಸುತ್ತೇವೆ ನಿಮಗೆ ಅಭಿನಂದನೆಗಳನ್ನು ಸಲ್ಲಿಸುತ್ತೇವೆ ಇವತ್ತು ಸರ್ವಪಕ್ಷಗಳ ಸಭೆಯನ್ನು ತಾವು ಕರೆಯುತ್ತೇವೆಂದು ಹೇಳಿದಿರಿ ಒಂದು ವಾರದಲ್ಲಿ ಕರೆಯುತ್ತೇವೆಂದು ಹೇಳಿದಿರಿ ಬೇಗನೆ ಕರೆಯಬೇಕು ನಿಧಾನ ಮಾಡಿದಷ್ಟು ನಮಗೆ ಒಳ್ಳೆಯ ಸೂಚನೆಯಲ್ಲ ನಿಧಾನ ಮಾಡಿದಷ್ಟು ನಮಗೆ ಒಳ್ಳೆಯದಾಗುತ್ತದೆ ಎನ್ನತಕ್ಕಂಥದ್ದು ಇಲ್ಲ ಒಂದು ಮಾತು, ಮಾನ್ಯ ಮುಖ್ಯಮಂತ್ರಿಗಳಿಗೆ ಹೇಳುತ್ತೇನೆ, ಸರ್ಕಾರದ ನಿಲುವನ್ನು ತಾವು ಸ್ಪಷ್ಟಪಡಿಸಿ ಎರಡನೆಯದಾಗಿ ಈ ತೀರ್ಪನ್ನು ನಾವು ಸಾರಾಸಗಟಾಗಿ

ತಳ್ಳಿ ಹಾಕಿದ್ದೇವೆ ಎನ್ನತಕ್ಕಂತಹ ಧ್ವನಿ ಈ ಸದನದ ಮೂಲಕ ಇಡೀ ರಾಜ್ಯಕ್ಕೆ ಹೋದಾಗ ಅದಕ್ಕೆ ಒಂದು ಶಕ್ತಿ ಬರುತ್ತದೆ ಆದ್ದರಿಂದಲೇ ಈ ಸದನದಲ್ಲಿ ಬೇರೆ ಎಲ್ಲವನ್ನೂ ಚರ್ಚೆ ಮಾಡುತ್ತಿದ್ದೇವೆ ಕಾವೇರಿ ಪ್ರಶ್ನೆಯನ್ನು ಚರ್ಚೆ ಮಾಡುತ್ತಿಲ್ಲ ಎನ್ನತಕ್ಕಂಥದ್ದು ನಾನು ಮೊದಲಿನಿಂದಲೂ ಹೇಳುತ್ತಿದ್ದೇನೆ ಆ ದೃಷ್ಟಿಯಿಂದ ಸರ್ಕಾರ ಮಾಡಬೇಕಾದಂತಹ ಮೊದಲನೇ ಕೆಲಸ ತಕ್ಷಣ ಒಂದು ಈ ತೀರ್ಪನ್ನು ನಾವು ಸಾರಾಸಗಟಾಗಿ ತಳ್ಳಿ ಹಾಕಿದ್ದೇವೆ ಇದು ಕರ್ನಾಟಕದ ಪಾಲಿಗೆ ನಿಜಕ್ಕೂ ಅನ್ಯಾಯವಾಗಿದೆ ಇದು ಕನ್ನಡಿಗರ ಪಾಲಿಗೆ ಮರಣಶಾಸನ ಎಂಬುದನ್ನು ಸ್ಪಷ್ಟವಾಗಿ ಹಾಗೂ ನೇರವಾಗಿ ಹೇಳಬೇಕು ಈ ಸದನ ಒಂದು ನಿರ್ಣಯ ಮಾಡಬೇಕು ಇಂತಹ ನಿರ್ಣಯಗಳು ಕಷ್ಟ ಬಂದಾಗ ನಾವು ಮಾಡಿದ್ದೇವೆ ಅನೇಕ ಸಾರಿ ಮಾಡಿದ್ದೇವೆ ಮಹಾಜನ್ ವರದಿ ಬಂದಾಗ ಎಷ್ಟು ನಿರ್ಣಯಗಳು ಇಲ್ಲಿ ಆಗಿದೆ ಆದ್ದರಿಂದ ಈಗ ಈ ರಾಜ್ಯಕ್ಕೆ ಬೆಂಕಿ ಬಿದ್ದಿದೆ ಅದರಲ್ಲಿ ಏನೂ ಅನುಮಾನವಿಲ್ಲ ನನಗನಿಸುತ್ತದೆ ಈ ತೀರ್ಪಿನ ಬಗ್ಗೆ ಅನೇಕ ಜನ ಅಭ್ಯಾಸ ಮಾಡಿದ್ದಾರೆ ಅದರ ಬಗ್ಗೆ ಎರಡನೇ ಅಭಿಪ್ರಾಯವಿಲ್ಲ ಈ ತೀರ್ಪಿನಿಂದ ನಮಗೆ ಸಂಪೂರ್ಣವಾಗಿ ಅನ್ಯಾಯ, ಅನ್ಯಾಯ, ಆ ದೃಷ್ಟಿಯಿಂದ ಸರ್ಕಾರ ಏನು ತಿರುವು ತೆಗೆದುಕೊಳ್ಳುತ್ತೀರಿ, ಅದನ್ನು ಒಂದು ನಿರ್ಣಯ ರೂಪದಲ್ಲಿ ಮಾಡಲೇಬೇಕು, ತಾವೆಲ್ಲರೂ ಒಕ್ಕೂರಲಿನಿಂದ ನಿರ್ಣಯ ಮಂಡಿಸದಿದ್ದರೆ ನಾವು ಮಂಡಿಸುತ್ತೇವೆ ನಮಗಾದರೂ ಹೇಳಿ ನಾವು ಮಂಡಿಸುತ್ತೇವೆ ಯಾವುದಾದರೊಂದು ತೀರ್ಮಾನ ಮಾಡಿ ಅಥವಾ ಸದನವನ್ನು ಮುಂದಕ್ಕೆ ಹಾಕಿ, ನಾವೆಲ್ಲಾ ಒಳಗಡೆ ಕುಳಿತುಕೊಂಡು ಗೌಪ್ಯವಾಗಿ ಮಾತನಾಡಿ, ಯಾವ ರೀತಿ ನಿರ್ಣಯ ತರಬೇಕು ಎಂದು ಒಂದು ತೀರ್ಮಾನಕ್ಕೆ ಬನ್ನಿ ನಾವಂತೂ ತಯಾರಾಗಿದ್ದೇವೆ ತಾವು ಒಂದು ತೀರ್ಮಾನಕ್ಕೆ ಬರಬೇಕೆಂದು ನಾನು ತಮ್ಮಲಿ ಕಳಕಳಿಯಿಂದ ಮನವಿ ಮಾಡುತ್ತೇನೆ

ಶ್ರೀ ಸಿದ್ಧರಾಮಯ್ಯ (ಚಾಮುಂಡೇಶ್ವರಿ) ಕಾವೇರಿ ನೀರಿಗೆ ಸಂಬಂಧಪಟ್ಟಂತೆ ರಾಜ್ಯ ಸರ್ಕಾರದ ಹೋರಾಟ ಏನಿದೆ ಅಥವಾ ರಾಜ್ಯದ ಹೋರಾಟ ಏನಿದೆ ಈ ಹೋರಾಟದಲ್ಲಿ ಇವತ್ತಿನವರೆಗೆ ರಾಜಕಾರಣವಾಗಿಲ್ಲ ಅದು ಟ್ರಿಬ್ಯುನಲ್ ರಚನೆಯಾದಂತಹ ಸಂದರ್ಭವಿರಬಹುದು, ಅದಕ್ಕಿಂತ ಹಿಂದೆ 1970 ರಿಂದ ಇವತ್ತಿನವರೆಗೆ ಕರ್ನಾಟಕ ರಾಜ್ಯದಲ್ಲಿ ಈ ವಿಚಾರದಲ್ಲಿ ಯಾವುದೇ

ಪಕ್ಷ ಪಕ್ಷಭೇದ ನಡೆಯುವಂತಹ ಕೆಲಸ ಆಗಿಲ್ಲ ನಾವೆಲ್ಲಾ ಒಗ್ಗಟ್ಟಿನಿಂದ, ಒಕ್ಕೂರಲಿನಿಂದ ಹೋರಾಟ ಮಾಡಿಕೊಂಡು ಬಂದಿದ್ದೇವೆ ಏಕೆಂದರೆ ಇದು ಬರೀ ಕಾವೇರಿ ಜಲಾನಯನ ಪ್ರದೇಶದ ಜನರಿಗೆ ಅಷ್ಟೇ ಸೀಮಿತವಲ್ಲ ಇಡೀ ರಾಜ್ಯಕ್ಕೆ ಸಂಬಂಧಪಟ್ಟಂತಹ ವಿಚಾರ ಅದು ಆಗಲೇ ನಿನ್ನೆ ಬಂದಿದೆ ಇಡೀ ರಾಜ್ಯದ ಜನತೆ ಸ್ಪಂದಿಸಿದ್ದಾರೆ ಉತ್ತರ ಕರ್ನಾಟಕದಲ್ಲೂ ಸಹ ಎಲ್ಲಾ ಜನರೂ ಸ್ಪಂದಿಸಿದ್ದಾರೆ 27 ಜಿಲ್ಲೆಗಳಲ್ಲಿ ಸ್ಪಂದಿಸಿದ್ದಾರೆ ಈ ಟ್ರಿಬ್ಯುನಲ್‌ನ ಐತೀರ್ಪಿನಿಂದ ಕರ್ನಾಟಕಕ್ಕೆ ಅನ್ಯಾಯವಾಗಿದೆ ಇದರ ಬಗ್ಗೆ ಸರ್ವಸಮ್ಮತವಾಗಿ ಅನ್ಯಾಯವಾಗಿದೆ ಎಂದು ಎಲ್ಲರೂ ಹೇಳತಕ್ಕಂಥದ್ದು ಕಾನೂನು ತಜ್ಞರು ಇರಬಹುದು ರೈತ ಸಂಘಟನೆಗಳು ಇರಬಹುದು ಅಥವಾ ತಾಂತ್ರಿಕ ತಜ್ಞರು ಇರಬಹುದು ಇದರಲ್ಲಿ ಪರಿಣಿತಿ ಇರತಕ್ಕಂತಹವರು ಎಲ್ಲರೂ ಕೂಡ ಅನ್ಯಾಯವಾಗಿದೆ, ಘೋರ ಅನ್ಯಾಯವಾಗಿದೆ ಎಂದು ಹೇಳಿರುವುದರ ಬಗ್ಗೆ ಎರಡನೇ ಮಾತು ಇಲ್ಲ ಆದರೆ ಇವತ್ತು ಮುಖ್ಯಮಂತ್ರಿಗಳ ಒಂದು statement ನೋಡಿದ ಮೇಲೆ, ಇವರು ಏಕೆ ಈ ರೀತಿ ಹೇಳಿಕೆ ಕೊಟ್ಟಿದ್ದಾರೆಂದು ನನಗಂತೂ ಅರ್ಥವಾಗುತ್ತಿಲ್ಲ ಅವತ್ತು ಸರ್ವಪಕ್ಷಗಳ ಸಭೆ ಕರೆದಿದ್ದರು ಅಲ್ಲಿ ಏನೂ ವಿಚಾರ ಚರ್ಚೆಯಾಗಲಿಲ್ಲ ಸುದೀರ್ಘವಾಗಿ ಚರ್ಚೆ ಮಾಡುವುದಕ್ಕೆ ಆಗಲಿಲ್ಲ ಅಲ್ಲಿ ನಾವು ಎತ್ತಿದಂತಹ ಕೆಲವು ಪ್ರಶ್ನೆಗಳಿಗೆ ಅಲ್ಲಿಗೆ ಬಂದಿದ್ದ ವಕೀಲರುಗಳು, ನಾರಿಮನ್‌ರವರು ಈ ರೀತಿ ಹೇಳಿದ್ದಾರೆ Judgment ಬಂದ ತಕ್ಷಣವೇ ಅವರು ಈ ತರಹ ಪ್ರತಿಕ್ರಿಯೆ ಕೊಟ್ಟಿದ್ದಾರೆ ಮತ್ತು ಕಾತರಕಿಯವರು ಈ ರೀತಿ ಹೇಳಿದ್ದಾರೆ ಅಡ್ವೋಕೇಟ್ ಜನರಲ್ ಈ ತರಹ ಹೇಳಿದ್ದಾರೆ ತತ್‌ಕ್ಷಣದಲ್ಲೇ ಅವರು ಈ ಹೇಳಿಕೆಗಳನ್ನು ಕೊಟ್ಟಿರುವುದನ್ನು ನೋಡಿದರೆ, Judgement ನಿಂದ ನಮಗೆ ಸಮಾಧಾನವಾಗಿದೆ ಅನ್ನತಕ್ಕಂಥ ಅಭಿಪ್ರಾಯ ಬರುವಂತಹ ರೀತಿಯಲ್ಲಿ ಅವರು ಅಭಿಪ್ರಾಯಗಳನ್ನು ಕೊಟ್ಟಿದ್ದಾರೆ ಎಂದು ನಾವು ಇದೇ ಸದನದಲ್ಲಿ ಪ್ರಸ್ತಾಪ ಮಾಡಿದೆವು ನಾವು ಆ ರೀತಿ ಪ್ರಸ್ತಾಪ ಮಾಡಿದಾಗ, ಅದು ಅವರು ಕೊಟ್ಟಿರತಕ್ಕಂಥ ಹೇಳಿಕೆ, ಸರ್ಕಾರಕ್ಕೂ ಅದಕ್ಕೂ ಏನೇನೂ ಸಂಬಂಧವಿಲ್ಲವೆಂದು ಹೇಳಿದರು ಅವತ್ತು ಸರ್ವ ಪಕ್ಷಗಳ ಸಭೆ ಕರೆದಿದ್ದಾಗಲೂ ಕೂಡ, 'ನಾನು ಅಲ್ಲೇ ಇದ್ದೆ, ನಾರಿಮನ್‌ರವರು ಆ ತರಹ ಹೇಳಲಿಲ್ಲ' ಎಂದು ಜವಳಿಯವರು ಹೇಳಿದರು ನಾವು ಅವರು ಹೇಳಿದಂತಹ ಮಾತುಗಳನ್ನು ಅವತ್ತು ಒಪ್ಪಿಕೊಂಡೆವು Advocate

Generalರವರಾದ ಉದಯ್ ಹೊಳ್ಳರವರೂ ಕೂಡ ಹೇಳುತ್ತಿದ್ದಾರೆ, ಜವಳಿಯವರೂ ಹೇಳುತ್ತಿದ್ದಾರೆ ಎಂದು ನಾವು ಅಂದು ಸುಮ್ಮನಾದೆವು Judgement ಸಿಕ್ಕಿಲ್ಲ ಎಂಬ ಕಾರಣಕ್ಕಾಗಿ, All Party Meeting ಅವತ್ತು ಮುಂದಕ್ಕೆ ಹೋಯಿತು ಸಾರ್, Judgement ಅಷ್ಟೊತ್ತಿಗಾಗಲೇ ಜವಳಿಯವರ ಕೈಯಲ್ಲಿತ್ತು ವಕೀಲರುಗಳ ಕೈಗೆ judgement copy ಬಂದಿತ್ತು ಸರ್ಕಾರ Judgement copy ತೆಗೆದುಕೊಳ್ಳಲಿಕ್ಕೆ ಇಷ್ಟು ದಿನಗಳು ಕಾಯಬೇಕಾದಂತಹ ಅಗತ್ಯವಿರಲಿಲ್ಲ Judgement copy ತೆಗೆದುಕೊಳ್ಳಲಿಕ್ಕೆ ಇಷ್ಟೊಂದು ದಿನಗಳು ಬೇಕಾಗಿರಲಿಲ್ಲ ತತ್‌ಕ್ಷಣದಲ್ಲೇ ನೀವು All Party Meeting ಕರೆಯಬಹುದಾಗಿತ್ತು All Party Meetingನಲ್ಲಿ ಎಲ್ಲಾ ಪಕ್ಷಗಳ floor leaderಗಳು ಮತ್ತು ಎಲ್ಲಾ ಪಕ್ಷದ ಮುಖಂಡರುಗಳ ಅಭಿಪ್ರಾಯಗಳನ್ನು ತೆಗೆದುಕೊಳ್ಳಬಹುದಾಗಿತ್ತು ಈ ಸನ್ನಿವೇಶದಲ್ಲಿ ಏನು ಮಾಡಬೇಕು? ಎಂಬ ಬಗ್ಗೆ ಒಂದು ನಿಲುವಿಗೆ ಇಡೀ ಸರ್ಕಾರ ಮತ್ತು ಎಲ್ಲಾ ವಿರೋಧ ಪಕ್ಷಗಳೂ ಕೂಡ ಬರಲಿಕ್ಕೆ ಸಾಧ್ಯವಾಗುತ್ತಿತ್ತು ಆದರೆ ಈಗ ಏನಾಗಿದೆ ಎಂದರೆ, UPA Government ಇದರಲ್ಲಿ intervene ಆಗಬೇಕು, 'The ball is in the court of UPA Government' ಎನ್ನುವಂತಹ ರೀತಿಯಲ್ಲಿ ಅಭಿಪ್ರಾಯ ಮೂಡಿಸಲಾಗುತ್ತಿದೆ ಮತ್ತೆ ಕೆಲವು ಕಡೆ ಕಾಂಗ್ರೆಸ್ ಪಕ್ಷ ಇದಕ್ಕೆ ಹೊಣೆ ಎನ್ನತಕ್ಕಂಥ ರೀತಿಯ ಅಭಿಪ್ರಾಯ ಬರುತ್ತಿದೆ ಈ ತರಹದ ಅಭಿಪ್ರಾಯವನ್ನು ಮೂಡಿಸಲಿಕ್ಕೆ ಪ್ರಯತ್ನಗಳು ಏನು ನಡೆಯುತ್ತಿವೆಯೋ, ಇದು ಸರಿಯಾದುದುದಲ್ಲ ರಾಜ್ಯದ ಹಿತ ಕಾಪಾಡಲಿಕ್ಕೆ, ನಮ್ಮ ಜನರ ಹಿತ ಕಾಪಾಡಲಿಕ್ಕೆ, ಏನೇನು ನಿಲುವುಗಳನ್ನು ಸರ್ಕಾರ ತೆಗೆದುಕೊಳ್ಳುತ್ತಾರೆಯೋ, ಅದೆಲ್ಲವನ್ನೂ ಕೂಡ ಬೆಂಬಲಿಸಲಿಕ್ಕೆ ನಾವು ತಯಾರಾಗಿದ್ದೇವೆ 'ನಾವು ತಯಾರಾಗಿದ್ದೇವೆ' ಎಂದು ಈಗಾಗಲೇ ಹೇಳಿದ್ದೇವೆ ಎಲ್ಲಾ ಸಹಕಾರವನ್ನು ಈ ದಿಸೆಯಲ್ಲಿ ನಾವು ಕೊಡುತ್ತೇವೆ ಎಂದು ಹೇಳಿದ್ದೇವೆ ಆದರೆ ಈಗ ಈ ತರಹದ ಒಡಕು ಶಬ್ದಗಳು ಬರುವುದು ಸರಿಯಲ್ಲ ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳು, ಮಾನ್ಯ ಯಡಿಯೂರಪ್ಪನವರು, ನಾವಿಬ್ಬರೂ ಹೋಗಿ ಪ್ರಧಾನ ಮಂತ್ರಿಗಳನ್ನು ಭೇಟಿ ಮಾಡುತ್ತಿದ್ದೇವೆ, ಅವರಿಗೆ ಒಂದು ಮನವಿ ಕೊಡುತ್ತೇವೆ, ಒತ್ತಡ ಹಾಕುತ್ತೇವೆ, ಈ Judgement ಅನ್ನು notify ಆಗಬಾರದು ಎಂದು ಅವರಿಗೆ ಹೇಳುತ್ತೇವೆ ಎಂದಿದ್ದಾರೆ All

P2
T4

Party Meeting ನಲ್ಲಿ ಇದೆಲ್ಲಾ ಚರ್ಚೆಯಾಗಬಹುದಾಗಿತ್ತಲ್ಲವೇ? ಎಲ್ಲಾ ಲೀಡರ್‌ಗಳನ್ನು ಒಟ್ಟಿಗೆ ವಿಶ್ವಾಸಕ್ಕೆ ತೆಗೆದುಕೊಂಡು ಮಾಡಬಹುದಾಗಿತ್ತಲ್ಲವೇ? ಇದನ್ನು ನೋಡಿದರೆ ಇವರು ರಾಜಕೀಯ ಮಾಡುತ್ತಿದ್ದಾರೆ ಅನ್ನತಕ್ಕಂಥದ್ದು ಬಹಳ ಸ್ಪಷ್ಟವಾಗಿ ಗೊತ್ತಾಗುತ್ತದೆ ಇದರಲ್ಲಿ ರಾಜಕೀಯ ಮಾಡುವುದರಿಂದ ಕರ್ನಾಟಕಕ್ಕೆ ಲಾಭವೇನಾದರೂ ಆಗುತ್ತದೆಯೇ? ನೀವು ಅವತ್ತು ಹೇಳಿದಿರಿ, ಮಾನ್ಯ ನೀರಾವರಿ ಮಂತ್ರಿಗಳೂ ಇಲ್ಲಿ ಹೇಳಿದರು, ಮಾನ್ಯ ಯಡಿಯೂರಪ್ಪನವರೂ ಸಹ ಹೇಳಿದರು ನಾವು ತತ್‌ಕ್ಷಣಕ್ಕೆ Review Petition ಹಾಕುವುದಕ್ಕೆ ತೀರ್ಮಾನ ಮಾಡಿದ್ದೇವೆ ಎಂದು ಹೇಳಿದಿರಿ ಕೇಂದ್ರದ ಜಲ ಸಂಪನ್ಮೂಲ ಮಂತ್ರಿಗಳೂ ಕೂಡ judgement ಅನ್ನು ಮೂರು ತಿಂಗಳವರೆಗೆ notify ಮಾಡಲಿಕ್ಕೆ ಅವಕಾಶವಿದೆ ಎಂದು ಹೇಳಿದ್ದರು Inter-state Water Dispute Actನ Section 5[3] ಪ್ರಕಾರ ನಾವು Review Petition ಹಾಕಬಹುದು ಅದಕ್ಕೆ ಅವಕಾಶವಿದೆ ಎಂಬುದು ಬಹಳ ಸ್ಪಷ್ಟವಾಗಿ ಕಾನೂನಿನಲ್ಲಿ ಕೂಡ ಇದೆ Supreme Courtಗೆ ಹೋಗಲಿಕ್ಕೂ ಕೂಡ ಕಾನೂನಿನಲ್ಲಿ ಅವಕಾಶವಿದೆ ಇಲ್ಲಿ Review Petition ಹಾಕುತ್ತೇವೆ ಎಂದು ಹೇಳಿ, ಇನ್ನೂ All Party Meeting ಕರೆಯದೇ, ನಾವು ಪ್ರಧಾನ ಮಂತ್ರಿಗಳನ್ನು ಭೇಟಿ ಮಾಡುತ್ತೇವೆ, ನಾವು ಬೇರೆಯೇ ಹೋಗುತ್ತೇವೆ, ಭೇಟಿ ಮಾಡಿ ಒತ್ತಾಯ ಮಾಡುತ್ತೇವೆ ಎಂದರೆ, ಇವರ್ಯಾರನ್ನೂ ಕೂಡ ವಿಶ್ವಾಸಕ್ಕೆ ತೆಗೆದುಕೊಳ್ಳಬಾರದು ಎನ್ನತಕ್ಕಂಥ ಭಾವನೆ ನಿಮಗೆ ಇದ್ದ ಹಾಗಿದೆ ಇದು ಸರಿಯಾದಂತಹ ಕ್ರಮವಲ್ಲ ಇದರಲ್ಲಿ ಯಾವುದೇ ಕಾರಣಕ್ಕೆ ರಾಜಕೀಯವಾದರೆ, ನಮಗೆ ನ್ಯಾಯ ಸಿಗಲಿಕ್ಕೆ ತೊಂದರೆಯಾಗುತ್ತದೆ ಎಲ್ಲರೂ ಒಂದೇ voiceನಿಂದ, ಒಂದೇ ಒಕ್ಕೊರಲಿನಿಂದ ನಾವು ಇದನ್ನು ವಿರೋಧ ಮಾಡುತ್ತಿದ್ದೇವೆ ಅನ್ಯಾಯವಾಗುತ್ತಿದೆ ಎನ್ನತಕ್ಕಂಥದ್ದು ಬಹಳ ಸ್ಪಷ್ಟವಾಗಿದೆ ಇದು ಮೇಲ್ನೋಟಕ್ಕೇ ಬಹಳ ಸ್ಪಷ್ಟವಾಗಿ ಗೊತ್ತಾಗುತ್ತದೆ ಮಾನ್ಯ ವಾಟಾಳ್ ನಾಗರಾಜ್‌ರವರೆ, ತಮಿಳುನಾಡಿನ ನೀರಿನ ಪಾಲು 419 ಟಿಎಂಸಿ ನೀರು ಇದೆ ಎಂದು ತೀರ್ಪಿನಲ್ಲಿದೆ ನಾನು judgement ಅನ್ನು ಈಗ ತೆಗೆದು ಓದಲಿಕ್ಕೆ ಶುರು ಮಾಡಿದೆ ಅದನ್ನು ಓದಲಿಕ್ಕೆ ಶುರು ಮಾಡಿದರೆ, ಕೇರಳಕ್ಕೆ ಕೊಟ್ಟಿರತಕ್ಕಂಥ 21 ಟಿಎಂಸಿ ನೀರೂ ಕೂಡ ಅಲ್ಲಿಗೇ ಹೋಗುತ್ತದೆ ಅದನ್ನು ನಾವು ಕಬಿನಿಯಿಂದ ಅವರಿಗೆ ಬಿಡಬೇಕಾಗಿದೆ ಎಂದು ತೀರ್ಪಿನಲ್ಲಿದೆ ಆ 21

ಟಿಎಂಸಿ ನೀರು ಕೂಡ ಅವರಿಗೇ ಹೋಗುತ್ತದೆ Underground water ಕೂಡ ಅವರಿಗೇ ಉಳಿದುಕೊಂಡಿದೆ ಆ ಎಲ್ಲಾ ನೀರನ್ನು ಇಟ್ಟುಕೊಳ್ಳಲಿಕ್ಕೆ ಅವರಿಗೆ ಜಾಗವಿಲ್ಲ Assessor's Report ಕೊಟ್ಟಿರುವುದನ್ನೂ ಕೂಡ ನ್ಯಾಯ ಮಂಡಳಿ ಲೆಕ್ಕಕ್ಕೇ ತೆಗೆದುಕೊಂಡಿಲ್ಲ Assessor's Reportನಲ್ಲಿ ಹೇಳಿರುವುದಕ್ಕಿಂತ ಅವರಿಗೆ ಹೆಚ್ಚಾಗಿ ಕೊಟ್ಟಿದ್ದಾರೆ ನಮಗೆ ಹೇಳಿರುವುದಕ್ಕಿಂತ ಕಡಿಮೆ ಕೊಟ್ಟಿದ್ದಾರೆ Assessor's Reportನಲ್ಲಿ 129 ಟಿಎಂಸಿ feet water ಅಂತರ್ಜಲದಲ್ಲಿ ಸಿಗುತ್ತದೆಂದು ಹೇಳಿದ್ದಾರೆ ತಮಿಳುನಾಡಿನ ಸರ್ಕಾರವೇ ನಮ್ಮಲ್ಲಿ 40–50 ಟಿಎಂಸಿ ಅಂತರ್ಜಲ ಸಿಗುವುದು ಸತ್ಯ ಎಂದು ಒಪ್ಪಿಕೊಂಡಿದೆ ಅಷ್ಟೊಂದು ನೀರು ನಮಗೆ ground waterನಿಂದ ಸಿಗುತ್ತದೆಂದು ಅವರೇ ಒಪ್ಪಿಕೊಂಡಿದ್ದಾರೆ ಅದನ್ನೂ ಕೂಡ consider ಮಾಡಿಲ್ಲ Environment Protection ಗೆಂದು 10 ಟಿಎಂಸಿ ನೀರು ಬೇರೆ ಅಲ್ಲಿಗೆ ಕೊಟ್ಟಿದ್ದಾರೆ ಸಮುದ್ರಕ್ಕೆ ಹೋಗುವ seepage water ಎಂದು 4 ಟಿಎಂಸಿ ನೀರನ್ನೂ ಸಹ ಅವರಿಗೇ ಕೊಟ್ಟಿದ್ದಾರೆ ಬಿಳಿಗೊಂಡ್ಲುವಿನಿಂದ ಮೆಟ್ಟೂರಿನವರೆಗೆ ಸಿಗುವ 25 ಟಿಎಂಸಿ ನೀರು ಸಹ ಅವರಿಗೇ ಸಿಗುತ್ತದೆ ಕನಿಷ್ಟ ಅವರಿಗೆ 500–600 ಟಿಎಂಸಿ feet water ಅವರಿಗೆ ಹೋಗುತ್ತಿದೆ ಇಷ್ಟು ದೊಡ್ಡ ಅನ್ಯಾಯವಾಗುತ್ತಿದೆ ಇಷ್ಟೆಲ್ಲಾ ಇದ್ದರೂ, ಈಗ ಮಧ್ಯೆ All Party Meeting ಕರೆಯದೇ, ಅವರ ಜೊತೆಗೆ ಚರ್ಚೆ ಮಾಡದೆ, ಏಕಾಏಕಿ ನೀವೇ ನಿರ್ಧಾರ ತೆಗೆದುಕೊಂಡಿದ್ದೀರಿ ಸರ್ಕಾರ ಮಾಡಲಿ, ಅದಕ್ಕೆ ನಮ್ಮದೇನು ತಕರಾರು ಇಲ್ಲ ನೀವು ಮಾಡುವುದಕ್ಕೆ ನಮ್ಮ ತಕರಾರು ಇಲ್ಲ ಆದರೆ ಇಲ್ಲಿಯವರೆಗೆ ನಡೆದುಕೊಂಡು ಬಂದಿರುವಂತೆ, ಎಲ್ಲಾ ಪಕ್ಷಗಳನ್ನೂ ಕೂಡ ಒಟ್ಟಿಗೆತೆಗೆದುಕೊಂಡು ಹೋಗತಕ್ಕಂಥ, ಅವರ ಅಭಿಪ್ರಾಯ ತೆಗೆದುಕೊಳ್ಳತಕ್ಕಂಥ, ಅವರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳತಕ್ಕಂಥ ಕೆಲಸವಾಗಿಲ್ಲ ಎನ್ನುವಂತಾದ್ದು ಬಹಳ ಮುಖ್ಯವಾದಂತಹ ವಿಚಾರ ಹೀಗಿರುವಾಗ ನೀವು ಏಕೆ ಈ ತರಹದ ನಿಲುವನ್ನು ತೆಗೆದುಕೊಂಡಿದ್ದೀರಿ ಎಂಬುದು ಪ್ರಶ್ನಾರ್ಹವಾಗುತ್ತದೆ ಈಗ ನೀವು ಹೋಗಿ ಭೇಟಿ ಮಾಡಿಕೊಂಡು ಬರುತ್ತೀರಿ ಎಂದಿಟ್ಟುಕೊಳ್ಳೋಣ ನಿಮ್ಮ ಜೊತೆಗೆ All Party Leaders ಅನ್ನು ನೀವು ಕರೆದುಕೊಂಡು ಹೋಗುತ್ತೀರೋ ಇಲ್ಲವೋ ಗೊತ್ತಿಲ್ಲ ಏಕೆಂದರೆ ಇಲ್ಲಿಯವರೆಗೆ ಅದರ ಬಗ್ಗೆ ನಮಗೆ ಗೊತ್ತಿಲ್ಲ ಆದರೆ ನಾಳೆ ನಾವು ಸುಮ್ಮನೆ

ಕುಳಿತುಕೊಳ್ಳಲಿಕ್ಕಾಗುವುದಿಲ್ಲ. ನಾವು ಬೇರೆ ಹೋಗಬೇಕಾಗುತ್ತದೆ ಕಾಂಗ್ರೆಸ್ ಪಕ್ಷ ಬೇರೆ ಹೋಗಬೇಕಾಗುತ್ತದೆ ನಮ್ಮಲ್ಲೇ ನಾವು ಬೇರೆ ಬೇರೆ ದಾರಿ ಹಿಡಿದುಕೊಂಡು ಹೋಗತಕ್ಕಂಥ ಪರಿಸ್ಥಿತಿ ನಿರ್ಮಾಣವಾಗುತ್ತದೆ ಬೇರೆ ಬೇರೆ ದಾರಿ ಹಿಡಿಯತಕ್ಕಂಥದ್ದು ಆಗಬಾರದು , ಇನ್ನೊಬ್ಬರ ಮೇಲೆ ಕೆಸರು ಎರಚತಕ್ಕಂಥ ಕೆಲಸವಾಗಬಾರದು ಆದ್ದರಿಂದ ಈ ರೀತಿ ಮಾಡತಕ್ಕಂಥದ್ದು ಸರಿಯಾದಂತಹ ಕ್ರಮವಲ್ಲ ಇದರಿಂದ ರಾಜ್ಯಕ್ಕೆ ಒಳ್ಳೆಯದಾಗುತ್ತದೆಂದು ನಾನೇನೂ ಭಾವಿಸಿಕೊಳ್ಳುವುದಕ್ಕೆ ಹೋಗುವುದಿಲ್ಲ ಆದ್ದರಿಂದ ಇದರ ಬಗ್ಗೆ ಸರ್ಕಾರ ಅವರ ನಿಲುವನ್ನು ಸ್ಪಷ್ಟಪಡಿಸಬೇಕು ಇಲ್ಲಿಯವರೆಗೂ ಸರ್ಕಾರದ ನಿಲುವು ಸ್ಪಷ್ಟವಾಗಿ ಪ್ರಕಟಿಸಿಲ್ಲ ಪತ್ರಿಕೆಗಳಲ್ಲಿ ಬಂದಿರುವುದನ್ನು ಬಿಟ್ಟರೆ, ಇಲ್ಲಿ ಸ್ಪಷ್ಟವಾಗಿ ಅದು ಪ್ರಕಟವಾಗಿಲ್ಲ ನಾವು ಏನು ಮಾಡುತ್ತೇವೆ ಅನ್ನತಕ್ಕಂಥದ್ದನ್ನು ಸದನದಲ್ಲಿ ತಾವು ಹೇಳಿಲ್ಲ ಈಗ ಸದನ ನಡೆಯುತ್ತಿದೆ ಸದನ ನಡೆಯುವಾಗ ಹೊರಗಡೆ ಹೇಳಿಕೆಗಳನ್ನು ಕೊಡತಕ್ಕಂಥದ್ದು ಅಥವಾ ಹೀಗೇ ಮಾಡುತ್ತೇವೆ ಎಂದು ಹೇಳತಕ್ಕಂಥದ್ದು ಶೋಭೆ ತರತಕ್ಕಂಥದ್ದಲ್ಲ ಈ ಬಗ್ಗೆ ಸದನದಲ್ಲಿ ಹೇಳಿಕೆಯಾಗಬೇಕು ಸದನದಲ್ಲಿ ಆ ಬಗ್ಗೆ ಸ್ಪಷ್ಟಪಡಿಸಬೇಕು ಆದರೆ ಈಗ ಅದು ಆ ರೀತಿ ಆಗಿಲ್ಲ ಅದಕ್ಕೋಸ್ಕರವೇ ಮಾನ್ಯ ವಿರೋಧ ಪಕ್ಷದ ನಾಯಕರು ಇವತ್ತು ಪತ್ರಿಕೆಗಳಲ್ಲಿ ಇದನ್ನೆಲ್ಲಾ ನೋಡಿದ ಮೇಲೆ ಆ ಬಗ್ಗೆ ಇಲ್ಲಿ ಪ್ರಸ್ತಾಪಿಸಿದ್ದಾರೆ ಇದಲ್ಲದೆ ಈ ಬಗ್ಗೆ ಬೇರೆ ಬೇರೆ ಹೇಳಿಕೆಗಳೆಲ್ಲಾ ಬಂದಿವೆ ನಾನು ಅವುಗಳನ್ನೆಲ್ಲಾ ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ ಹಿಂದಿನಿಂದಲೂ ಬೇರೆ ಬೇರೆ ಪ್ರಧಾನ ಮಂತ್ರಿಗಳಿದ್ದರು ಮಾನ್ಯ ವಿ ಪಿ ಸಿಂಗ್‌ರವರ ಕಾಲದಲ್ಲಿ Tribunal constitute ಆಯಿತು ನಂತರ ಅದಾದ ಮೇಲೆ Tribunal Interim Order ಬಂದ ಮೇಲೆ ಯಾರು ಪ್ರಧಾನ ಮಂತ್ರಿಗಳಿದ್ದರು ಎಂಬುದು ನಮಗೆ ಗೊತ್ತಿದೆ ಬಿಜೆಪಿಯ ಪ್ರಧಾನ ಮಂತ್ರಿಗಳೂ ಕೂಡ ಇದ್ದರು, ಶ್ರೀಮಾನ್ ದೇವೇಗೌಡರು ಪ್ರಧಾನ ಮಂತ್ರಿಗಳಾಗಿದ್ದರು, ಇವರಲ್ಲದೆ ಇತರ ಬೇರೆ ಬೇರೆಯವರೂ ಪ್ರಧಾನ ಮಂತ್ರಿಗಳಾಗಿದ್ದರು ಎಲ್ಲರ ಕಾಲದಲ್ಲೂ ಕೂಡ ನಾವು Interim Order ಅನ್ನು obey ಮಾಡಿಕೊಂಡೇ ಬಂದಿದ್ದೇವೆ ಈಗ 'The ball is in the court of UPA Government' ಎಂದು ಹೇಳತಕ್ಕದ್ದು ಇದೆಯಲ್ಲಾ, ಅದು ರಾಜಕೀಯ ದುರುದ್ದೇಶದಿಂದ ಹೇಳತಕ್ಕಂಥ ಮಾತುಗಳು ಎಂದು ನಾನು

ಬಹಳ ಸ್ಪಷ್ಟವಾಗಿ ಹೇಳಬಯಸುತ್ತೇನೆ ಯಾವುದೇ ಕೇಂದ್ರ ಸರ್ಕಾರ ಇರಲಿ, ಯಾರೇ ಪ್ರಧಾನ ಮಂತ್ರಿಗಳಾಗಿರಲಿ, Supreme Court ಮೇಲೆ ಪ್ರಭಾವ ಬೀರುವುದಕ್ಕಾಗುತ್ತದೆಯೇ? Tribunal ಕೂಡ Supreme Courtನಷ್ಟೇ ಅಧಿಕಾರ ಇರತಕ್ಕದ್ದು ಅವರ ಮೇಲೆ ಪ್ರಭಾವ ಬೀರುವುದಕ್ಕಾಗುತ್ತದೆಯೇ? It is a decree It is as good as a decree of the Supreme Court ಎಂದು ಹೇಳುತ್ತಾರೆ If such being the case, how can you throw the blame on UPA Government? Could anybody throw blame on UPA Government? ಆ ತರಹ ಹೇಳಿದರೆ It is politically motivated ಎಂದು ಹೇಳಬೇಕಾಗುತ್ತದೆ ಆದ್ದರಿಂದ ನಾನು ಯಾವುದೇ ರಾಜಕೀಯ ಉದ್ದೇಶದಿಂದ ಇದನ್ನು ಪ್ರಸ್ತಾಪ ಮಾಡುತ್ತಿಲ್ಲ ಈ ತರಹ ಕರ್ನಾಟಕದಲ್ಲಿ ಆಗಬಾರದು ನಾವು ಕರ್ನಾಟಕದಲ್ಲಿ ಒಟ್ಟಿಗೆ ಹೋರಾಟ ಮಾಡಿಕೊಂಡು ಬಂದಿದ್ದೇವೆ ಮುಂದೆಯೂ ಕೂಡ ಎಲ್ಲಾ ಪಕ್ಷಗಳ, ಎಲ್ಲಾ ಭಾಗದ, ಎಲ್ಲಾ ವರ್ಗದ ಜನರೂ ಕೂಡ ಒಟ್ಟಿಗೆ ಹೋರಾಟ ಮಾಡಬೇಕಾಗುತ್ತದೆ ಆದ್ದರಿಂದ ನಾವು ಇವತ್ತು ಈ ರೀತಿ ಬೇರೆ ಬೇರೆ voiceನಿಂದ ಮಾತನಾಡತಕ್ಕಂಥದ್ದು, ಬೇರೆ ಬೇರೆ ರೀತಿಯಲ್ಲಿ ಅಭಿಪ್ರಾಯಗಳನ್ನು ಹೇಳತಕ್ಕಂಥದ್ದು ಸರಿಯಾದುದಲ್ಲ ನಾವೇನು ಮೊದಲಿನಿಂದಲೂ ಮಾಡಿಕೊಂಡು ಬಂದಿದ್ದೇವೋ, ಆ ದಾರಿಯಲ್ಲಿ ನಡೆದರೆ ಮಾತ್ರ ಒಳ್ಳೆಯದಾಗುತ್ತದೆ ಎನ್ನುವುದು ನನ್ನ ಅಭಿಪ್ರಾಯವಾಗಿದೆ ಈ ತರಹ ರಾಜಕೀಯ ಬೆರೆಸಿ ಅದರಲ್ಲಿ ಏನೋ ರಾಜಕೀಯ ಲಾಭ ಪಡೆಯತಕ್ಕಂತಹ ಪ್ರಯತ್ನಗಳು ಇದು ರಾಜ್ಯದ ಹಿತದೃಷ್ಟಿಯಿಂದ ಒಳ್ಳೆಯದಲ್ಲ ಎನತಕ್ಕಂತಹ ಮಾತನ್ನು ಹೇಳುತ್ತಾ ಆ ತರಹ ಮಾಡಬಾರದು ಸರ್ಕಾರದ ನಿಲುವುಗಳು ಆ ತರಹ ಇದ್ದರೆ ಅದನ್ನು ಬಿಡಬೇಕಾಗುತ್ತದೆ ಎಂದು ನಾನು ಒತ್ತಾಯ ಮಾಡುತ್ತೇನೆ

ಅಧ್ಯಕ್ಷರು: ಹೆಚ್ಚು ಚರ್ಚೆಯ ಅಗತ್ಯವಿಲ್ಲ

ಶ್ರೀ ಜೆ ಸಿ ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) ಮಾನ್ಯ ಅಧ್ಯಕ್ಷರೇ, ನಾವು ಮಾತನಾಡಲೇಬಾರದು ಎಂದು ಇದ್ದವರು ಒಂದು ಎರಡು ಮೂರು ವಿಷಯಗಳನ್ನು ಹೇಳುತ್ತೇನೆ ತೀರ್ಪಿನ ವಿರುದ್ಧ ರಿವ್ಯೂಗೆ provision ಇಲ್ಲ ಮೊನ್ನೆ ನೆನ್ನೆಯವರೆಗೆ ನೀವು ಆ ಮಾಹಿತಿ ಕೊಡುವವರೆಗೆ ನಾವು ಹೆಚ್ಚಿಗೆ

ಮಾತನಾಡುತ್ತಿರಲಿಲ್ಲ ಟ್ರಿಬ್ಯುನಲ್ ಮುಂದೆ ತಾವು explanation, clarification and guidance ಮಾತ್ರ seek ಮಾಡಬಹುದು ಎಂದು ಸ್ಪಷ್ಟವಾಗಿದೆ ಹಿಂದೆ ನೀವು interim award ಮೇಲೆ ರಿವ್ಯೂ ಹೋದಾಗ ಕೂಡ ಅವರು ಸ್ಪಷ್ಟವಾಗಿ ತಳ್ಳಿ ಹಾಕಿದ್ದಾರೆ, "review petition ತೆಗೆದುಕೊಂಡು ನಮ್ಮ ಮುಂದೆ ಬರುವ ಅಗತ್ಯವಿರಲಿಲ್ಲ, law is very much clear ನಿಮಗೆ review ಕೇಳುವ ಅಧಿಕಾರ ಇಲ್ಲ, ನಾವೇನು 250 TMC ಬಿಡಿ ಎಂದು ಹೇಳಿದ್ದೇವೆ ಅದಕ್ಕೆ adhere ಆಗಿ" ಎಂದು ಹೇಳಿದರು ಎರಡನೆಯದು ಸನ್ಮಾನ್ಯ ವಿ ಪಿ ಸಿಂಗ್‌ರವರ ಹೆಸರನ್ನು ನಾವು ಪದೇ ಪದೇ ಬಳಸುತ್ತಿದ್ದೇವೆ It is not correct Supreme Court ಗೆ ಹೋಗಿ Tamilnadu Government ನವರು Supreme Court direction ಮೇಲೆ Tribunal constitute ಆಗಿರುವುದು Let the records be clear Supreme Court ಆದೇಶ ಮಾಡಿ Supreme Courtನ ಆದೇಶದ ಮೇಲೆ Tribunal constitute ಮಾಡುವಂತಹ ಪರಿಸ್ಥಿತಿ ಕೇಂದ್ರ ಸರ್ಕಾರಕ್ಕೆ ಬಂದಿತ್ತು Tribunal is constituted by an Act of Parliament ಈಗ Supreme Court ಕೂಡ ನಿಮ್ಮ ರಿವಿಷನ್ ಪಿಟಿಷನ್ ಅಥವಾ ಅಪೀಲನ್ನು ತೆಗೆದುಕೊಳ್ಳುವುದಕ್ಕಾಗುವುದಿಲ್ಲ ಅವರ ಪಾಲು ಅದು ಕೋರ್ಟ್‌ನಲ್ಲಿದೆ ಎಂದು ಹೇಳುತ್ತೀರೋ ಇಲ್ಲವೆಂದು ಹೇಳುತ್ತೀರೋ? ರಾಜಕೀಯ ಇಚ್ಛಾಶಕ್ತಿಯನ್ನು ತಾವು ಇವತ್ತು ಪ್ರದರ್ಶನ ಮಾಡಲೇಬೇಕು ಕರ್ನಾಟಕಕ್ಕೆ ಒಳ್ಳೆಯದಾಗಬೇಕೆಂದರೆ ರಾಜಕೀಯವಾಗಿ ನಾವು ಇವತ್ತು ಇಚ್ಛಾಶಕ್ತಿಯನ್ನು ಪ್ರಬಲವಾಗಿ ತೋರಿಸಬೇಕಾಗಿದೆ ರಿವ್ಯೂ ಹಾಕುತ್ತೇವೆ, ಹಾಗೆ ಮಾಡುತ್ತೇವೆ ಹೀಗೆ ಮಾಡುತ್ತೇವೆ ಎಂದರೆ, ಬಹುಶ: ನಾನು ಮತ್ತು ಮಾನ್ಯ ಶ್ರೀರಾಮರೆಡ್ಡಿಯವರು ಮಾತನಾಡಿದ ಪ್ರಕಾರ ನಮಗೆ ಬಹಳ ಸ್ಕೋಪ್ ಇದೆ ಎಂದು ಅನ್ನಿಸುವುದಿಲ್ಲ Atleast ಸಣ್ಣ ಸಣ್ಣ ಲಾಯರ್‌ಗಳಾಗಿ ನಾವು ಹೇಳುತ್ತಿದ್ದೇವೆ, ನಾರಿಮನ್‌ರವರು ಬಹಳ ಒಳ್ಳೆಯ ಕೆಲಸ ಮಾಡಿದ್ದಾರೆ, ಅವರ arguments ಎಲ್ಲ ಓದಿದಾಗ Lawyers have done a wonderful work in this regard ಆದರೆ ಅವರಿಗೂ ಒಂದು ಮಿತಿ ಇರುತ್ತದೆ Material facts ಬಿಟ್ಟು ಮುಂದಕ್ಕೆ ಹೋಗುವುದಕ್ಕಾಗುವುದಿಲ್ಲ ವಿಶ್ವೇಶ್ವರಯ್ಯನವರಾದರೆ ಅವತ್ತು ಅಲ್ಲಿ 12 ಲಕ್ಷ ಚಿಲ್ಲರೆ irrigation ಆಗುತ್ತಿತ್ತು,

ನಮ್ಮ ಹತ್ತಿರ 1 ಲಕ್ಷ 5,000 ಎಕರೆ irrigate ಆಗುತ್ತಿತ್ತು ಎಂದು ಹೇಳಿ ಅದರ ಮೇಲೆ 30% enhance ಮಾಡಿ ಎಂದು ಹೇಳಬಹುದಿತ್ತು, ನಾವು ಯಾರನ್ನೂ ಇವತ್ತು blame ಮಾಡುವುದು ಬೇಡ ಇವತ್ತು ರಾಜ್ಯದ ಹಿತಾಸಕ್ತಿ ಮುಖ್ಯ ಎಲ್ಲರೂ ಒಂದಾಗಿ ಹೋಗಬೇಕು, ದಯಮಾಡಿ ಕಾವೇರಿ ವಿಷಯದಲ್ಲಿ ಕ್ಷುಲ್ಲಕ ರಾಜಕಾರಣವನ್ನು ಯಾರೂ ಮಾಡುವುದು ಬೇಡ Most ಹೊಡೆತ ಬೀಳುತ್ತಿರುವುದು ನಮಗೆ ಕೋಲಾರ, ತುಮಕೂರು, ಚಾಮರಾಜನಗರ ಈ ಭಾಗದಲ್ಲಿ ಏನು irrigation expansion ಆಗಬೇಕಾಗಿದೆ, ನಾವು sufferers ಆಗಿದ್ದೇವೆ ನಮಗೆ ಅರ್ಥವಾಗಿಲ್ಲ ನಮ್ಮ ರೈತರು ಅದರ ರುಚಿ ನೋಡಿಲ್ಲವೆಂದು ಇನ್ನು ನಮ್ಮ ರೈತರು ಮೇಲೆದ್ದಿಲ್ಲ ಆ ಭಾಗದಿಂದ ಬರುವ MLA ಗಳು ನಾವು ಸುಮ್ಮನೆ ಕುಳಿತುಕೊಳ್ಳುವುದಕ್ಕಾಗುವುದಿಲ್ಲ ಒಂದು ದಿವಸ ನಾವು ಮೇಲೇಳಬೇಕಾಗುತ್ತದೆ ಆ ಕಡೆ ನಾವು ನ್ಯಾಯ ಒದಗಿಸಲೇ ಬೇಕಾಗಿದೆ 3–4 point ಮೇಲೆ ನೀವು ಅಧಾರಿಟಿ constitute ಮಾಡಿಸುವುದು ಅಥವಾ notification issue ಮಾಡುವುದಕ್ಕೆ ಮೊದಲೆ ಸನ್ಮಾನ್ಯ ಪ್ರಧಾನಿಗಳನ್ನು ಭೇಟಿ ಆಗಬೇಕು ಅವರಿಗೆ convince ಮಾಡಬೇಕು ಅನೇಕ ಕಡೆ ನಾವು ಮಾತನಾಡುವುದಕ್ಕೆ ಅವಕಾಶವಿದೆ ಪ್ರಕಾಶ್‌ರವರೇ ಈ ಮೆರಿಟ್‌ಗಳನ್ನು ತೆಗೆದುಕೊಂಡು ಹೋಗಿ ಕುಳಿತು ಮಾತನಾಡುವುದಕ್ಕೆ ಅವಕಾಶವಿದೆ ಆ ಮೆರಿಟ್ ಎಲ್ಲ ಇಲ್ಲಿ ಚರ್ಚೆ ಆಗುವುದು ಬೇಡ ತಾವು ಹೋಗಿ ಬರುವುದರಿಂದ ನಮ್ಮದು ಯಾರದೂ ತಕರಾರು ಇಲ್ಲ ಆದರೆ ಒಂದು ಮಾತನ್ನು ತಾವು ಸ್ವಲ್ಪ ಗಮನಿಸಬೇಕು ಒಂದು ಸಭೆ ಕರೆದಿರಿ, ಆ ಸಭೆಯಲ್ಲಿ ಇರುವವರಿಗೆ ಹೇಳಿದಿರಿ, ಮತ್ತೊಂದು ಸಭೆ ಕರೆಯುತ್ತೇವೆ ಚರ್ಚೆ ಮಾಡುತ್ತೇವೆ, ಅಗತ್ಯ ಬಿದ್ದರೆ ಎಲ್ಲರೂ ಒಂದು ಸರ್ವ ಪಕ್ಷಗಳ ನಿಯೋಗ ತೆಗೆದುಕೊಂಡು ಹೋಗೋಣ ಎಂದು ಹೇಳಿದಿರಿ, ಆ ಸಭೆಯನ್ನು ನೀವು ಅರ್ಧಕ್ಕೆ ನಿಲ್ಲಿಸಿ sudden ಆಗಿ ನೀವಿಬ್ಬರು ಹೋದರೆ, ಅದು ಸರಿಯಲ್ಲ ನಾವು ಬರಬಹುದು, floor leaders ಅಥವಾ ಇಲ್ಲಿರುವ MLA ಗಳು ಬರಬಹುದು, ನಮಗೂ ಕೂಡ ಅದು ಅವಮಾನ ಮಾಡಿದ ಹಾಗಾಗುತ್ತದೆ ನೀವು ಇನ್ನೊಂದು ಸಭೆ ಆದರೂ ಕರೆದು ಎಲ್ಲರೂ ಹೋಗುವ ಅಗತ್ಯವಿಲ್ಲ, ಸಭೆ ಅಭಿಪ್ರಾಯವೇನು, ನಾವು ಯಾವ ಲೈನ್‌ನಲ್ಲಿ ಅಲ್ಲಿ ಹೋಗಿ ಚರ್ಚೆ ಮಾಡಬೇಕು, ಯಾವ ಲೈನ್‌ನಲ್ಲಿ ನಾವು ಪ್ರಧಾನ ಮಂತ್ರಿಗಳ ಬಳಿ ಚರ್ಚೆ

ಮಾಡಬೇಕು, ಅದನ್ನಾದರೂ ಇಲ್ಲಿ ತೀರ್ಮಾನ ಮಾಡಿಕೊಂಡು ಇಲ್ಲಿಂದ ಹೋದರೆ ರಾಜ್ಯಕ್ಕೆ ಗೌರವ ಬರುತ್ತದೆ ಕನಿಷ್ಟ ಸೌಜನ್ಯಕ್ಕಾದರೂ ತಾವು ಇನ್ನೊಮ್ಮೆ ಸರ್ವ ಪಕ್ಷಗಳ ಸಭೆಯನ್ನು ಕರೆಯಬೇಕು ನಾವು ಅಲ್ಲಿ ಪ್ರಧಾನಿ ಮುಂದೆ ಹೋಗಿ ಏನು ಹೇಳಬೇಕು, ನಮ್ಮ argument ಹೇಗಿರಬೇಕು, ನಮ್ಮ ಬೇಡಿಕೆ ಏನಿರಬೇಕು ಅದಾದರೂ ಇಲ್ಲಿ ರಾಜ್ಯದ ಪರವಾಗಿ ಸ್ಪಷ್ಟವಾಗಬೇಕು ನೀವು ಮಾನ್ಯ ಯಡಿಯೂರಪ್ಪನವರು ಹೋಗಿ ಏನು ಮಾತನಾಡುತ್ತೀರಿ ಎಂದು ನಮಗೆ ಗೊತ್ತಿಲ್ಲ ನಾಳೆ ಇಡೀ blameನ್ನು ನೀವೇಕೆ ಮೈ ಮೇಲೆ ಹಾಕಿಕೊಳ್ಳುತ್ತೀರಿ ಎಂದು ನಮಗೆ ಅರ್ಥವಾಗುತ್ತಿಲ್ಲ ಈಗ ನೀವಿಬ್ಬರೇ ಹೋಗುತ್ತೀರಿ, ಅಕಸ್ಮಾತ್ for heaven's sake ನೀವು ಫೇಲ್ ಆದಿರಿ, ಇದು ನೀವು ರಿಸ್ಕ್ ತೆಗೆದುಕೊಳ್ಳುತ್ತಿರುವುದು ಸನ್ಮಾನ್ಯ ಮುಖ್ಯಮಂತ್ರಿಗಳೆ ಇಲ್ಲಿ ಪಣ ಬಹಳ ಜಾಸ್ತಿ ಇದೆ ಈ issue ನಲ್ಲಿ ನೀವು ಹೀರೋ ಆದರೂ ಆಗಬಹುದು, ಜೀರೋ ಆದರೂ ಆಗಬಹುದು ಹೀರೋ ಆದರೆ ಸಂತೋಷ ಜೀರೋ ಆದರೆ ಕಷ್ಟ ಎರಡೂ ಇರುವಂತಹ ಸ್ಟೇಕನ್ನು ನೀವು ತೆಗೆದುಕೊಳ್ಳುತ್ತಿದ್ದೀರಿ ಇಂತಹ ಸನ್ನಿವೇಶದಲ್ಲಿ team spirit ನಲ್ಲಿ ಹೋಗಿ ಆಟ ಆಡುವುದು ಒಳ್ಳೆಯದು ಎಂದು ನಮ್ಮ ಭಾವನೆ ನೀವು ಇನ್ನೊಂದು ಸಾರಿ ಆಲೋಚನೆ ಮಾಡಿ, ಇನ್ನೊಂದು ಡೇಟ್ ತೆಗೆದುಕೊಳ್ಳಿ ಎಲ್ಲರನ್ನೂ ಕರೆದುಕೊಂಡು ಹೋಗುವುದರಿಂದ ಪ್ರಯೋಜನವಾಗುವುದಿಲ್ಲವೆಂದು ನಿಮ್ಮ ಭಾವನೆ ಆಗಿದ್ದರೆ, ಕನಿಷ್ಟ ಎಲ್ಲರನ್ನೂ ಕೂರಿಸಿಕೊಂಡು ಚರ್ಚೆ ಮಾಡಿ ಆ ಚರ್ಚೆಯ ಸಾರಾಂಶದ ಮೇಲಾದರೂ ನೀವು ಪ್ರಧಾನಿ ಬಳಿಗೆ ನಿಯೋಗ ತೆಗೆದುಕೊಂಡು ಹೋಗಬೇಕಾಗುತ್ತದೆ ನೀವಿಬ್ಬರೇ ಹೋಗುವುದನ್ನು ನಾವು delegation ನಿಯೋಗ ಎಂದು ಕರೆಯುವುದಕ್ಕಾಗುವುದಿಲ್ಲ It is your individual visit to the Prime Minister office State ನ್ನು ನೀವು Represent ಮಾಡಿದ ಹಾಗಾಗುವುದಿಲ್ಲ ನೀವು Government ಆಗಬಹುದು ಸರ್ವ ಪಕ್ಷ ಅಥವಾ ರಾಜ್ಯದ delegation ಎಂದು ಕರೆಯುವುದಕ್ಕಾಗುವುದಿಲ್ಲ ಅವರು ಮರು ಪರಿಶೀಲನೆ ಮಾಡಬೇಕು ಮತ್ತೆ ನನ್ನದೊಂದು ಬೇಡಿಕೆ ಅಧ್ಯಕ್ಷರಲ್ಲಿ ಯಾವತ್ತಾದರೂ ಇದನ್ನು ಚರ್ಚೆ ಮಾಡಿ ಮುಗಿಸಿಬಿಡುವುದು ಒಳ್ಳೆಯದು ಪ್ರತಿದಿನ ಪ್ರಶ್ನೋತ್ತರ ಮುಗಿದ ನಂತರ ಇದನ್ನು ತೆಗೆಕೊಳ್ಳುವುದು ಮಾತನಾಡುವುದು, ಕೆಲವರು ಮಾತನಾಡಿ ಕೆಲವರಿಗೆ

ಆಸಕ್ತಿ ಇಲ್ಲವೆಂದು ಅನ್ನಿಸಿಕೊಳ್ಳುವಂತಹ ಸ್ಥಿತಿ ನಿರ್ಮಾಣ ಮಾಡುವುದಕ್ಕಿಂತ ಒಂದು ದಿನ ಚರ್ಚೆ ಮಾಡಿಸಿ ಬಿಡಿ ಏನಾಗುತ್ತದೆ ಆಗಿ ಬಿಡಲಿ ನಿಲುವಳಿ ಪಾಸ್ ಮಾಡುತ್ತೀರೋ,ನಿರ್ಣಯ ಪಾಸ್ ಮಾಡುತ್ತೀರೋ, ಮಾಡಬಾರದ ನಿರ್ಣಯ ಮಾಡುತ್ತೀರೋ ಏನೋ ಒಂದು ಮಾಡಿ close ಮಾಡಿ ಬಿಟ್ಟಿದ್ದರೆ Assembly ನಡೆಯುವುದಕ್ಕೆ ಅನುಕೂಲವಾಗುತ್ತಿತ್ತು ಅದಕ್ಕೆ ಎಲ್ಲಾದರೂ ತಾವು ಅವಕಾಶ ಮಾಡಬೇಕು ಮಾನ್ಯ ಮುಖ್ಯ ಮಂತ್ರಿಗಳು ಯೋಚನೆ ಮಾಡಬೇಕು ಸರ್ವ ಪಕ್ಷಗಳ ಸಭೆಯನ್ನು ಅರ್ಧಕ್ಕೆ ನಿಲ್ಲಿಸಿದ್ದೀರಿ, ಪುಸ್ತಕವನ್ನು ಕೊಟ್ಟಿದ್ದೀರಿ, ನಾವೆಲ್ಲಾ ನೀವು ಮತ್ತೆ ಸಭೆ ಕರೆಯುತ್ತೀರಿ ಎಂದು ಓದಿಕೊಂಡಿದ್ದೇವೆ ಸರ್ವ ಪಕ್ಷಗಳ ಸಭೆ ಕರೆದು ಯಾವ ಆಧಾರದ ಮೇಲೆ ತಾವು ಅಲ್ಲಿಗೆ ಹೋಗುತ್ತಿದ್ದೀರಿ ಎಂದು ನಿರ್ಣಯ ಮಾಡಿದ ಮೇಲೆ ತಾವು ಹೋಗುವುದು ಸೂಕ್ತ

ಶ್ರೀ ಹೆಚ್ ಡಿ ಕುಮಾರಸ್ವಾಮಿ. (ಮಾನ್ಯ ಮುಖ್ಯಮಂತ್ರಿಗಳು). ಮಾನ್ಯ ಅಧ್ಯಕ್ಷರೆ, ವಿರೋಧ ಪಕ್ಷದ ನಾಯಕರು ಹಾಗೂ ಕೆಲವು ಹಿರಿಯ ಸದಸ್ಯರುಗಳು ಕಾವೇರಿ ತೀರ್ಪಿನ ಹಿನ್ನೆಲೆಯೊಳಗೆ ಕೆಲವು ವಿಷಯಗಳನ್ನು ಏನು ಪ್ರಸ್ತಾಪ ಮಾಡಿದ್ದಾರೆ, ಹಾಗೂ ಈ ಒಂದು ಸದನದಲ್ಲಿ ಮಾತನಾಡಿರುವಂತಹ ಹಿರಿಯ ಸದಸ್ಯರುಗಳು ರಾಜಕೀಯವನ್ನು ಬೆರೆಸತಕ್ಕಂಥದ್ದು ಒಳ್ಳೆಯದಲ್ಲ ಎನ್ನುವ ಸಲಹೆ ಕೊಟ್ಟಿದ್ದಾರೆ, ನಾನು ನಿಜವಾಗಿಯೂ ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ ಈ ವಿಷಯದಲ್ಲಿ ರಾಜಕೀಯವನ್ನು ಬೆರೆಸಿ ಯಾವುದೇ ಪಕ್ಷಗಳು, ಯಾವುದೇ ವ್ಯಕ್ತಿಗಳು ಈ ಒಂದು ಸಂದರ್ಭವನ್ನು ಉಪಯೋಗ ಮಾಡಿಕೊಳ್ಳತಕ್ಕಂಥದ್ದಕ್ಕೆ ಹೋಗತಕ್ಕಂತಹ ಘಟನೆ ನಿಜವಾಗಿಯೂ ಯಾರಿಗೂ ಶೋಭೆ ತರತಕ್ಕಂತಹ ವಿಷಯ ಅಲ್ಲವೆಂದು ಹೇಳುವುದಕ್ಕೆ ಬಯಸುತ್ತೇನೆ ಕಳೆದ 17 ವರ್ಷಗಳಿಂದ ನಡೆದಿರತಕ್ಕಂತಹ ಈ ಒಂದು ನ್ಯಾಯಾಧಿಕರಣದ ಅವಧಿಯಲ್ಲಿ ಈಗ ಏನು ತೀರ್ಪು ಬಂದಿದೆ, ಯಾರ್ಯಾರು ಯಾವ ಸಂದರ್ಭದಲ್ಲಿ ರಾಜಕೀಯ ಮಾಡಿದ್ದಾರೆ ಅದನ್ನು ನಾವು ಸದನದಲ್ಲಿ ಚರ್ಚೆ ಮಾಡುವುದು ಅನವಶ್ಯಕ ಅಂತಹ ಒಂದು ಸಂದರ್ಭ ಬಂದಾಗ ನಾವು ಜನಗಳ ಮುಂದೆ ಪ್ರಸ್ತಾಪ ಮಾಡೋಣ ನಾನು ಅದಕ್ಕೆ ಬೆಂಬಲ ವ್ಯಕ್ತಪಡಿಸುತ್ತೇನೆ ಏಕೆಂದರೆ ಮಾನ್ಯ ವಿರೋಧ ಪಕ್ಷ ನಾಯಕರು ಒಂದು ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ ಈ ಸದನದ ಸದಸ್ಯರಲ್ಲದೇ

ಸಿ
15

ಇರತಕ್ಕಂತಹ ಶ್ರೀ ದತ್ತರವರು ಇರಬಹುದು, ಮತ್ತು ಮಾನ್ಯ ದೇವೇಗೌಡರ ಬಗ್ಗೆ ಏನು ಚರ್ಚೆ ಮಾಡಿದ್ದಾರೆ, ಇವತ್ತು ಶ್ರೀ ದತ್ತರವರು ಆ ಹೇಳಿಕೆಯನ್ನು ಕೊಡಲು ಪ್ರೇರೇಪಣೆ ಆಗಿರತಕ್ಕಂಥದ್ದು, ಅವರ ಪಕ್ಷದ ಒಬ್ಬ ಹಿರಿಯ ಸದಸ್ಯರಾದ ಮಾನ್ಯ ದೇವೇಗೌಡರು ಏಕೆ ಮೌನವಾಗಿದ್ದಾರೆ, ಅವರು ಅವರ ವಿಷಯವನ್ನು ಸಾರ್ವಜನಿಕವಾಗಿ ಮಂಡನೆ ಮಾಡಬೇಕೆಂದು ವಿಷಯಕ್ಕೆ ಬಂದಾಗ ಆ ಒಂದು ಹಿನ್ನೆಲೆಯಲ್ಲಿ ಅವರು ಹೇಳಿರತಕ್ಕಂಥದ್ದು ಎನ್ನುವುದನ್ನು ಹೇಳುವುದಕ್ಕೆ ಬಯಸುತ್ತೇನೆ ಆ ವಿಷಯ ಪ್ರಸ್ತಾಪ ಆಗದೆ ಇದ್ದರೆ ಬಹುಶ ಶ್ರೀ ದತ್ತರವರು ಹೇಳಿಕೆ ಕೊಡತಕ್ಕಂತಹ ಅವಶ್ಯಕತೆ ಬರುತ್ತಿರಲಿಲ್ಲವೆಂದು ನಾನು ಸ್ಪಷ್ಟೀಕರಣ ಕೊಡುವುದಕ್ಕೆ ಬಯಸುತ್ತೇನೆ ಸನ್ಮಾನ್ಯ ಸಿದ್ದರಾಮಯ್ಯನವರು ಇಲ್ಲಿ ರಾಜಕೀಯ ಬೆರೆಸುವುದು ಬೇಡವೆಂದು ಏನು ಹೇಳಿದ್ದಾರೆ ಅದನ್ನು ಸ್ವಾಗತ ಮಾಡುತ್ತೇನೆ ಆದರೆ ಅವರು ಒಂದು ಮಾತನ್ನು ಮೊನ್ನೆ ಹೇಳಿದ್ದಾರೆ ಇಷ್ಟು ದಿವಸಗಳಾದರೂ ಸರ್ಕಾರದ ನಿಲುವನ್ನು ಸ್ಪಷ್ಟ ಮಾಡದೇ ಇರುವಂತಹ ಸರ್ಕಾರ ಎಂದು ಹೊರಗಡೆ ಟೀಕೆ ಮಾಡಿದ್ದಾರೆ , ಅದನ್ನೂ ನಾನು ಗಮನಿಸಿದ್ದೇನೆ ಇಷ್ಟೊತ್ತಿಗೆ ಸರ್ಕಾರ ಸ್ಪಷ್ಟನೆ ಮಾಡಬೇಕಾಗಿತ್ತು ಎಂದು ಹೇಳಿದ್ದಾರೆ ನಾನು ಸರ್ವ ಪಕ್ಷಗಳ ಸಭೆಯನ್ನು ಕರೆದಂತಹ ಸಂದರ್ಭದಲ್ಲಿ ಕೊನೆಯದಾಗಿ ನಾನು ಮಾತನಾಡಬೇಕಾದರೆ ಸರ್ವ ಪಕ್ಷಗಳ ನಿಯೋಗವನ್ನು ನಾವು ಕೇಂದ್ರ ಸರ್ಕಾರದ ಮುಂದೆ ತೆಗೆದುಕೊಂಡು ಹೋಗುವುದು ಸೂಕ್ತ ಎಂದು ಹೇಳಿದಾಗ, ಅದು ಅನಾವಶ್ಯಕ ಅದು ಬೇಕಿಲ್ಲವೆಂದು ಹೇಳಿ ಆ ಸಭೆಯ ಸಂದರ್ಭದಲ್ಲಿ ಕೊನೆಯ ಹಂತದಲ್ಲಿ ಎಲ್ಲ ಸದಸ್ಯರುಗಳು ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ ಆ ನಂತರ ಸಭೆಯಲ್ಲಿ ಬಂದಂತಹ ತೀರ್ಮಾನ ತೀರ್ಪಿನ ಸಂಪೂರ್ಣ ಪ್ರತಿಗಳನ್ನು ನಮಗೆ ಸರಬರಾಜು ಮಾಡಿದ ನಂತರ ನಾವು ತೀರ್ಪಿನ ಪ್ರತಿಗಳನ್ನು ಸಂಪೂರ್ಣವಾಗಿ study ಮಾಡಲು ಅವಕಾಶ ಆಗಬೇಕು, ಮತ್ತೊಂದು ಬಾರಿ ಸರ್ವ ಪಕ್ಷಗಳ ಸಭೆ ಕರೆಯಬೇಕೆಂದು ಆ ಸಂದರ್ಭದಲ್ಲಿ ಹಲವಾರು ಜನ ಪ್ರಮುಖರು ಸಲಹೆ ಏನು ಕೊಟ್ಟಿದ್ದಾರೆ, ಆ ಸಲಹೆ ಮೇರೆಗೆ ಈಗಾಗಲೇ ಎಲ್ಲ ನೀರಾವರಿ ತಜ್ಞರುಗಳಿರಬಹುದು, ಹಿರಿಯ ಸರ್ವ ಪಕ್ಷಗಳ ಎಲ್ಲ ಮುಖಂಡರುಗಳು ಈ ಒಂದು ಪ್ರತಿಯನ್ನು ಈಗ ಬಳಸಿದ್ದೇವೆ, ನಾನು ನೆನ್ನೆ 22ನೇ ತಾರೀಕಿನ ಒಳಗಾಗಿ ಸರ್ವ ಪಕ್ಷಗಳ ಸಭೆಯನ್ನು ಕರೆಯುತ್ತೇವೆ ಎನ್ನತಕ್ಕ ಮಾತನ್ನು ಹೇಳಿದ್ದೇವೆ ನಾನು ಪ್ರಧಾನ

ಮಂತ್ರಿಗಳನ್ನು ಭೇಟಿ ಮಾಡುತ್ತೇವೆ ಎಂದು ಹೇಳಿರತಕ್ಕಂಥದ್ದರ ಹಿನ್ನೆಲೆ, ಸಂಸತ್ತಿನ ಅಧಿವೇಶನ ನಡೆಯುತ್ತಿರತಕ್ಕಂತಹ ಸಂದರ್ಭದಲ್ಲಿ ರಾಜ್ಯದ ಹಲವಾರು ಯೋಜನೆಗಳು, ಕೇಂದ್ರ ಸರ್ಕಾರದ ಹಲವಾರು ಇಲಾಖೆಗಳ ಮುಂದೆ ಏನು ಪ್ರಸ್ತಾವನೆಗಳನ್ನು ಕೊಟ್ಟಿದ್ದೇವೆ, ಆ ಪ್ರಸ್ತಾವನೆಗಳನ್ನು ಅನುಷ್ಟಾನಕ್ಕೆ ತರತಕ್ಕಂಥದ್ದರ ಬಗ್ಗೆ ಕೆಲವು ಕೇಂದ್ರ ಮಂತ್ರಿಗಳು ಮತ್ತು ಪ್ರಧಾನ ಮಂತ್ರಿಗಳಿಗೆ ಭೇಟಿ ಮಾಡುವುದಕ್ಕೆ ಸಮಯವನ್ನು ಕೇಳಿದ್ದೇವೆ, ನಾಳೆ ಪ್ರಧಾನ ಮಂತ್ರಿಗಳು ಸಮಯವನ್ನು ಕೊಟ್ಟಿದ್ದಾರೆ ಆ ಸಂದರ್ಭದಲ್ಲಿ ನಮ್ಮ ರಾಜ್ಯಕ್ಕೆ ಸಂಬಂಧಪಟ್ಟ ಕೇಂದ್ರದ ಯೋಜನೆಗಳ ವಿಷಯದಲ್ಲಿ ರೈಲ್ವೆ ಸಚಿವರಿರಬಹುದು, ಪವಿಮಾನಯಾನ ಸಚಿವರಿರಬಹುದು, ಹಾಗೆಯೇ ಭೂ ಸಾರಿಗೆ ಸಚಿವರು ಹೀಗೆ ಹಲವಾರು ಮಂತ್ರಿಗಳು ಮತ್ತು ಪ್ರಧಾನ ಮಂತ್ರಿಗಳ ವೇಳೆಯನ್ನು ಕೇಳಿದ್ದೆವು, ಆ ಒಂದು ಹಿನ್ನೆಲೆಯಲ್ಲಿ ಪ್ರಧಾನ ಮಂತ್ರಿಗಳು ನಾಳೆ ಭೇಟಿಗೆ ಏನು ಅವಕಾಶ ಕೊಟ್ಟಿದ್ದರು ಆ ಸಂದರ್ಭದಲ್ಲಿ ನಾನು ಮಾತನಾಡುತ್ತೇನೆ ಎಂದು ಹೇಳಿರತಕ್ಕಂಥದ್ದು ನಿಜ ಸರ್ವ ಪಕ್ಷಗಳ ಸಭೆಯನ್ನು ಕರೆದು ಸರ್ವ ಪಕ್ಷಗಳ ನಾಯಕರು ಏನು ತೀರ್ಮಾನ ಕೊಡುತ್ತಾರೆ ಅದರ ಆಧಾರದ ಮೇಲೆ ನಾನು ಮುಂದಿನ ಹೆಜ್ಜೆಯನ್ನು ಇಡುತ್ತೇನೆ ಎನ್ನುವ ಮಾತನ್ನು ನಾನು ಈ ಸದನದ ಗಮನಕ್ಕೆ ತರುವುದಕ್ಕೆ ಇಷ್ಟ ಪಡುತ್ತೇನೆ ಇದರಲ್ಲಿ ಯಾವುದೇ ರೀತಿಯ ರಾಜಕೀಯ ಬೆರೆಸುವುದಾಗಲಿ,ಇವತ್ತು UPA ಸರ್ಕಾರ ಎನ್ನುವ ಪ್ರಶ್ನೆ ಇಲ್ಲ ಕೇಂದ್ರ ಸರ್ಕಾರದ ಮುಂದೆ ನಮ್ಮ ರಾಜ್ಯ ಸರ್ಕಾರದ ಈ ಒಂದು ಭಾರತದ ಒಕ್ಕೂಟದ ವ್ಯವಸ್ಥೆಯೊಳಗೆ ನಾವು ಕೇಂದ್ರ ಸರ್ಕಾರದ ಮುಂದೆ ಕೆಲವು ಅಹವಾಲುಗಳನ್ನು ಇಡಬೇಕಾಗುತ್ತದೆ ಆ ದೃಷ್ಟಿಯಿಂದ ಇದರಲ್ಲಿ ಯಾವುದೇ ಒಂದು ಪಕ್ಷವನ್ನು ಇಕ್ಕಟ್ಟಿಗೆ ಸಿಲುಕಿಸುವಂಥದಕ್ಕೆ ರಾಜಕೀಯವಾಗಿ ಇದನ್ನು ಬಳಸುವುದಕ್ಕೆ ಹೊರಟಿದ್ದಾರೆ ಎನ್ನುವಂಥ ಒಂದು ಆತಂಕ ಸದನದಲ್ಲಿ ಯಾವ ಸದಸ್ಯರಿಗೂ ಬೇಡ ಇದರಲ್ಲಿ ಯಾವುದೇ ಒಂದು ರಾಜಕೀಯ ಪಕ್ಷಗಳ ವಿರುದ್ಧವಾಗಿ ನಾನು ಇವೊತ್ತು ಆರೋಪ ಹೊರಿಸುವಂಥದ್ದಾಗಲಿ, ಯಾವುದೇ ಒಂದು ಪಕ್ಷಗಳು ಇದನ್ನು ಆ ಪಕ್ಷಗಳ ಸಂಘಟನೆಗೆ ಉಪಯೋಗ ಮಾಡಿಕೊಳ್ಳತಕ್ಕಂಥದ್ದಾಗಲೀ ಸರಿಯಲ್ಲ, ಈ ರೀತಿಯ ನಡವಳಿಕೆಯಿಂದ ರಾಜ್ಯದ ಜನರಿಗೆ ಅನ್ಯಾಯ ಮಾಡಿದಂತಾಗುತ್ತದೆ ರೈತರ ಪಾಲಿಗೆ ಈ ತೀರ್ಪು ಇವೊತ್ತು ಜೀವನ್ಮರಣದ ಪ್ರಶ್ನೆಯಾಗಿದೆ ಎನ್ನುವುದು ಇವೊತ್ತು ನಮ್ಮ

ಮುಂದೆ ಇದೆ ಇದು ನಮ್ಮ ರಾಜ್ಯದ ರೈತರ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಉಪಯೋಗವಾಗುವುದಿಲ್ಲ ಆ ದೃಷ್ಟಿಯಿಂದ ಇದರಲ್ಲಿ ರಾಜಕೀಯವನ್ನು ಬೆರೆಸತಕ್ಕಂಥದ್ದಕ್ಕೆ ಯಾವುದೇ ಕಾರಣಕ್ಕೂ ಅವಕಾಶವನ್ನು ಕೊಡತಕ್ಕಂಥದ್ದು ಅನವಶ್ಯಕವೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತಾ, ನಿನ್ನೆ ಕರೆದಂಥ ಬಂದ್ ಏನಿದೆ ಇದು ನಮ್ಮ ರಾಜ್ಯದ ಜನ ಇವ್ಹೊತ್ತು ಈ ರಾಜ್ಯದ ಜನರಿಗೆ ತೀರ್ಪಿನ ಬಗ್ಗೆ ಇರತಕ್ಕಂಥ ಭಾವನೆಗಳು ಏನು ಎನ್ನುವುದನ್ನು ಕೇಂದ್ರ ಸರ್ಕಾರಕ್ಕಿರಬಹುದು, ಅಥವಾ ಇವ್ಹೊತ್ತು ಇಡೀ ರಾಷ್ಟ್ರಕ್ಕೆ ಬಂದ್ ಮುಖಾಂತರ ಒಂದು ಸಂದೇಶವನ್ನು ಕೊಟ್ಟಿದ್ದಾರೆ, ಈ ಬಂದ್‌ನ್ನು ಶಾಂತಿಯುತವಾಗಿ ಆಚರಣೆ ಮಾಡತಕ್ಕಂಥದ್ದರಲ್ಲಿ ಹಲವಾರು ಸಂಘಟನೆಗಳು ಹಾಗೂ ಹಲವಾರು ಪಕ್ಷಗಳು ಒಕ್ಕೊರಲಿನ ಬೆಂಬಲವನ್ನೇನು ನಿನ್ನೆ ವ್ಯಕ್ತಪಡಿಸಿದ್ದಾರೆ ಅದಕ್ಕೆ ಸಂಪೂರ್ಣವಾಗಿ ನಾನು ಸರ್ಕಾರದ ಪರವಾಗಿ ಅಭಿನಂದನೆಗಳನ್ನು ಸಲ್ಲಿಸುತ್ತೇನೆ ಈ ವಿಷಯದಲ್ಲಿ ಸರ್ವ ಪಕ್ಷಗಳ ಸಭೆಯನ್ನು ಕರೆದ ನಂತರವೇ ನಾನು ಅಂತಿಮವಾಗಿ ಈ ಒಂದು ತೀರ್ಪಿನ ಹಿನ್ನಲೆಯೊಳಗೆ ಯಾವ ರೀತಿಯ ಹೆಜ್ಜೆಯನ್ನು ಇಡಬೇಕೆಂಬುದರ ಬಗ್ಗೆ ಸರ್ಕಾರ ತೀರ್ಮಾನವನ್ನು ಕೈಗೊಳ್ಳುತ್ತದೆ ಎಂದು ಈ ಸದನದ ಮುಂದೆ ನಾನು ಸ್ಪಷ್ಟೀಕರಣವನ್ನು ಕೊಡುವುದಕ್ಕೆ ಬಯಸುತ್ತೇನೆ

ಶ್ರೀ ವಾಟಾಳ್ ನಾಗರಾಜ್: ಸರ್ವ ಪಕ್ಷಗಳ ಸಭೆಯನ್ನು ಯಾವಾಗ ಕರೆಯುತ್ತೀರಿ ಎನ್ನುವುದರ ಬಗ್ಗೆ ನಿಮ್ಮ ಸ್ಪಷ್ಟನೆಯನ್ನು ಸದನದಲ್ಲಿ ಹೇಳಲೇ ಇಲ್ಲ ನೀವು ಸರ್ವ ಪಕ್ಷಗಳ ಸಭೆ ಕರೆಯಿರಿ ಆದರೆ ಸರ್ವ ಪಕ್ಷಗಳ ಸಭೆಗಿಂತ ಈ ಸದನ ಬಹಳ ಪ್ರಾಮುಖ್ಯವಾದುದು

ಮಾನ್ಯ ಮುಖ್ಯಮಂತ್ರಿಗಳು. 22ನೇ ತಾರೀಖಿನೊಳಗೆ

ಶ್ರೀ ವಾಟಾಳ್ ನಾಗರಾಜ್ ಸರ್ವ ಪಕ್ಷಗಳ ಸಭೆಗಿಂತ ಈ ಸದನ ಬಹಳ ಪ್ರಾಮುಖ್ಯ ತಮಗೆ ನಾನು ಹೇಳುತ್ತಿದ್ದೇನೆ ತಾವು ಈ ಸದನದಲ್ಲಿ ತಮ್ಮ ಸರ್ಕಾರದ ನಿಲುವೇನು ಎಂಬ ಬಗ್ಗೆ ಹೇಳಬೇಕಾಗಿತ್ತು ಸರ್ವ ಪಕ್ಷಗಳ ಸಭೆಗಿಂತ ಈ ಸದನ ಬಹಳ ಪ್ರಾಮುಖ್ಯ ನಾನು ಅದನ್ನೇ ಮೊದಲಿನಿಂದಲೂ ಹೇಳುತ್ತಿದ್ದೇನೆ ನೀವು ಅದನ್ನು ಸ್ಪಷ್ಟಪಡಿಸಲಿಲ್ಲ ಆದುದರಿಂದ ನನಗೆ ನಿಜವಾಗಿಯೂ ನೋವಾಗಿದೆ ನಾನು ಇವ್ಹೊತ್ತೂ ಕೂಡ ಬಹಿಷ್ಕಾರ ಮಾಡಿ ಹೊರಗಡೆ ಹೋಗುತ್ತಿದ್ದೇನೆ

ಅಧ್ಯಕ್ಷರು ವಾಟಾಳ್ ನಾಗರಾಜ್‌ರವರೆ, ಇದೇನು ಇಷ್ಟೊಂದು ಬಹಿಷ್ಕಾರ ಹಾಕುತ್ತಿದ್ದೀರಲ್ಲ, ಪ್ರತಿ ದಿನ ನೀವು ಸದನಕ್ಕೆ ಬಂದು ಇದನ್ನೇ ಅಭ್ಯಾಸ ಮಾಡಿಕೊಂಡುಬಿಡುತ್ತೀರಿ ಇದು ಬಹಳ ಕೆಟ್ಟದ್ದು

ಶ್ರೀ ವಾಟಾಳ್ ನಾಗರಾಜ್ ಮಾನ್ಯ ಅಧ್ಯಕ್ಷರೆ, ಈ ಸದನದಲ್ಲಿ ಸಮಗ್ರವಾಗಿ ಕಾವೇರಿ ಬಗ್ಗೆ ಸಂಪೂರ್ಣವಾಗಿ ಚರ್ಚೆಯನ್ನಾದರೂ ಮಾಡಿ ಏನಾದರೂ ಒಂದು ತೀರ್ಮಾನಕ್ಕೆ ಬನ್ನಿ ಆ ರೀತಿ ತೀರ್ಮಾನಕ್ಕೆ ನೀವು ಬರುತ್ತಿಲ್ಲ

ಅಧ್ಯಕ್ಷರು ಅದು ಸರಿ ನೀವು ಏನು ಹೇಳಬೇಕೋ ಅದನ್ನು ನೀವು ಹೇಳಿ ಅದನ್ನು ಬಿಟ್ಟು ಸದನಕ್ಕೆ ಬಹಿಷ್ಕಾರ ಹಾಕಿ ಹೊರಗೆ ಹೋಗುವುದನ್ನು ಅಭ್ಯಾಸ ಮಾಡಿಕೊಳ್ಳಬೇಡಿ ಕುಳಿತುಕೊಳ್ಳಿ

ಶ್ರೀ ವಾಟಾಳ್ ನಾಗರಾಜ್ ಮಾನ್ಯ ಅಧ್ಯಕ್ಷರೆ, ನಾನು ಈ ರೀತಿ ಇರತಕ್ಕಂಥದ್ದೂ ಕೂಡ ನನಗೂ ಶೋಭೆಯೇನೂ ಅಲ್ಲ ಆದರೆ ನನಗೆ ಬಹಳ ನೋವಾಗುತ್ತಿದೆ ನಿನ್ನೆ ದಿವಸ ಇಡೀ ರಾಜ್ಯದ ಜನತೆ ಬಂದ್ ಮಾಡಿದ್ದಾರೆ ಸರ್ಕಾರದ ಮೇಲೆ ಅದರ ಪರಿಣಾಮವೇನು? ಅವರು ಸರ್ವ ಪಕ್ಷಗಳ ಸಭೆ ಯಾವತ್ತು ಎಂಬ ಬಗ್ಗೆ ಸರಿಯಾಗಿ ಹೇಳಲೇ ಇಲ್ಲ,

ಅಧ್ಯಕ್ಷರು ಅವರು ಹೇಳುತ್ತಾರೆ, ನೀವು ಕುಳಿತುಕೊಳ್ಳಿ

ಶ್ರೀ ವಾಟಾಳ್ ನಾಗರಾಜ್ ನೀವು ನಿರ್ಣಯ ಮಾಡುವವರೆಗೂ ನಾನು ಬರುತ್ತೇನೆ, ಸದನವನ್ನು ಬಹಿಷ್ಕಾರ ಹಾಕಿ ನಾನು ಹೊರಗೆ ಹೋಗುತ್ತೇನೆ

(ಶ್ರೀ ವಾಟಾಳ್‌ನಾಗರಾಜ್‌ರವರು ಸಭಾತ್ಯಾಗ ಮಾಡಿ ಸದನದಿಂದ ನಿರ್ಗಮಿಸಿದರು)

(ಗೊಂದಲ)

ಶ್ರೀ ಎನ್ ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು) ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಕಾವೇರಿ ಬಗ್ಗೆ ಚರ್ಚೆ ಮಾಡಲು ಬುಧವಾರದ ದಿವಸ ಮಾನ್ಯ ಪ್ರಧಾನ ಮಂತ್ರಿಗಳನ್ನು ಭೇಟಿ ಮಾಡುವುದಕ್ಕೆ ಹೋಗುತ್ತಾರೆಂದು ಪತ್ರಿಕೆಗಳಲ್ಲಿ ಬಂದಿದೆ ತಾವು ಮುಖ್ಯಮಂತ್ರಿಗಳಾಗಿ ಪ್ರಧಾನ ಮಂತ್ರಿಗಳನ್ನು ಬೇಟಿಯಾಗುತ್ತೀರಿ

ಶ್ರೀ ಸಿದ್ದರಾಮಯ್ಯ ಕಾವೇರಿ ಬಗ್ಗೆ ಪ್ರಧಾನ ಮಂತ್ರಿಗಳಿಗೆ ಮನವಿಯನ್ನು ಮುಖ್ಯಮಂತ್ರಿಗಳು ಸಲ್ಲಿಸುತ್ತಾರೆಂದೂ ಪತ್ರಿಕೆಗಳಲ್ಲಿ ಬಂದಿದೆ ಪ್ರಧಾನ ಮಂತ್ರಿಗಳಿಗೆ ಮನವಿಯನ್ನು ಸಲ್ಲಿಸುತ್ತೇನೆಂದು ಅವರು ಕೂಡ ಹೇಳಿದ್ದಾರೆ ಆದರೆ ಇದಕ್ಕೂ ಮೊದಲು ಎಲ್ಲಾ ಪಕ್ಷಗಳ ಜೊತೆ ಅವರು ಚರ್ಚೆಯನ್ನೇ ಮಾಡಿಲ್ಲ ಅವರು ಏನು ಮನವಿಯನ್ನು ಬರೆದಿದ್ದಾರೆ ಎಂಬ ಬಗ್ಗೆ ಚರ್ಚೆಯನ್ನೇ ಮಾಡಿಲ್ಲ ಅವರು ನಮ್ಮನ್ನು ಕೇಳುವುದೇ ಇಲ್ಲವೆಂದು ಹೇಳಿದರೆ We have no objection, ಮಾಡಿಕೊಳ್ಳಲಿ But ಮನವಿ ಸಲ್ಲಿಸುತ್ತೇವೆ, written ಮನವಿಯನ್ನು ಕೊಡುತ್ತೇವೆಂದು ಹೇಳಿದ್ದೀರಿ

(ಆ) ವಿಧಾನ ಪರಿಷತ್ತಿನ ಸಭಾಪತಿಯವರ ಚುನಾವಣೆ ಬಗ್ಗೆ

ಶ್ರೀ ಎನ್ ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು) ಮಾನ್ಯ ಅಧ್ಯಕ್ಷರೇ, ಸಭೆಯಲ್ಲಿ ಈ ಪ್ರಶ್ನೆಗಳನ್ನು ಕೇಳದೇ ಹೋದರೆ ಅದೇ ತರಹ ಹೋಗುತ್ತಿತ್ತು ಮುಖ್ಯಮಂತ್ರಿಗಳು ಪ್ರಧಾನ ಮಂತ್ರಿಗಳನ್ನು ಭೇಟಿ ಮಾಡಲು ಹೋಗುತ್ತಾರೆ, ರಾಜ್ಯದ ಹಲವಾರು ವಿಚಾರಗಳ ಬಗ್ಗೆ ಚರ್ಚೆ ಮಾಡುತ್ತಾರೆ, ಅದರ ಬಗ್ಗೆ ನಮ್ಮ ಅಭ್ಯಂತರವೇನೂ ಇಲ್ಲ ಆದರೆ ಮನವಿ ಪತ್ರವನ್ನು ಕೊಡುತ್ತೇವೆ ಎನ್ನುವಂಥ ರೀತಿಯಲ್ಲಿ ಪ್ರಸ್ತಾಪ ಮಾಡಲಾಗಿದೆ ಅದನ್ನು ಅಲ್ಲಗಳೆದಿದ್ದೇವಷ್ಟೆ ಇವೊತ್ತು ಮತ್ತೊಂದು ಮಹತ್ವವಾದ ವಿಷಯವನ್ನು ಪ್ರಸ್ತಾಪ ಮಾಡಲು ನಾನು ಈಗ ಎದ್ದು ನಿಂತಿದ್ದೇನೆ 9 ದಿವಸಗಳ ಕಾಲ ವಿಧಾನ ಪರಿಷತ್ತಿನಲ್ಲಿ ಕಾರ್ಯ ಕಲಾಪಗಳು ನಡೆದಿಲ್ಲ ಪ್ರಕಾಶ್‌ರವರೇ ತಾವು ಕೇಳಬೇಕು, ಇದು ತಮಗೆ ಸಂಬಂಧ ಪಟ್ಟದ್ದು ಪತ್ರಿಕೆಗಳಲ್ಲಿ ಏನು ಬರೆಯುತ್ತಾರೆಂದರೆ ವಿಧಾನ ಪರಿಷತ್ತಿನಲ್ಲಿ 9 ದಿವಸಗಳಿಂದಲೂ ಕಾರ್ಯ ಕಲಾಪಗಳು ನಡೆಯುತ್ತಿಲ್ಲ ಮಾನ್ಯ ತಿಪ್ಪಣ್ಣನವರನ್ನು ವಿಧಾನ ಪರಿಷತ್ತಿನ ಸಭಾಪತಿಗಳೆಂದು ಒಪ್ಪುತ್ತಿಲ್ಲ ಈ ರೀತಿ ಬಹಳಷ್ಟು ಮಾತುಗಳು ಪತ್ರಿಕೆಗಳಲ್ಲಿ ಬರುತ್ತಿವೆ ಮೊನ್ನೆ ನಾನು ಮುಖ್ಯಮಂತ್ರಿಗಳಿಗೆ ಇದರ ಬಗ್ಗೆ ಚರ್ಚೆ ಮಾಡಲು ಸಭೆ ಕರೆಯಿರಿ ಎಂದು ಹೇಳಿದೆ ಸಭೆ ಕರೆದಿದ್ದರು ನಾನು ಮತ್ತು ಮಾನ್ಯ ಖರ್ಗೆಯವರು ಇದ್ದರು ಮಾನ್ಯ ಪ್ರಕಾಶ್‌ರವರೂ ಕೂಡ ಇದ್ದರು ನಾನು ಸಭೆಯಲ್ಲಿ ಹೇಳಿದೆ, ಕಳೆದ 9 ದಿನಗಳಿಂದಲೂ ವಿಧಾನ ಪರಿಷತ್ತಿನಲ್ಲಿ ಕಾರ್ಯ ಕಲಾಪ ನಡೆಯುತ್ತಿಲ್ಲ, ಇವೊತ್ತು ಕೂಡ ನಡೆಯುತ್ತಿಲ್ಲ ಕಾರ್ಯ ಕಲಾಪಗಳನ್ನು ಮಾನ್ಯ ತಿಪ್ಪಣ್ಣನವರು ನಡೆಸುವುದಕ್ಕೆ ಅಧಿಕಾರವನ್ನು ಹೊಂದಿಲ್ಲ ಅವರು Panel of Chairmen

ಪಟ್ಟಿಯಲ್ಲಿ ಇದ್ದಾರೆ ಇವೊತ್ತು ಸಭಾಪತಿ, ಉಪ ಸಭಾಪತಿಗಳು ಇರದಿದ್ದ ಪಕ್ಷದಲ್ಲಿ, ಏನಾಗುತ್ತದೆ? ತಾವು ಹೊರಗಡೆಗೆ ಹೋದರೆ ಉಪಾಧ್ಯಕ್ಷರಾದ ಮಾನ್ಯ ಗೋಪಾಲಕೃಷ್ಣರವರು ತಮ್ಮ ಪೀರದಲ್ಲಿ ಕುಳಿತುಕೊಳ್ಳುತ್ತಾರೆ ಅವರೂ ಇಲ್ಲದಿದ್ದರೆ Panel of Chairmen ಪಟ್ಟಿಯಲ್ಲಿ ಇರುವವರು ಕುಳಿತುಕೊಳ್ಳುತ್ತಾರೆ Panel of Chairmen ರವರಿಗೆ ಕೇವಲ ಅವೊತ್ತಿನ ಸಭೆಯನ್ನು ನಡೆಸುವ ಅಧಿಕಾರ ಮಾತ್ರ ಇರುತ್ತದೆ Business Advisory Committee ಯನ್ನು preside ಮಾಡತಕ್ಕಂಥ ಹಕ್ಕು ಅವರಿಗಿರುವುದಿಲ್ಲ ಬೇರೆ ವಿಷಯಗಳ ಬಗ್ಗೆ ಯಾವುದೇ ನಿರ್ಣಯಗಳನ್ನು ತೆಗೆದುಕೊಳ್ಳಲು ಅವರಿಗೆ ಹಕ್ಕಿರುವುದಿಲ್ಲ ಆದಕಾರಣ ನಾವೇನು ಹೇಳಿದ್ದೇವೆಂದರೆ, ಇವೊತ್ತು ವಿಧಾನ ಪರಿಷತ್ತಿನಲ್ಲಿ ನಮಗೆ ಬಹುಮತವಿದೆ

ಅಧ್ಯಕ್ಷರು ಈಗ ಆ ಮನೆಯ ವಿಷಯವನ್ನು ಈ ಮನೆಯಲ್ಲಿ ಚರ್ಚೆ ಮಾಡುವುದು ಎಷ್ಟರ ಮಟ್ಟಿಗೆ ಸರಿ ಹೇಳಿ ಆ ಮನೆಯ ಕಾರ್ಯ ಕಲಾಪಗಳ ಬಗ್ಗೆ

ಶ್ರೀ ಡಿ ಕೆ ಶಿವಕುಮಾರ್ ಮಾನ್ಯ ಅಧ್ಯಕ್ಷರೇ, ಆ ಮನೆ constitute ಆಗಿರುವುದು ಈ ಮನೆಯಿಂದ We have every right to take up the subject

ಶ್ರೀ ಸಿದ್ದರಾಮಯ್ಯ. That house is creation of this house ಹೀಗಿರುವಾಗ ನಮಗೆ ಮಾತನಾಡಬಾರದು ಎಂದರೆ ಹೇಗೆ? This house has created that house

(ಗೊಂದಲ)

ಶ್ರೀ ಜಿ ವಿ ಶ್ರೀರಾಮರೆಡ್ಡಿ. ಮಾನ್ಯ ಅಧ್ಯಕ್ಷರೇ ವಿಧಾನ ಪರಿಷತ್ತಿನ ಬಗ್ಗೆ ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡಲು ಅವಕಾಶಕ್ಕಾಗಿ ತಮಗೆ ಕೇಳಿದ್ದೆ ಅವರು ಮಾತನಾಡಿದ ಮೇಲೆ ನನಗೆ ಅವಕಾಶ ಮಾಡಿಕೊಡಿ

ಶ್ರೀ ಎನ್ ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು). ಮಾನ್ಯ ಅಧ್ಯಕ್ಷರೇ, ನಾನು ಮಾತನಾಡಿದ ಮೇಲೆ ಅವರಿಗೆ ಅವಕಾಶ ಕೊಡಿ ವಿಧಾನ ಪರಿಷತ್ತಿನ ಸಭಾಪತಿ ವಿಚಾರದಲ್ಲಿ ಒಂದು ಸಭೆಯಾಯಿತು ಅಲ್ಲಿ ಮುಖ್ಯಮಂತ್ರಿಗಳು ಮತ್ತು ಅಲ್ಲಿನ ಸಭಾನಾಯಕರಾದ ಮಾನ್ಯ ಡಿ ಹೆಚ್ ಶಂಕರಮೂರ್ತಿಯವರೂ ಕೂಡ ಇದ್ದರು ನಾವು ಹೇಳಿದೆವು ನಮಗೆ

ಬಹುಮತವಿದೆ, Demacratic set up ನಲ್ಲಿ ನಮಗೆ ಅವಕಾಶ ಮಾಡಿಕೊಡಿ ಸಭೆ ನಡೆಯಲಿ, ಈ ತರಹದ ಏನು attitude ಇದೆ, ಏನು ಉದ್ಧಟತನವಿದೆ ಅದು ಸರಿಯಲ್ಲವೆಂದು ನಾನು ಹೇಳಿದೆ ಇದೇ ಪದವನ್ನು ನಾನು ಹೇಳಿದೆ ಆಗ ಪ್ರಕಾಶ್‌ರವರು ಏನು ಹೇಳಿದರೆಂದರೆ, ಇಲ್ಲಾ , ಮುಖ್ಯಮಂತ್ರಿಗಳು ಸ್ವಲ್ಪ consult ಮಾಡಿ ಇದರ ಬಗ್ಗೆ ತೀರ್ಮಾನ ತೆಗೆದುಕೊಳ್ಳುತ್ತಾರೆಂದರು ಇವೊತ್ತು ಈಗಾಗಲೇ 5ನೇಯ ದಿವಸವಾಯಿತು, ಅವರ ತೀರ್ಮಾನ ಏನು ಎಂಬುದು ನಮಗೂ ಕೂಡ ಇನ್ನೂ ತಲುಪಿಲ್ಲ ನಮಗೆ ಅವೊತ್ತು ಅವರೇ ಕರೆಸಿದ್ದಾರೆ, ನಾವೂ ಕೂಡ ಹೋಗಿದ್ದೇವೆ, ಮಾತುಕತೆ ಆಡಿದ್ದೇವೆ ಅದಕ್ಕಾಗಿ ನಾನು ತಮ್ಮಲ್ಲಿ ಕೇಳತಕ್ಕಂಥದ್ದು ಏನೆಂದರೆ, ತಾವು ಸಂಸದೀಯ ವ್ಯವಹಾರಗಳ ಸಚಿವರಾಗಿದ್ದೀರಿ, ಹಿರಿಯರಿದ್ದೀರಿ, ಇವೊತ್ತು ಗೃಹ ಸಚಿವರೂ ಕೂಡ ಆಗಿದ್ದೀರಿ ಮೊಟ್ಟಮೊದಲನೆಯದಾಗಿ ಈ ರೀತಿಯಲ್ಲಿ ವಿಧಾನ ಪರಿಷತ್ತಿನಲ್ಲಿ Deadlock create ಆಗಿದೆ ಅದಕ್ಕಾಗಿ ನಾವು ಪ್ರಸ್ತಾಪ ಮಾಡುತ್ತಿದ್ದೇವೆ, ಈ ವಿಚಾರದಲ್ಲಿ ಸರ್ಕಾರದಲ್ಲಿ ನಿಮ್ಮ ತೀರ್ಮಾನವೇನು? ಮುಖ್ಯಮಂತ್ರಿಗಳು ಯಾವ ತೀರ್ಮಾನಕ್ಕೆ ಬಂದಿದ್ದಾರೆ ಇವೊತ್ತು ವಿಧಾನ ಪರಿಷತ್ತಿನಲ್ಲಿ ಕಾರ್ಯಕಲಾಪವನ್ನು ನಡೆಸುವುದಕ್ಕೆ ಏನಾದರೂ ಕ್ರಮ ತೆಗೆದುಕೊಂಡಿದ್ದೀರೋ ಅಥವಾ ಇಲ್ಲವೋ? ಅಥವಾ ಇದೇ ರೀತಿಯಲ್ಲಿಯೇ ತಾವು ಮುಂದುವರೆಸುತ್ತೀರಾ ಎಂಬ ಬಗ್ಗೆ ತಾವು ಉತ್ತರವನ್ನು ಕೊಡಬೇಕೆಂದು ಕೇಳಬಯಸುತ್ತೇನೆ

ಶ್ರೀ ಜಿ ವಿ ಶ್ರೀರಾಮರೆಡ್ಡಿ ಮಾನ್ಯ ಅಧ್ಯಕ್ಷರೇ, ನಾನೂ ಕೂಡ ಇದೇ ವಿಷಯದ ಬಗ್ಗೆ ಮಾತನಾಡಲು ನನಗೆ ಅವಕಾಶ ಮಾಡಿಕೊಡಬೇಕೆಂದು ತಮಗೆ ಪತ್ರವನ್ನು ಕಳುಹಿಸಿದ್ದೆ ಈಗ ನನಗೆ ತಾವು ದಯವಿಟ್ಟು ಅವಕಾಶವನ್ನು ಕೊಡಬೇಕು

ಅಧ್ಯಕ್ಷರು ಈಗ ಅವರು ಪ್ರಸ್ತಾಪ ಮಾಡಿದ್ದಾರಲ್ಲ ನೀವು ಪ್ರಸ್ತಾಪ ಮಾಡಿದರೂ ಅಷ್ಟೆ, ಅವರು ಪ್ರಸ್ತಾಪ ಮಾಡಿದರೂ ಅಷ್ಟೇ ಈಗ ಅವರು ಪ್ರಸ್ತಾಪ ಮಾಡಿದ್ದಾರೆ ಸರ್ಕಾರದವರು ಏನು ಹೇಳುತ್ತಾರೆ ಕೇಳೋಣ

ಶ್ರೀ ಜಿ ವಿ ಶ್ರೀರಾಮರೆಡ್ಡಿ ನಾನು ಪ್ರತ್ಯೇಕವಾಗಿಯೇ ತಮಗೆ ಕೇಳಿದ್ದೇನೆ ನನಗೂ ಕೂಡ ಮಾತನಾಡಲು ಅವಕಾಶ ಮಾಡಿಕೊಡಬೇಕೆಂದು ಕೇಳಿದ್ದೇನೆ

ಅಧ್ಯಕ್ಷರು ಕೇಳಿದ್ದೀರಿ

ಶ್ರೀ ಜಿ ವಿ ಶ್ರೀರಾಮರೆಡ್ಡಿ ಮಾನ್ಯ ಅಧ್ಯಕ್ಷರೆ, ಈ ಸದನ ಪ್ರಾರಂಭವಾದ ದಿನವೇ ಆ ಸದನವೂ ಕೂಡ ಪ್ರಾರಂಭವಾಯಿತು ಅವೊತ್ತಿನಿಂದ ಇವೊತ್ತಿನವರೆಗೂ ಅಲ್ಲಿ ನಡೆಯುತ್ತಿರತಕ್ಕಂಥ ವಿದ್ಯಮಾನಗಳೇನಿವೆ ಅದು ನಿಜವಾಗಲೂ ಕೂಡ ಮೇಲ್ಮನೆಗೆ ಗೌರವ ತರತಕ್ಕಂಥ ವಿಚಾರಗಳಲ್ಲ ಇದು ಮೊದಲನೆಯದು ಆದರೆ ಅದರ ಬಗ್ಗೆ ನಾವು ಇಲ್ಲಿ ಚರ್ಚೆ ಮಾಡುವುದಕ್ಕಾಗುವುದಿಲ್ಲ, ಅಲ್ಲಿ ಏನು ನಡೆಯುತ್ತಿದೆ ಎಂಬ ಬಗ್ಗೆ ಚರ್ಚೆ ಮಾಡುವುದು ನಮ್ಮ ವ್ಯಾಪ್ತಿಗೆ ಬರುವುದಿಲ್ಲ ಆದರೆ ಮುಖ್ಯವಾದಂಥ ಪ್ರಶ್ನೆ ಏನೆಂದರೆ, ಅಲ್ಲಿ ನಡೆಯುತ್ತಿರತಕ್ಕಂಥ ವಿದ್ಯಮಾನಗಳು ನಮ್ಮ ಮೇಲೆ ಕೂಡ ಪರಿಣಾಮವನ್ನು ಬೀರುತ್ತವೆ ಏಕೆಂದರೆ Upper House Lower Houseನ creation ಸಂವಿಧಾನದ ಪ್ರಕಾರ ಇಲ್ಲಿ resolution pass ಆಗಿ Council ರಚನೆಯಾಗಿದೆ ಇವತ್ತು ಲಕ್ಷಾಂತರ ರೂಪಾಯಿ ಖರ್ಚು ಮಾಡತಕ್ಕಂಥ ಸ್ಥಿತಿಯಲ್ಲಿ ಅನಾವಶ್ಯಕವಾಗಿ dead lock ಆಗಿ, ಅಲ್ಲಿ ಸದನ ನಡೆಯದೇ ಇರುವಂತಹ ಪರಿಸ್ಥಿತಿ ನಿರ್ಮಾಣವಾಗಿ, ಅಸಹ್ಯಕರವಾದ ಘಟನಾವಳಿಗಳು ನಡೆಯುತ್ತಿವೆ ಇದಕ್ಕೆ ಸರ್ಕಾರ ತಡೆ ಹಾಕಬೇಕು ಹಾಗೂ ತೀರ್ಮಾನ ತೆಗೆದುಕೊಳ್ಳಬೇಕು ಇನ್ನು ಎರಡನೆಯದಾಗಿ Councilನ ಅವಶ್ಯಕತೆ ಇಲ್ಲ ಸರ್ಕಾರ ಖರ್ಚನ್ನು ಕಡಿಮೆ ಮಾಡಬಹುದು Council ಗೆ ಅಧಿಕಾರ ಇಲ್ಲದೇ ಅಲಂಕಾರಕ್ಕೆ ಆ House ಅನ್ನು ಇಟ್ಟುಕೊಳ್ಳುವ ಅವಶ್ಯಕತೆ ಇದೆಯೇ ಎಂದು ನನ್ನ ಪ್ರಶ್ನೆ ಸಂವಿಧಾನಬದ್ಧವಾದ ಯಾವುದೇ ಅಧಿಕಾರ ಇಲ್ಲದೇ ಇರುವಂತಾದ್ದನ್ನು ಇಟ್ಟುಕೊಳ್ಳುವ ಅವಶ್ಯಕತೆ ಇದೆಯೇ ? ಹಿಂದೆ ಅದಕ್ಕೆ ಒಂದು sanctity ಇತ್ತು ಹಿರಿಯರು ಬೇರೆ ಬೇರೆ ವಿಭಾಗಗಳಿಂದ ಬಂದಂತಹ ಬುದ್ದಿಜೀವಿಗಳು, ಮೇಧಾವಿಗಳು ಸರ್ಕಾರಕ್ಕೆ ಸಲಹೆ ಕೊಡುತ್ತಾರೆ ಎಂದು ಇತ್ತು ಆ sanctity ಕೂಡ ಅದಕ್ಕೆ ಇವತ್ತು ಉಳಿದಿಲ್ಲ ಅದು ಏನೇನೋ ಆಗುತ್ತಿದೆ It has become a political asylum ರಾಜಕೀಯ ನಿರಾಶ್ರಿತರಿಗೆ ಒಂದು ಜಾಗ ಆಗತಕ್ಕಂಥ ಸ್ಥಿತಿ ನಿರ್ಮಾಣವಾಗಿ

ಶ್ರೀ ಕೆ ಆರ್ ರಮೇಶ್‌ಕುಮಾರ್: All these things will go into record Let us have some restraints

ಶ್ರೀ ಜಿ ವಿ ಶ್ರೀರಾಮರೆಡ್ಡಿ Record ಗೆ ಹೋಗಲಿ, ನನ್ನ ಅಭಿಪ್ರಾಯ ನಾನು ಹೇಳುತ್ತಿದ್ದೇನೆ ನಿಮ್ಮ ಅಭಿಪ್ರಾಯದಲ್ಲಿ ಇಲ್ಲವೆಂದು ಹೇಳಿ That is my opinion

ಶ್ರೀ ಕೆ ಆರ್ ರಮೇಶ್‌ಕುಮಾರ್ Sir, I am appealing to learned Member through you ಅವರ ಮುಖಾಂತರ ನಿಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ, let us have differences, but let us be considerate It is not fair

ಶ್ರೀ ಡಿ ಕೆ ಶಿವಕುಮಾರ್ ಹಾಗಾದರೆ ನೀವೆಲ್ಲ political rehabilitationಗೋಸ್ಕರ ಹೋಗಿದ್ದೀರಾ? ಏನು ಸ್ವಾಮಿ?

ಶ್ರೀ ಜಿ ವಿ ಶ್ರೀರಾಮರೆಡ್ಡಿ ಅದರ ಬಗ್ಗೆ ಸರ್ಕಾರ ಸ್ಪಷ್ಟವಾದಂತಹ ನಿಲುವು ತೆಗೆದು ಕೊಳ್ಳಬೇಕು ಇಲ್ಲ, ಚುನಾವಣೆ ನಡೆಸಬೇಕು ಅಲ್ಲಿ ಅಧ್ಯಕ್ಷರನ್ನು ಆಯ್ಕೆ ಮಾಡಬೇಕು ಸರ್ಕಾರದ ಧೋರಣೆ ಏನೆಂದು ಇವತ್ತು ಸದನದಲ್ಲಿ ಸ್ಪಷ್ಟ ಮಾಡಬೇಕು ಸುಮ್ಮನೆ ಅದನ್ನು ಮುಂದುವರೆಸಿಕೊಂಡು ಹೋಗುವುದು ಸರಿಯಲ್ಲ

ಅಧ್ಯಕ್ಷರು ಆಯಿತು, react ಮಾಡುತ್ತಾರೆ

ಶ್ರೀ ಡಿ ಕೆ ಶಿವಕುಮಾರ್ ಮಾನ್ಯ ಅಧ್ಯಕ್ಷರೆ, Law Minister ಮಾತನಾಡುವುದಕ್ಕಿಂತ ಮೊದಲು ನಾನು ಮಾತನಾಡುತ್ತೇನೆ ಸದನ ನಡೆಸುತ್ತಿರುವ ಬಗ್ಗೆ ಇಡೀ ರಾಜ್ಯ ನೋಡುತ್ತಿದೆ ಇದು ಪ್ರಜಾಪ್ರಭುತ್ವಕ್ಕೆ ದೊಡ್ಡ ಅವಮಾನ ಪ್ರಜಾಪ್ರಭುತ್ವವನ್ನು ಕೊಲೆ ಮಾಡುವಂತಹ ರೀತಿಯಲ್ಲಿ ವಿಧಾನ ಪರಿಷತ್ತಿನ ಅಧ್ಯಕ್ಷರ ಸ್ಥಾನದ ಬಗ್ಗೆ ನಮ್ಮ ಎಂ ಪಿ ಪ್ರಕಾಶ್‌ರವರು Law and Parliamentary affairs Minister ಆಗಿದ್ದಾಗ ಪ್ರಸ್ತಾಪಿಸಿ ಅವರ conscience ವಿರುದ್ಧವಾಗಿ ಇಲ್ಲಿ ಕೆಲಸ ನಡೆಯುತ್ತಿದೆ ಎಂದು ಹೇಳಿದರು ಅಲ್ಲಿ ಏನು ನಡೆಯುತ್ತಿದೆ ಎನ್ನುವುದನ್ನು ಹೇಳಲು ನಿಮ್ಮ conscience ಇಲ್ಲಿ permit ಮಾಡುತ್ತಿಲ್ಲ xxx ಇದರ ಬಗ್ಗೆ ಈ ಮನೆ ಯಾವುದಾದರೂ ರೀತಿಯಲ್ಲಿ ತೀರ್ಮಾನವನ್ನು ತೆಗೆದುಕೊಳ್ಳಲೇಬೇಕಾಗುತ್ತದೆ

---

xxx ಸಭಾಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ

ಅಧ್ಯಕ್ಷರು ಈಗ ರಾಜ್ಯಪಾಲರ ಬಗ್ಗೆ ಆ ರೀತಿ comments ಮಾಡಬೇಡಿ

ಶ್ರೀ ಡಿ ಕೆ ಶಿವಕುಮಾರ್ ಏಕೆಂದರೆ ultimately, ಈ ಪ್ರಜಾಪ್ರಭುತ್ವ ಉಳಿಸಿ, ಸದನದ ಗೌರವವನ್ನು ರಕ್ಷಣೆ ಮಾಡುವವರು ಯಾರು? ಹಾಗಾದರೆ majority ಗೆ ಒಂದು ಗೌರವ ಇಲ್ಲವೇ? 40 ಜನ members majority ಯಲ್ಲಿ ಇದ್ದುಕೊಂಡು

ಅಧ್ಯಕ್ಷರು ಬೇರೆಯದಕ್ಕಲ್ಲ, it may be their opinion ರಾಜ್ಯಪಾಲರ ಬಗ್ಗೆ ಆ ರೀತಿ ಮಾತನಾಡಬೇಡಿ ಅದನ್ನು ಕಡತದಿಂದ ತೆಗೆದು ಹಾಕಲಾಗಿದೆ

ಶ್ರೀ ಡಿ ಕೆ ಶಿವಕುಮಾರ್ ನಾವು ಹೇಳಿದ್ದನ್ನೆಲ್ಲಾ ತೆಗೆದು ಹಾಕುತ್ತೀರಿ, ತೆಗೆದು ಹಾಕಿಕೊಳ್ಳಿ ವರವಾಗಿಲ್ಲ ಆದರೆ ನಾವು majority ಇದ್ದುಕೊಂಡು ನಮಗೆ ಗೌರವ ಇಲ್ಲವೆಂದರೆ, ಅಧ್ಯಕ್ಷರು ಹಾಗೂ ಉಪಾಧ್ಯಕ್ಷರನ್ನು ಆಯ್ಕೆ ಮಾಡುವುದಕ್ಕೆ ಸರ್ಕಾರ ಅವಕಾಶ ಮಾಡಿಕೊಡುವುದಿಲ್ಲವೆಂದರೆ, ಅದಕ್ಕೆ ನಾವು ರಾಜಕಾರಣ ಮಾಡುತ್ತೇವೆ, political strategy ಎಂದರೆ, ಇಂತಹ ಒಂದು ಬೇಜವಾಬ್ದಾರಿ ಹೇಳಿಕೆ ಇಡೀ ರಾಜ್ಯದಲ್ಲಿ ಯಾವತ್ತು ಕೂಡ ಆಗಿರಲಿಲ್ಲ ಪ್ರಜಾಪ್ರಭುತ್ವದ ಕಗ್ಗೊಲೆಯನ್ನು ಈ ಸರ್ಕಾರ ಇಲ್ಲಿ ಮಾಡುತ್ತಿದೆ

ಅಧ್ಯಕ್ಷರು ಆಯಿತು ಹೇಳಿ

ಶ್ರೀ ಕೆ ಆರ್ ರಮೇಶ್‌ಕುಮಾರ್ ಮಾನ್ಯ ಅಧ್ಯಕ್ಷರೆ, I will not take much time, ಸಾಮಾನ್ಯವಾಗಿ ಆ ಮನೆಯ ನಡವಳಿಕೆಗಳನ್ನು ಅದವಾ ಅಲ್ಲಿಯ ವಿಚಾರಗಳನ್ನು ಇಲ್ಲಿ ಪ್ರಸ್ತಾಪ ಮಾಡುವುದು ಸಾಧುವಲ್ಲ ಇಲ್ಲಿ ಮೂಲಭೂತವಾದ ವಿಷಯವೇನೆಂದರೆ ಆ ಸದನ ನಮ್ಮ ಪ್ರಯತ್ನದ ಸೃಷ್ಟಿ ಎಲ್ಲೋ ಒಂದು ಕಡೆಗೆ ನಮ್ಮಲ್ಲಿರತಕ್ಕಂಥ ಅವೇಕ್ಷೆಗಳನ್ನು ಈಡೇರಿಸಿಕೊಳ್ಳುವುದಕ್ಕೆ ನಾವು ಅದಕ್ಕೆ ಜನ್ಮ ಕೊಟ್ಟಿದ್ದೇವೆ ಮಾನ್ಯ ರೆಡ್ಡಿಯವರು ಹೇಳಿದಂತೆ ಆ ಮನೆ ಇರಬೇಕೇ ಅಥವಾ ಬೇಡವೇ ಎನ್ನುವುದು ನಮ್ಮ ವಿವೇಚನೆಗೆ ಅನುಗುಣವಾಗಿ ಆಯಾಯ ಸಂದರ್ಭಕ್ಕೆ ತಕ್ಕಂತೆ ತೀರ್ಮಾನಕ್ಕೆ ತೆಗೆದುಕೊಳ್ಳಬಹುದು ನಮ್ಮ ಸಂಸದೀಯ ಪ್ರಜಾಪ್ರಭುತ್ವದ ವ್ಯವಸ್ಥೆಯೊಳಗೆ ನಾವು ಹೆಚ್ಚಾಗಿ Britain ಅನ್ನು ಅನುಸರಿಸುತ್ತೇವೆ ನಮಗೆ ಎರಡು ಗ್ರಂಥ ಇವೆ ಅದರಲ್ಲಿ ಒಂದು May's Parliamentary Practice, ಎರಡನೆಯದು Kaul and

Shakdhar ನಮ್ಮಲ್ಲಿ ಹೆಚ್ಚು ಆಧಾರ ಪಡೆದುಕೊಂಡಿರುವಂತಹ ಗ್ರಂಥ Whip ಯಾರು? Speaker ಯಾರು? Deputy Speaker ಯಾರು? Chairperson ಯಾರು? Pro-tem Speaker ಯಾರು? Panel Chairman ಯಾರು? ಪ್ರತಿಯೊಂದನ್ನು ಕೂಡ ಸವಿವರವಾಗಿ ಹೇಳಲಾಗಿದೆ ಈಗ ನಮ್ಮ ಸಮಸ್ಯೆ ಏನೆಂದರೆ ನಮ್ಮಿಂದ ಉದ್ಭವವಾದಂತಹ ಆ ಒಂದು ಸಂಸ್ಥೆ ಕೆಲಸ ಮಾಡುವುದಕ್ಕೆ ಆಗುತ್ತಿಲ್ಲ, ನಿಷ್ಕ್ರಿಯವಾಗಿದೆ ಅದು ಕ್ರಿಯಾತ್ಮಕವಾಗಿ ಕೆಲಸ ಮಾಡುವಂತೆ ನಾವು ಚಾಲನೆ ಕೊಡಬೇಕಾಗಿದೆ ಕಗ್ಗಂಟು ಬಂದಿರುವಂತಹ ವಿಚಾರದಲ್ಲಿ ಅದರ meritsಗೆ ಹೋಗಬಾರದು ನಾನು ಸಂಸದೀಯ ವ್ಯವಹಾರ ಸಚಿವರಲ್ಲಿ ತಮ್ಮ ಮುಖಾಂತರ ಇಷ್ಟನ್ನೇ ನಿವೇದಿಸಿಕೊಳ್ಳುತ್ತೇನೆ ಒಂದು House ಹೊಸದಾಗಿ constitute ಆದಾಗ ಮಾನ್ಯ ರಾಜ್ಯಪಾಲರು ಚುನಾವಣಾ ಆಯೋಗದ ವರದಿಯನ್ನು ತರಿಸಿಕೊಂಡು, ಅತ್ಯಂತ ಹಿರಿತನ ಹೊಂದಿರುವಂತಹ ಸದಸ್ಯರು ಯಾರಿರುತ್ತಾರೆ, ಅವರಿಗೆ ಪ್ರತಿಜ್ಞಾವಿಧಿಯನ್ನು ರಾಜಭವನದಲ್ಲಿ ಬೋಧಿಸಿ, ಅವರನ್ನು pro-tem Speaker ಅಥವಾ pro-tem Chairman ಎಂದು ಮಾಡಿ ಅವರಿಗೆ ಒಂದು ಸಂಕ್ಷಿಪ್ತವಾದಂತಹ ಜವಾಬ್ದಾರಿಯನ್ನು ಕೊಡುತ್ತಾರೆ ಇತರೆ ಚುನಾಯಿತ ಸದಸ್ಯರು ಯಾರಿರುತ್ತಾರೆ ಅವರಿಗೆ ಪ್ರಮಾಣ ವಚನವನ್ನು ಇವರು ಬೋಧಿಸಿಬಿಟ್ಟು House constitute ಆಗುವ ಹಾಗೆ ಮಾಡುತ್ತಾರೆ ಅಲ್ಲಿಗೆ ಅವರ ಕೆಲಸ ಮುಗಿದುಹೋಯಿತು That is the role of a pro-tem Speaker or Pro-tem Chairman Elected Chairman ಯಾರಿರುತ್ತಾರೆ, he will also have the assistance of an elected Deputy Chairman, as the case may be, Speaker and Deputy Speaker Speaker ಅವರು ಕೂಡ ನಮ್ಮ ಕಲಾಪಗಳು ಪ್ರಾರಂಭ ಮಾಡುವಾಗ ಬೆಳಿಗ್ಗೆ ಅವರೇ ಬರಬೇಕು ಅಧ್ಯಕ್ಷರು ಬಂದು bell ಹಾಕಿಸಿ agenda ಪ್ರಕಾರ Question hour, ಇವನ್ನೆಲ್ಲಾ ನಡೆಸಿ, ಆಮೇಲೆ ಬೇಕಿದ್ದರೆ ಅವರು indication ಕೊಡುತ್ತಾರೆ ಆಗ Deputy Speaker ಕುಳಿತುಕೊಳ್ಳುತ್ತಾರೆ ಒಂದು ವೇಳೆ ಮಾನ್ಯ ಅಧ್ಯಕ್ಷರು ಬೇರೆ ಯಾವುದಾದರೂ ಕಾರಣಕ್ಕೆ House ಗೆ ಬರುವುದಕ್ಕೆ ಅನಾನುಕೂಲವಿದ್ದರೆ, ಅದನ್ನು ಮೊದಲೇ ತಿಳಿಸಿದರೆ ಆ ದಿವಸದಲ್ಲಿ Deputy Speaker, can

come and conduct the House ಆಗ he is not Deputy Speaker Though he is designated as Deputy Speaker, he will be playing the role of a Speaker That is the case in case of Deputy Chairman also Chairman and Deputy Chairman ಇಬ್ಬರೂ ಇಲ್ಲದೇ ಇದ್ದಾಗ ಶೂನ್ಯವಾಗುತ್ತದೆ Panel Chairmen or Panel Speakers ಯಾರು? ಸದನದಲ್ಲಿ ತಾವು ಏನು ಮಾಡುತ್ತೀರಿ ತಮ್ಮ ಅಭಿಪ್ರಾಯದಂತೆ ಎಲ್ಲಾ ಭಾಗಗಳಿಂದ ಸೇರಿರತಕ್ಕಂಥ ಐದು ಅಥವಾ ಆರು ಮಂದಿ ಹಿರೀಕರನ್ನು Panel ನಲ್ಲಿಟ್ಟಿರುತ್ತೀರಿ ಅವರಿಗೂ ಕೂಡ ಒಂದು ಕಡೆ ತರಬೇತಿ ಆಗಬೇಕು ಎನ್ನುವುದು ಇದ್ದರೆ, ಎಂತಹ exigency ಯನ್ನು ಕೂಡ ನಾವು meet ಮಾಡುವುದಕ್ಕೆ ತಯಾರಾಗಿರಬೇಕು ಎನ್ನುವುದು ಎರಡನೇ ಉದ್ದೇಶ ತಾವೂ ಇಲ್ಲದೇ ಇದ್ದು Deputy Speaker ಸದನ ನಡೆಸುತ್ತಿದ್ದು, ಅವರಿಗೆ ಅನಿವಾರ್ಯ ಇದ್ದು, ಅವರೂ ಕೂಡ ಹತ್ತು ನಿಮಿಷ ಹೊರಗೆ ಹೋಗಬೇಕಾದಂತಹ ಸಮಯದಲ್ಲಿ ಅವರು Panel ನಲ್ಲಿ ಇರುವಂತಹ ಯ್ಯಾರಿಗಾದರೂ ಒಬ್ಬರಿಗೆ ಕಾರ್ಯಾಲಯದ ಮುಖಾಂತರ ಸೂಚನೆ ಕೊಡುತ್ತಾರೆ ಆ ಸೀಮಿತ ಉದ್ದೇಶಕ್ಕಾಗಿ Panel ನಲ್ಲಿ ಇರುವವರು ಬಂದು proceedings conduct ಮಾಡುತ್ತಾರೆ ಬಹಳ ಹೆಚ್ಚೆಂದರೆ ಅವರು adjourn ಮಾಡಬಹುದು Panel ನಲ್ಲಿ ಇರತಕ್ಕಂತವರು, they cannot come and summon the House the next day ಬರುವುದಕ್ಕೆ ಸಾಧ್ಯವೇ ಇಲ್ಲ ಈಗ ಮೇಲ್ಮನೆಯಲ್ಲಿ ಏನಾಗಿದೆ ಎಂದರೆ Chairman ರವರ ಸ್ಥಾನ ಖಾಲಿ ಇದೆ Deputy Chairman ರವರು ದುರ್ದೈವವಶಾತ್ ಬಂದು ತಮ್ಮ ಆಸನದಲ್ಲಿ ಕುಳಿತುಕೊಂಡು ಕಾರ್ಯಭಾರ ಗಳನ್ನು ನಡೆಸುವ ಸ್ಥಿತಿಯಲ್ಲಿ ಇಲ್ಲ ಹಾಗಿದ್ದಾಗ, who has to run the House? . It's a Constitutional crisis ಇಲ್ಲಿ majority, minority ಯಾರಾಗುತ್ತಾರೆ, ಯಾರು ಹೋಗುತ್ತಾರೆ ಎನ್ನುವಂತಹ ಪ್ರಶ್ನೆ ಅಲ್ಲ ನಾವು ಮೇಲ್ಮನೆಯಲ್ಲಿ ಇರಬೇಕು, ಅನೇಕ ಕ್ಷೇತ್ರ ಗಳಲ್ಲಿ ಪಳಗಿದವರು, ಅನುಭವಸ್ಥರು ಹಾಗೂ ತಿಳುವಳಿಕಸ್ಥರ ಸಹಾಯ ಈ ಸದನಕ್ಕೆ advice ರೂಪದಲ್ಲಿ ಬರಬೇಕು ಎನ್ನುವ ಸದ್ಭಾವನೆಯಿಂದ, ಸದುದ್ದೇಶದಿಂದ ಸದನಕ್ಕೆ ನಾವು ಜನ್ಮ ಕೊಟ್ಟು ಅದನ್ನು ಸಂಖ್ಯಾಬಲಗಳ

ಅಥವಾ ರಾಜಕೀಯ ಕಾರಣಕ್ಕಾಗಿ ನಿಷ್ಕ್ರಿಯ ಮಾಡಿದರೆ ಅದು ನಾವು ಸಂವಿಧಾನಕ್ಕೆ ಮಾಡಿದ ದೊಡ್ಡ ಅಪಚಾರವಾಗುತ್ತದೆ ಅದಕ್ಕೆ ಅವಕಾಶ ಕೊಡಬಾರದು ಹಿಂದೆ ಇವೆಲ್ಲಾ ಆಗಿವೆ ಆದುದರಿಂದ ಈ ವಿಷಯವನ್ನು ಇಷ್ಟರ ಮಟ್ಟಿಗೆ ಇಲ್ಲಿ ನಾವು ಪ್ರಸ್ತಾಪ ಮಾಡುವುದರಲ್ಲಿ ಅದು ಕಾನೂನುಬಾಹಿರವಾಗುವುದಿಲ್ಲ ನಾನು ಮಾನ್ಯ ಪ್ರಕಾಶ್‌ರವರಲ್ಲಿ ನಿವೇದಿಸಿಕೊಳ್ಳುತ್ತೇನೆ ದಯಮಾಡಿ ಇದರ ವಿಚಾರದಲ್ಲಿ ನಾವು ಪಟ್ಟು ಹಿಡಿಯುವುದು ಬೇಡ ಈಗ ಉಳಿದಿರುವುದು ಸಂವಿಧಾನದ ಮಾರ್ಗ ಇದನ್ನು ನೀವು Cabinet ನಲ್ಲಿ ತೀರ್ಮಾನ ಮಾಡಬೇಕು Chairman election fix ಮಾಡಬೇಕು ಅದು ಆಗ ಬೇಕಾದರೆ ಒಬ್ಬರು pro-tem Chairman ಇರಲೇಬೇಕು Pro-tem Chairman ವಿಚಾರವನ್ನು ನೀವು ರಾಜ್ಯಪಾಲರಿಗೆ ಬರೆದು ಕಳುಹಿಸಿದರೆ, ರಾಜ್ಯಪಾಲರು ಒಬ್ಬ Pro-tem Chairman ರನ್ನು appoint ಮಾಡುತ್ತಾರೆ Pro-tem Chairman will conduct the election of the Chairman, then the functioning will go on

ನಾವು ಈ ಸ್ಥಿತಿಯಲ್ಲಿ House summon ಮಾಡಿ, ಅವರು ಇಲ್ಲಿ ಬಂದು Governor's addressನಲ್ಲಿ participate ಮಾಡಿ, ಎರಡು Houseನಲ್ಲಿ Governorಗೆ Motion of Thanks ಅನ್ನು ನಾವು ಮೂವ್ ಮಾಡಬೇಕು ನಮ್ಮ ಗೌರವವನ್ನು ಅವರಿಗೆ ನಲ್ಲಿಸಬೇಕು ಒಂದು ಸದನದಲ್ಲಿ ಅವರಿಗೆ ಗೌರವವನ್ನು ಸಲ್ಲಿಸಿ, ಇನ್ನೊಂದು ಸದನದಲ್ಲಿ ಗೌರವವನ್ನು ಸಲ್ಲಿಸದೇ ಇರುವುದು ಆಗಿದೆ ಇನ್ನು ಸ್ವಲ್ಪ ದಿವಸದಲ್ಲೇ ಬಜೆಟ್ ಸೆಷನ್ ಬರುತ್ತಿದೆ See, where is the end for this? ಇಡೀ ದೇಶ ನಮ್ಮನ್ನು ನೋಡಿ ನಗುತ್ತಿದೆ, observe ಮಾಡುತ್ತಿದ್ದಾರೆ ಅದುದರಿಂದ ನಾನು ತಮಗೆ ಹೇಳುವುದೆನೆಂದರೆ, ರಾಜಕೀಯ ಕಾರಣಗಳಿಂದ ಒಂದು ಮೆಟ್ಟಿಲು ಮೇಲೆ ಹತ್ತುವಂತಹ ಪ್ರಯತ್ನವನ್ನು ನಾವು ಮಾಡಬೇಕಾಗುತ್ತದೆ ಕೆಲವು ಸಲ ನಮಗೆ ಇರಿಸು, ಮುರಿಸು ಆಗುತ್ತದೆ ದಯಮಾಡಿ ಮಾನ್ಯ ಎಂ ಪಿ ಪ್ರಕಾಶ್‌ರವರು ಅನುಭವನ್ನರು, ತಾವು ಆ ಸದನದಲ್ಲೂ ಕೆಲಸವನ್ನು ಮಾಡಿದ್ದೀರಿ ನೀವು ಇದರಲ್ಲಿ you will have to display your commitment to parliamentary democracy It is a situation

where your commitment is called to be displayed so far as parliamentary democracy is concerned It is not the question of who becomes what Otherwise all of us would go on record leaving a very bad impression to the coming generation Such a thing should not happen ನಾನು ತಮ್ಮ ಮುಖಾಂತರ ಮಾನ್ಯ ಸಂಸದೀಯ ವ್ಯವಹಾರಗಳ ಸಚಿವರಿಗೆ ಕೈ ಜೋಡಿಸಿ ಬೇಡಿಕೊಳ್ಳತ್ತೇನೆ ಇದರಲ್ಲಿ ಬಲಾಬಲಗಳ ಪ್ರಶ್ನೆ ಅಥವಾ ಪಾರ್ಟಿಗಳ ವಿಚಾರಗಳನ್ನು ಗಣನೆಗೆ ತೆಗೆದುಕೊಳ್ಳುವುದು ಬೇಕಾಗಿಲ್ಲ ಒಂದು, it is a matter of principle ತಾವು I think, ಒಂದು ಉತ್ತಮವಾದ ಮಾರ್ಗದರ್ಶನವನ್ನು ಕೊಡುತ್ತಿರೆಂಬ ವಿಶ್ವಾಸವನ್ನು ಇಟ್ಟುಕೊಂಡು ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ

ಶ್ರೀ ಮಲ್ಲಿಕಾರ್ಜುನ ಖರ್ಗೆ ಮಾನ್ಯ ಅಧ್ಯಕ್ಷರೆ, ಈಗಾಗಲೇ ಬಹಳಷ್ಟು ಜನರು ಮಾತನಾಡಿದ್ದಾರೆ ನಾನು ಹೆಚ್ಚಿನ ಸಮಯವನ್ನು ತೆಗೆದುಕೊಳ್ಳುವುದಿಲ್ಲ ಈಗ ಮೇಲ್ಮನೆಯಲ್ಲಿ dead lock create ಆದಾಗ naturally ಕೆಳಮನೆಯಲ್ಲಿ ಅದು ಚರ್ಚೆ ಅಗಲೇ ಬೇಕು, ಏಕೆಂದರೆ ಸರ್ಕಾರದ ಗಮನಕ್ಕೆ ಯಾರಾದರೂ ತರಲೇಬೇಕಲ್ಲಾ, ಇಲ್ಲ ಮಾಧ್ಯಮಗಳ ಮೂಲಕ ಬಂದದ್ದನ್ನು ಅವರು ಗಮನಿಸಿ, ಅವರು ಮುಂದುವರೆಯಬೇಕು ಇಲ್ಲ, ನಾವು Governor ರವರಿಗೆ ಕೊಟ್ಟಂತಹ representation ಮೇಲಾದರೂ ಅವರು act ಮಾಡಬೇಕು, ಇಲ್ಲ, ಸರ್ಕಾರವಾದರೂ suo-motu ಆದರೂ act ಮಾಡಬೇಕು ಈ ಮೂರು ವಿಫಲವಾದಾಗ, ಅನಿವಾರ್ಯವಾಗಿ ನಾವು ಈ ಸದನದಲ್ಲಿ ತಮ್ಮ ಗಮನಕ್ಕೆ ತರಬೇಕು, ಮತ್ತೆ ಏನು ನಡೆದಿದೆ ಎಂಬುದನ್ನು ಕೂಡ ಸ್ವಲ್ಪಮಟ್ಟಿಗೆ ಹೇಳಬೇಕಾಗುತ್ತದೆ ಈಗ ಏನಾಗಿದೆ ಎಂದರೆ ಮೇಲ್ಮನೆಯಲ್ಲಿ, ಈಗಾಗಲೇ ಮಾನ್ಯ ಕೆ ಆರ್ ರಮೇಶ್ ಕುಮಾರ್‌ರವರು ಪ್ರಸ್ತಾಪ ಮಾಡಿದ ಹಾಗೆ ಒಂದು ಕಡೆ ಅಧ್ಯಕ್ಷರ ಸ್ಥಾನ ಖಾಲಿ ಇದೆ ಉಪಾಧ್ಯಕ್ಷರು ಕೆಲಸ ಮಾಡುವ ಸ್ಥಿತಿಯಲ್ಲಿ ಇಲ್ಲ ಇಂತಹ ಸಂದರ್ಭದಲ್ಲಿ ಸದನ ಹೇಗೆ ನಡೆಯಬೇಕು? ಇದು ಬಹಳ ಮುಖ್ಯ ಆದರೆ ದುರ್ದೈವದಿಂದ Presiding Officers list ಮಾಡುವಾಗ, ಒಂದು Presiding Officers list ಏನು ಮಾಡಿದ್ದರು ಅದನ್ನೆ ಇಟ್ಟು ಕೊಂಡು,

ಇವತ್ತು ಮೇಲ್ಮನೆಯಲ್ಲಿ ಒಬ್ಬರನ್ನು ಅಧ್ಯಕ್ಷರನ್ನಾಗಿ ಮಾಡಿದ್ದೇವೆಂಬ ಮಾತನ್ನು ಸರ್ಕಾರದವರು ಕೂಡ ಹೇಳುತ್ತಿದ್ದಾರೆ ಅದು ಕಾನೂನು ಬಾಹಿರವೆಂಬ ಮಾತನ್ನು ನಾವು ಪದೇ ಪದೇ ಹೇಳುತ್ತಿದ್ದೇವೆ ಇಲ್ಲಿ ಅಧ್ಯಕ್ಷರ ಚುನಾವಣೆಯನ್ನು ನಡೆಸಬೇಕು ಇಲ್ಲಿ ಯಾರಿಗೆ majority ಇದೆ, ಅವರು ಆಯ್ಕೆಯಾಗುತ್ತಾರೆ ಅವರು ಯಾರೆ ಆಗಿರಬಹುದು, ನಿಮಗೆ majority ಇದ್ದರೆ ನೀವೇ ಆಗಿ, ಅಥವಾ ಬೇರೆಯವರಿಗೆ majority ಇದ್ದರೆ ಬೇರೆ ವ್ಯಕ್ತಿಗಳು ಆಗುತ್ತಾರೆ ಆದರೆ ಇದನ್ನು prestige ಮಾಡಿಕೊಂಡರೆ ಹೇಗೆ? ನಾವು ಪದೇ ಪದೇ ಅವರನ್ನು ಕೇಳುತ್ತೇವೆ ನೀವು ಹಿಂದೆ ಮಾಡಿಲ್ಲವೇ? ಕಾಂಗ್ರೆಸ್ ಸರ್ಕಾರವಿದ್ದಾಗ, ಮಾನ್ಯ ವಿ ಆರ್ ಸುದರ್ಶನ್‌ರವರನ್ನು ಅಧ್ಯಕ್ಷರನ್ನಾಗಿ ಮಾಡಿಲ್ಲವೇನು? ಕಾಂಗ್ರೆಸ್‌ನವರು ಇದ್ದಾಗ ಡೇವಿಡ್ ಸಿಮೆಯೋನ್‌ರವರನ್ನು ಅಧ್ಯಕ್ಷರನ್ನಾಗಿ ಮಾಡಿಲ್ಲವೇನು? ಶ್ರೀ ಡಿ ಬಿ ಕಲ್ಮಣ್‌ಕರ್‌ರವರನ್ನು ಮಾಡಿಲ್ಲವೇನು? ಶ್ರೀ ಬಿ ಆರ್ ಪಾಟೀಲ್‌ರವರನ್ನು ಮಾಡಿಲ್ಲವೇನು? ಇವೆಲ್ಲವನ್ನು ಹೇಳಿಕೊಂಡು ಹೋದಾಗ, ಇದರಿಂದ ಏನು ಆಗಬಹುದೆಂದರೆ ಕಾಂಗ್ರೆಸ್‌ನವರೇ ಮೇಲ್ಮನೆಯಲ್ಲಿ ಈ ಒಂದು business ಅನ್ನು stall ಮಾಡುತ್ತಿದ್ದಾರೆಂಬ ಪ್ರಚಾರ ನಡೆದಿದೆ ಅಲ್ಲಿ ಒಂಭತ್ತು ದಿವಸಗಳಾಯಿತು ಅವರು ಏನು ಕೆಲಸವನ್ನು ಮಾಡುತ್ತಿಲ್ಲ, ಕೆಲಸ ಮಾಡಲು ಬಿಡುತ್ತಿಲ್ಲವೆಂದು ಆಗುತ್ತಿದೆ ಆದರೆ ಅಲ್ಲಿ ಸಭಾಪತಿಗಳ ಸ್ಥಾನ ಖಾಲಿ ಇದೆ ಅದನ್ನು ಸಂವಿಧಾನದ ಪ್ರಕಾರ ಮಾಡುವುದಕ್ಕೆ ಬರುವುದಿಲ್ಲವೆಂದು, ಏಕೆ highlight ಆಗುತ್ತಿದೆಯೆಂಬುದು ನನಗೆ ಗೊತ್ತಾಗುತ್ತಿಲ್ಲ, ಇಲ್ಲಿ ಏಕೆ ಚುನಾವಣೆ ಮಾಡುತ್ತಿಲ್ಲವೆಂದು ಗೊತ್ತಿಲ್ಲ ನಾವು ಇದನ್ನು amicably settle ಮಾಡಿಕೊಳ್ಳೋಣವೆಂದು ಹೇಳಿ, ನಾವು ಮಾನ್ಯ ಎಂ ಪಿ ಪ್ರಕಾಶ್‌ರವರನ್ನು ಹಾಗೂ ಮಾನ್ಯ ಮುಖ್ಯಮಂತ್ರಿರವರನ್ನು ಕೇಳಿಕೊಂಡೆ, ಈ ಬಗ್ಗೆ ಒಂದು ಸಭೆಯನ್ನು ಕೂಡ ನಡೆಸಿದರು ಇದನ್ನು ಎರಡೇ ದಿವಸಗಳಲ್ಲಿ settle ಮಾಡುತ್ತೇವೆಂದು ಹೇಳಿದರು ಇವರು ಎರಡು ದಿವಸಗಳಲ್ಲಿ ಸೆಟಲ್ ಮಾಡುತ್ತೇವೆಂದು ಹೇಳಿ, ಇನ್ನೂ ಇದರ ಬಗ್ಗೆ ಏನು ನಿರ್ಣಯವಿಲ್ಲ ಇವತ್ತು ಉಲ್ಟ ಏನು ಮಾಡಿದ್ದಾರೆಂದರೆ, ಎಲ್ಲಿ 40 ಜನ ಸದಸ್ಯರು ಕಾಂಗ್ರೆಸ್ ಪಕ್ಷದವರು ಇದ್ದಾರೆ ಅವರನ್ನು ಅಧ್ಯಕ್ಷರು rest of the session suspend ಮಾಡಿದ್ದಾರೆ ಅಂದರೆ, ಮೆಜಾರಿಟಿ ಇಲ್ಲದೇ ಒಬ್ಬ ಅಧ್ಯಕ್ಷರು 40 ಜನ

ಸದಸ್ಯರನ್ನು suspend ಮಾಡಬೇಕೆಂದರೆ, ಅವರು ಅಧ್ಯಕ್ಷರೇ ಅಲ್ಲ ಇಂತಹ illegal ಮತ್ತು against the rules, against the Constitution ನಡೆದುಕೊಳ್ಳವಂತಹ ವ್ಯವಸ್ಥೆ ಇದ್ದರೆ, ಇದನ್ನು ಡೆಮಾಕ್ರಸಿ ಎಂದು ಕರೆಯಬೇಕಾ? He has no locus-standi to do this and he has done ನಾವು ಇಲ್ಲಿ ಅಧ್ಯಕ್ಷರು ಎಂದೇ ಒಪ್ಪಿಕೊಳ್ಳುತ್ತಿಲ್ಲ ಅವರಿಗೆ ಕಾನೂನು ಪ್ರಕಾರ ಸಭಾಪತಿ ಆಗುವುದಕ್ಕೂ ಬರುವುದಿಲ್ಲ

ಶ್ರೀ ಕೆ ಆರ್ ರಮೇಶ್‌ಕುಮಾರ್. ಮಾನ್ಯ ಅಧ್ಯಕ್ಷರೆ, ಇದು ಎಷ್ಟು ದೊಡ್ಡ ಅಪರಾಧವೆಂದರೆ, ನಾನು ಮಾನ್ಯ ಎಂ ಪಿ ಪ್ರಕಾಶ್‌ರವರಲ್ಲಿ appeal ಮಾಡಿಕೊಳ್ಳುತ್ತೇನೆ Panel Chairman ಆ ಸೆಷನ್ ಆದ ತಕ್ಷಣ ಆ panel ಹೋಗಿಬಿಡುತ್ತದೆ He is no langer of the Chairman. Chairman ಎಂದು ಹೇಳಿ ಅಲ್ಲಿ ಒಬ್ಬ unauthorized person ಬಂದು ಕುಳಿತುಕೊಳ್ಳುವಂಥಾದ್ದು ನಿಜವಾದ senseನಲ್ಲಿ it amounts to impersonation It is a criminal offence ಯಾರಾದರೂ ಅದನ್ನು pursue ಮಾಡಿದರೆ ಮಾತ್ರ, it acquires dangerous dimensions ಪಾಪ ಆ concerned person himself is a senior advocate, practiced criminal law I don't know ಅವರು ಯಾವ ಪರಿಸ್ಥಿತಿಯಲ್ಲಿ ಇದಕ್ಕೆ ಸಿಕ್ಕಿ ಹಾಕಿಕೊಂಡರೋ ನನಗೆ ಗೊತ್ತಿಲ್ಲ

ಶ್ರೀ ಆರ್ ವಿ ದೇಶಪಾಂಡೆ ಮಾನ್ಯ ಎಂ ಪಿ ಪ್ರಕಾಶ್‌ರವರೆ purpose ಹಾಗೆ ಮಾಡಿರಬಹುದು

ಶ್ರೀ ಕೆ ಆರ್ ರಮೇಶ್ ಕುಮಾರ್ ಇಲ್ಲ, ನಾನು ಒಪ್ಪುವುದಿಲ್ಲ, ಬಹಳ ಹೆಚ್ಚು ಎಂದರೆ, ನಮಗೆ ತೊಂದರೆಯಾದಾಗ ನೀವು ಸಹಾಯ ಮಾಡುವುದಕ್ಕೆ ಆಗದೇ ಇರಬಹುದು ನೀವು ತೊಂದರೆ ಮಾಡುತ್ತೀರೆಂಬ ಮಾತನ್ನು ಅವರು ಹೇಳಿದ ಹಾಗೆ ನಾನು ಹೇಳುವುದಿಲ್ಲ

ಶ್ರೀ ಮಲ್ಲಿಕಾರ್ಜುನ ಖರ್ಗೆ ಮಾನ್ಯ ಅಧ್ಯಕ್ಷರೆ, ನಾನು houseನಲ್ಲಿ ಏನಾದರು mis-behave ರು ಮಾಡಿದರೆ, mis-conduct ಆಗಿದ್ದರೆ, ನೀವು ಇಲ್ಲಿಂದ ಅಭಿಪ್ರಾಯವನ್ನು ತೆಗೆದುಕೊಂಡು ನನ್ನನ್ನು ಹೊರಹಾಕಬೇಕೆಂದರೆ majority opinion ಪ್ರಕಾರ ಸದನದಿಂದ ಹೊರಹಾಕುತ್ತೀರಿ ಅಲ್ಲಿ majority ಎಲ್ಲಿಂದ ಬಂತು ಹೇಳಿ? 40 ಜನ ಸದಸ್ಯರು ಒಂದು ಕಡೆಯಾಗಿ ಚುನಾವಣೆಯನ್ನು ನಡೆಸಿ ಎಂದು ಕೇಳುವಾಗ, ಮೈನಾರಿಟಿಯಾಗಿದ್ದಂಥ ಜನ

Pg 17

ಯಾರನ್ನು ಅಧ್ಯಕ್ಷರೆಂದು recognition ಮಾಡಿಲ್ಲ, ಅಂಧವರು ಅಧ್ಯಕ್ಷ ಸ್ಥಾನದಲ್ಲಿ ಕುಳಿತು 40 ಜನ ಸದಸ್ಯರನ್ನು suspend ಮಾಡಿದ್ದೆನೆಂದು ಹೇಳಿದರೆ, ಇದಕ್ಕೆ ನಗಬೇಕೋ, ಆಳಬೇಕೋ, ಇದು ನರ್ಕಾರವೋ, ಏನು ಎನ್ನುವುದೇ ಗೊತ್ತಾಗುವುದಿಲ್ಲ ಇಂತಹ ಘಟನೆಗಳು ನಡೆದಾಗ, ನೀವು ನದನದಲ್ಲಿ ಏಕೆ ಚರ್ಚೆ ಮಾಡುತ್ತೀರಿ? ಕಾನೂನು ಪ್ರಕಾರ ಇದೆ ಕಾನೂನು ಪ್ರಕಾರ ಇಲ್ಲದೇ ಏನು ಇದೆ? ಅದಕ್ಕೆ ಇದು ನಿಜವಾಗಿಯೂ ಅನ್ಯಾಯ, ಮತ್ತು ನಿಮಗೆ ಸಂವಿಧಾನದ ಬಗ್ಗೆ ಗೌರವವಿಲ್ಲ, rules ಬಗ್ಗೆ ಗೌರವವಿಲ್ಲ, ಅಧವಾ ಇವತ್ತು ಪರಸ್ಪರ ವಿಚಾರ ಮಾಡಿಯಾದರೂ ಇದನ್ನು ಬಗೆಹರಿಸುವುದಕ್ಕೆ ಅದರಲ್ಲೂ ನಂಬಿಕೆ ಇಲ್ಲ ಅಂದ ಮೇಲೆ ಹೇಗೆ ನಡೆಸುವುದೆಂದು ಹೇಳಿ? ಈ ರೀತಿಯಾಗಿ ನಾವು ನಡೆದುಕೊಂಡರೆ, ಖಂಡಿತವಾಗಿ ಇದು ಪ್ರಜಾಪ್ರಭುತ್ವವೋ ಅಧವಾ dictatatorship ನಲ್ಲಿ ಇದ್ದೆವೋ ಅಧವಾ ಏನೆಂಬುದು ನನಗೆ ಗೊತ್ತಾಗುತ್ತಿಲ್ಲ ಇದರ ಬಗ್ಗೆ ಮಾನ್ಯ ಎಂ ಪಿ ಪ್ರಕಾಶ್‌ರವರು ಒಂದೆರಡು ದಿವಸಗಳಲ್ಲಿ solve ಮಾಡುತ್ತೇನೆಂದು ಹೇಳಿದ್ದರು ಅವರಿಗೆ ಯಾರು ಅಡ್ಡ ಬಂದರೋ ಗೊತ್ತಿಲ್ಲ ಇಂತಹ sensitive issue, ನೀವು majority ಇಲ್ಲವೆಂದರೆ ಏನಾಯಿತು ಯಾರಾದರೂ ಬೇರೆ ಪಕ್ಷದವರು ಅಧ್ಯಕ್ಷರಾದರೆ ಅವರು ಏನು ಮಾಡುತ್ತಾರೆ? ಅವರು ತತ್ವದ ವಿರುದ್ಧ, rules ವಿರುದ್ಧ, business rules ವಿರುದ್ಧ ಹೋಗುವುದಕ್ಕೆ ಆಗುತ್ತದಾ? ನಮಗೆ ಆಗ , majority ಇತ್ತು, ಆಗ ನಾವು ಅವರೆಲ್ಲರನ್ನು continue ಮಾಡಿದೆವು Yes, ಶ್ರೀ ಡೇವಿಡ್ ಸಿಮೇಯೊನ್‌ರವರನ್ನು ಅಧ್ಯಕ್ಷರನ್ನಾಗಿ ಮಾಡಿದೆವು ಇಲ್ಲಿ ಬಿ ಜೆ ಪಿ ಯವರು ಅದ್ಯಕ್ಷರಾಗಬಾರದೆಂದು ಹೇಳಿ, ಜೆಡಿ ಎಸ್‌ನವರು ಕಾಂಗ್ರೆಸ್‌ನವರು ಒಂದಾಗಿ, understanding ಮೇಲೆ ಮಾಡಿದರು ಅದೇ ರೀತಿಯಾಗಿ ಮಾನ್ಯ ವಿ ಆರ್ ನುದರ್ಶನ್‌ರವರನ್ನು ಮಾಡಿದೆವು ಅದೇ ರೀತಿಯಾಗಿ ಹಿಂದೆ ಶ್ರೀ ಬಿ ಆರ್ ವಾಟೀಲ್‌ರವರನ್ನು ಮಾಡಿದ್ದೇವೆ See like minded and like minded parties together they supported their State ಅದನ್ನು ನೀವು ನಿಮ್ಮ ಕಾಲದಲ್ಲಿ ಮಾಡಿದ್ದಾರೆಂದು ಹೇಳಿದರೆ, ಅದು ನಮ್ಮ ಕಾಲದಲ್ಲಿ ಮಾಡಿದ್ದು ನಮಗೆ majority ಇತ್ತು ಇವತ್ತು ನಿಮಗೆ majority ಇದ್ದರೆ ಹೇಳಿ, ಚುನಾವಣೆಯನ್ನು ಮಾಡಿ ಈ ರೀತಿಯಾಗಿ, ನಿಜವಾಗಿಯೂ

ಹೊರಗಡೆ ಏನು ಅಭಿಪ್ರಾಯ ಹುಟ್ಟಿದೆ ಕಾಂಗ್ರೆಸ್‌ನವರು ಪ್ರತಿಯೊಂದಕ್ಕೂ ತಡೆಯುತ್ತಾರೆ ಸದನದಲ್ಲಿ business ಅನ್ನು ನಡೆಸುವುದಕ್ಕೆ ಬಿಡುತ್ತಿಲ್ಲ ಈ ಅಭಿಪ್ರಾಯವನ್ನು ದುರ್ದೈವದಿಂದ ಏಕೆ ಮೂಡಿಸುತ್ತಿದ್ದಾರೋ ನನಗೆ ಗೊತ್ತಿಲ್ಲ ಅದಕ್ಕಾಗಿ ಇಂತಹ ಅಭಿಪ್ರಾಯವೂ ಕೂಡ ಇರಬಾರದು ಇಲ್ಲಿ ತಮ್ಮ ಯಾರದು ಇದೆ, ಅವರು ಒಪ್ಪಿಕೊಳ್ಳಬೇಕು ಇದನ್ನು ಸರಿಪಡಿಸಬೇಕು,ಪ್ರಜಾಪ್ರಭುತ್ವದಲ್ಲಿ ಚುನಾವಣೆ ಆಗಬೇಕು

ಶ್ರೀ ಆರ್ ವಿ ದೇಶಪಾಂಡೆ ಮಾನ್ಯ ಅಧ್ಯಕ್ಷರೇ, ಒಂದು ನಿಮಿಷ

ಅಧ್ಯಕ್ಷರು ತಡೆಯಿರಿ ಸ್ವಾಮಿ ಈಗಾಗಲೇ ಎರಡು ಗಂಟೆಯಾಯಿತು ಒಂದು subject ತೆಗೆದುಕೊಂಡು, ಅದರ ಮೇಲೆ ಎಲ್ಲರೂ ಮಾತನಾಡುವವರೇ I can't understand ನೀವು senior people ಗೈಡ್ ಮಾಡುವುದರ ಬದಲು ಹೀಗೆ ಮಾಡಿದರೆ ಹೇಗೆ? ಎಲ್ಲರೂ ಹೇಳಿದ್ದಾರೆ, ವ್ಯಾಖ್ಯಾನ ಮಾಡಿದ್ದಾರೆ ಮತ್ತೆಮತ್ತೆ ಎಲ್ಲರೂ ಅವಕಾಶವನ್ನು ಕೇಳಿದರೆ, ಇದೇ ನಡೆಯಬೇಕೇ? ಇದು ಏನೆಂದು ನನಗೆ ಅರ್ಥವಾಗುವುದಿಲ್ಲ

ಶ್ರೀ ಆರ್ ವಿ ದೇಶಪಾಂಡೆ ಒಂದು ಹೊಸ ವಿಷಯವನ್ನು ಅವರ ಗಮನಕ್ಕೆ ತರುತ್ತೇನೆ

ಅಧ್ಯಕ್ಷರು ಆಯಿತು ಸ್ವಾಮಿ ಈಗ ಎಲ್ಲರೂ ಹೇಳಲಿಲ್ಲವೇ? ನಿಮ್ಮ ನಾಯಕರುಗಳೆಲ್ಲ ಭಾಷಣ ಮಾಡಲಿಲ್ಲವೇ? ಎಲ್ಲರೂ ಮಾತನಾಡಬೇಕು ಎಂದರೆ ಹೇಗೆ?

ಶ್ರೀ ಆರ್ ವಿ ದೇಶಪಾಂಡೆ ನಾನು ಯಾವಾಗಲೂ ಮಧ್ಯದಲ್ಲಿ ಮಾತನಾಡಲು ಹೋಗುವುದಿಲ್ಲ ಮಾನ್ಯ ಗೌರವಾನ್ವಿತ Parliamentary Affairs Minister ರವರ ಗಮನಕ್ಕೆ ನಾನು ಒಂದು ವಿಷಯವನ್ನು ತರುತ್ತೇನೆ ಒಂದು, creation ಈ ಮನೆ ಮಾಡಿದ್ದೀರಿ ಎಂದು ಒಂದು ವಿಚಾರ ಪ್ರಸ್ತಾಪವಾಯಿತು Constitutional deadlock ಆಗಿದೆ ಎಂದು ಪ್ರಸ್ತಾಪವಾಯಿತು ಮೂರನೆಯದು ಮತ್ತು ಈಗ ನಾನು ಪ್ರಸ್ತಾಪ ಮಾಡುತ್ತಿರುವ ಹೊಸ ವಿಷಯವೆಂದರೆ, ಇವತ್ತಿನ Agenda ದಲ್ಲಿ ನೀವು ಹಲವಾರು Bill ಗಳನ್ನು ಹಾಕಿದ್ದೀರಿ ಈ Bill ಗಳು ಇಲ್ಲಿ ಪಾನ್ ಆದನಂತರ ಮೇಲ್ಮನೆಗೆ ಹೋಗಬೇಕಲ್ಲವೇ? ಅಲ್ಲಿ ಅದು at least rejectಆಗಿ ಬರಲಿ ಅಥವಾ ಪಾನ್ ಆಗಲಿ ಅದು ಅಲ್ಲಿಗೆ ಹೋಗಬೇಕಲ್ಲವೇ? ಆದರೆ, ಈಗ

ಅದು ಮೇಲ್ಮನೆಗೆ ಹೋಗುವುದಿಲ್ಲ ಮೇಲ್ಮನೆ function ಆಗುತ್ತಿಲ್ಲ ಅದು unconstitutional ಆಗಿದೆ, illegal ಆಗಿದೆ ಆಗ ಈ Billನ ಪರಿಸ್ಥಿತಿ ಏನಾಗುತ್ತದೆ? Parliamentary Affairs Minister ಇದರ ಬಗ್ಗೆ ವಿಚಾರ ಮಾಡಬೇಕೋ, ಬೇಡವೋ? ಇವತ್ತಿನ Agenda ದಲ್ಲಿ ಹಲವಾರು Billಗಳನ್ನು slate ಮಾಡಿದ್ದೀರಿ Education Bill ಇದೆ, Civil Service Bill ಇದೆ ಆ Billಗಳ ಪರಿಸ್ಥಿತಿ ಏನು? ಹಾಗಾಗಿ ಅಲ್ಲಿ ಏನು deadlock ನಿರ್ಮಾಣವಾಗಿದೆ, ಅದರ ಪರಿಣಾಮ ಈ ಮನೆಯಲ್ಲಿ ಸಹಾ ಆಗುತ್ತಿದೆ, ಇಲ್ಲಿಯೂ ಸಹ ಒಂದು Constitutional crisis create ಆಗಬಹುದು ಆ procedure ತಾನೇ ಮಾಡಬೇಕು ಹೀಗಿರುವಾಗ, ಇಲ್ಲಿ Bill pass ಮಾಡಿದರೂ ಸಹ ಉಪಯೋಗವೇನು? ಹಾಗಾಗಿ, ಆ Bill ಗಳನ್ನು move ಮಾಡುವುದಕ್ಕಿಂತ ಮುಂಚೆ, ಆ Billಗಳ ಪರಿಸ್ಥಿತಿ ಏನಾಗಬಹುದು ಎನ್ನುವುದನ್ನು ಮಾನ್ಯ Parliamentary Affairs Minister ವಿಚಾರ ಮಾಡಬೇಕು ಕೊನೆಯದಾಗಿ, ಈಗಾಗಲೇ ನಮ್ಮ ಪಕ್ಷದ ಅಧ್ಯಕ್ಷರು ಹೇಳಿದ ಹಾಗೆ, ಅಲ್ಲಿ ನಮ್ಮದು majority ಇದ್ದರೂ ಸಹ 40 ಜನ ಶಾಸಕರನ್ನು suspend ಮಾಡಿದ್ದಾರೆ ಅಲ್ಲಿ ಅಧ್ಯಕ್ಷರ ಮೇಲೆ No confidence motion move ಆಗಿದೆ ಆ No Confidence Motion ಚರ್ಚೆಗೆ ಬರಬೇಕು, slate ಆಗಬೇಕು ಹಾಗಾಗಿ, ಅದನ್ನು avoid ಮಾಡಲೂ ಈ ರೀತಿ ಮಾಡಿರಬಹುದು ಇದು ಸರಿಯೇನು? ಇದು ನಿಜವಾದ ಪ್ರಜಾಪ್ರಭುತ್ವವೇನು? It is the murder of Democracy Unconstitutional ಆಗಿ ಈ ರೀತಿ ಮಾಡಿರುವುದು ಸರಿಯಲ್ಲ ಇಂಥ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಇಲ್ಲಿರಬೇಕಾಗಿತ್ತು ಮಾನ್ಯ ವಿರೋಧ ಪಕ್ಷದ ನಾಯಕರು ಈ ವಿಷಯವನ್ನು ಪ್ರಸ್ತಾಪ ಮಾಡಿದಾಗ, ಅವರು ಬರುತ್ತೇನೆ ಎಂದು ಹೇಳಿ ಹೋದರು ಏಕೆಂದರೆ ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ ಬಹಳ ಜಬಾಬ್ದಾರಿಯಿಂದ ನಡೆದುಕೊಳ್ಳಬೇಕಾಗುತ್ತದೆ, ಜವಾಬ್ದಾರಿಯಿಂದ ಉತ್ತರ ಕೊಡಬೇಕಾಗುತ್ತದೆ ಇವತ್ತು ಅಲ್ಲಿ ನಮ್ಮದು majority ಇದ್ದರೂ ಸಹ ತಾವು ಚುನಾವಣೆ ಮಾಡುವುದಿಲ್ಲವೆಂದರೆ ಅದು ಸರಿಯಲ್ಲ ಎನ್ನುವುದನ್ನು ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ

ಶ್ರೀ ಬಿ ಆರ್ ಪಾಟೀಲ್ ಮಾನ್ಯ ಅಧ್ಯಕ್ಷರೇ ಒಂದು ನಿಮಿಷ ಅವಕಾಶ ಕೊಡಿ

ಅಧ್ಯಕ್ಷರು ಆಯಿತು, ಎಲ್ಲರೂ ಮಾತನಾಡಿದ್ದಾರೆ ಈಗಾಗಲೇ ಎರಡು ಗಂಟೆ ಯಾಯಿತು ಮತ್ತೆಮತ್ತೆ ಅದನ್ನೇ ಮಾತನಾಡಿಕೊಂಡು ಕುಳಿತರೆ ಹೇಗೆ? ಇದೇನು ಎಂದು ನನಗೆ ಅರ್ಥವಾಗುತ್ತಿಲ್ಲ ಚರ್ಚಿಸಲು ಇನ್ನೂ ಬೇರೆಬೇರೆ ವಿಷಯಗಳಿವೆ

ಶ್ರೀ ಎನ್ ಧರಂಸಿಂಗ್ ಮಾನ್ಯ ಅಧ್ಯಕ್ಷರೇ, ನಾನು ಪ್ರಸ್ತಾಪ ಮಾಡಿರುವ ವಿಷಯವನ್ನು ಏಕಾಏಕಿಯಾಗಿ ಪ್ರಸ್ತಾಪ ಮಾಡಿಲ್ಲ ಅಲ್ಲಿ ಒಂಭತ್ತು ದಿನಗಳ ಕಾಲ ಕಾರ್ಯಕಲಾಪ ನಡೆದಿಲ್ಲ ಈ ಬಗ್ಗೆ ಈಗಾಗಲೇ, ನಾವು, ಖರ್ಗೆಯವರು, ಹೆಚ್ ಕೆ ಪಾಟೀಲರು ಮತ್ತು ಚಂದ್ರಶೇಖರ್‌ರವರು ಎಲ್ಲರೂ ಕೂಡಿ ಪ್ರಕಾಶ್‌ರವರ ಜೊತೆಯಲ್ಲಿ ಮತ್ತು ಮುಖ್ಯಮಂತ್ರಿಗಳ ಜೊತೆಯಲ್ಲಿ ಮಾತನಾಡಿದ್ದೇವೆ ಸಭಾಪತಿಗಳು ಕೂಡ ಅಲ್ಲಿ ಇದ್ದರು ನಮ್ಮ ವಾದ ಏನಿತ್ತು ಎಂದರೆ, ತಿಪ್ಪಣ್ಣನವರಿಗೆ ಆ ಪೀಠದ ಮೇಲೆ ಕೂಡತಕ್ಕಂಥ ಹಕ್ಕಿಲ್ಲ ಏಕೆಂದರೆ ಅವರಿಗೆ ಬಹುಮತ ಇಲ್ಲ ಜಂಟಿ ಅಧಿವೇಶನದಲ್ಲಿ, ರಾಜ್ಯಪಾಲರ ಭಾಷಣದ ಸಂದರ್ಭದಲ್ಲಿ Panel of namesನಲ್ಲಿ ಬಂದು ಕೂಡತಕ್ಕಂಥ ಹಕ್ಕಿತ್ತು He can't preside over the House ಇದು ನಮ್ಮ ವಾದ ಅಲ್ಲಿ ಇವತ್ತು No Confidence Motion ಕೂಡಾ ಇದೆ ಏಕಾಏಕಿ ತಿಪ್ಪಣ್ಣನವರು ಅಲ್ಲಿ ಕುಳಿತು suspend ಮಾಡಿದರೆ ಹೇಗೆ? ಇಲ್ಲಿ ನಿಮಗೆ ನಾವು ಎಷ್ಟು ಸವಾಲು ಹಾಕುತ್ತೇವೆ, ನೀವು ಎಂದಾದರೂ suspend ಮಾಡಿರುವಿರಾ? ಎಷ್ಟು ಸವಾಲು ಹಾಕಿಲ್ಲ ನಿಮಗೆ ನಿಮ್ಮ ಮೇಲೆ No Confidence Motion ಅನ್ನೂ ತಂದಿದ್ದೇವೆ ಅದು ಯಾವಾಗ ಬರುತ್ತದೆ ಎನ್ನುವುದನ್ನೂ ಹೇಳಬೇಕು ಆದರೆ ನೀವು ಅಂಥ drastic step ತೆಗೆದುಕೊಳ್ಳಲು ಹೋಗಿಲ್ಲ ತಿಪ್ಪಣ್ಣನವರಿಗೆ preside ಮಾಡತಕ್ಕಂಥ ಅಧಿಕಾರವಿಲ್ಲವೆಂದು ಹೇಳಿ ಅದನ್ನು question ಮಾಡಿದ್ದೇವೆ ಆ ಪೀಠದಲ್ಲೇ ಕುಳಿತು ಅವರು suspend ಮಾಡುತ್ತಾರೆ ಎಂದರೆ ಹೇಗೆ? ಪ್ರಕಾಶ್‌ರವರೇ ಇದಕ್ಕೆ ನೀವು ಉತ್ತರ ಕೊಡಲಿಕ್ಕೇ ಸಾಧ್ಯವಿಲ್ಲ ಕರ್ನಾಟಕದ ಇತಿಹಾಸದಲ್ಲಿ ಮೊಟ್ಟಮೊದಲನೆಯದಾಗಿ ವಿಧಾನ ಪರಿಷತ್ತಿನಲ್ಲಿ ಬಹುಮತ ಹೊಂದಿರತಕ್ಕಂಥ 40 ಶಾಸಕರನ್ನು ಅಮಾನತ್ತು ಮಾಡಿದ್ದಾರೆ ಇದಕ್ಕೆ ನಮಗೆ ಉತ್ತರವೇನೂ ಬೇಕಾಗಿಲ್ಲ ಇವತ್ತು ಸರ್ಕಾರದ

ಉದ್ಧಟತನವೇನಿದೆ? Undemocratic act ಆಗಿ ತಾವೇನು ಮಾಡುತ್ತಿದ್ದೀರಿ, ಮನಸ್ಸಿಗೆ ಬಂದ ಹಾಗೆ ಸರ್ಕಾರವನ್ನು ನಡೆಸತಕ್ಕಂಥ ಮನೋಭಾವನೆ ಏನಿದೆ, ಅದನ್ನು ನಾವು ಧಿಕ್ಕರಿಸುತ್ತಿದ್ದೇವೆ ಮತ್ತು ನಿಮ್ಮ ಉತ್ತರವಾದ ಮೇಲೆ ನಮ್ಮ ಮುಂದಿನ ಕ್ರಮ ಏನೆನ್ನುವುದನ್ನು ಹೇಳುತ್ತೇವೆ

ಶ್ರೀ ಎಂ ಪಿ ಪ್ರಕಾಶ್ ಸಭಾತ್ಯಾಗ ಮಾಡುವಿರಾ?

ಶ್ರೀ ಎನ್ ಧರಂಸಿಂಗ್ ಸಭಾತ್ಯಾಗವಲ್ಲ, ನಂತರ ನಾವು ಏನು ಮಾಡುತ್ತೇವೆ ಎನ್ನುವುದನ್ನು ಹೇಳುತ್ತೇವೆ

ಶ್ರೀ ಎಂ ಪಿ ಪ್ರಕಾಶ್ ಮುಂದೆ ಅಲ್ಲ, ಈಗಲೇ ಸಭಾತ್ಯಾಗ ಮಾಡಿ ಹೋಗುವಿರೇನೋ ಎಂದು ನನಗೆ ಗಾಬರಿಯಾಯಿತು

ಶ್ರೀ ಎನ್ ಧರಂಸಿಂಗ್ 40 ಶಾಸಕರನ್ನು ಅಮಾನತ್ತು ಮಾಡತಕ್ಕಂಥ ವಿಷಯದಲ್ಲಿ ನಿಮಗೆ ಯಾವ ಪರಿಜ್ಞಾನವೂ ಇಲ್ಲ ನಂತರ ನಾವು ಏನು ಮಾಡುತ್ತೇವೆ ಎನ್ನುವುದನ್ನು ಹೇಳುತ್ತೇವೆ

ಶ್ರೀ ಬಿ ಆರ್ ಪಾಟೀಲ್ ಮಾನ್ಯ ಅಧ್ಯಕ್ಷರೇ, ಹಿಂದೆ ನಾನು ಮೇಲ್ಮನೆಯ ಉಪಾಧ್ಯಕ್ಷ ನಾಗಿದ್ದೆ ಒಂದು ವಿಶಿಷ್ಟವಾದ ಸಂದರ್ಭದಲ್ಲಿ ನಾನೂ ಕೂಡ ಏಳು ತಿಂಗಳು In charge Chairman ಆಗಿ ಕೆಲಸ ಮಾಡಿದ್ದೇನೆ ಆ ಹಿನ್ನೆಲೆಯಲ್ಲಿ ತಾವು ನನಗೆ ಒಂದೆರಡು ನಿಮಿಷ ಮಾತನಾಡಲು ಅವಕಾಶ ಕೊಡಬೇಕು Upper House is created through Legislation by the Lower House ಈ ಸದನದ ನಿರ್ಣಯದ ಮುಖಾಂತರ, ಇಲ್ಲಿ ಒಂದು Bill pass ಮಾಡಿ ನಾವು Upper House ಅನ್ನು create ಮಾಡಿದ್ದೇವೆ ನಾವು ಇಲ್ಲಿಂದ ನಮ್ಮ ಪ್ರತಿನಿಧಿಗಳನ್ನು ಕೂಡ Upper Houseಗೆ ಕಳುಹಿಸಿದ್ದೇವೆ ನನ್ನ ಅನುಭವದ ಹಿನ್ನಲೆಯಲ್ಲಿ ಒಂದೆರಡು ಮಾತುಗಳನ್ನು ಹೇಳುವುದಾದರೆ, ಆಗ ಸನ್ಮಾನ್ಯ ಮಂಜುನಾಥ್‌ರವರು ಸಭಾಪತಿಗಳಾಗಿದ್ದರು ಮಂಜುನಾಥ್‌ರವರ ಅವಧಿ ಮುಗಿದ ಮೇಲೆ ಚುನಾವಣೆ ನಡೆಯಲಿಲ್ಲ ಆಗ ನಾನು ಸುಮಾರು ಏಳು ತಿಂಗಳ ಕಾಲ In charge Chairman ಆಗಿ, ಎರಡು ಸಲ ಸದನವನ್ನು ನಡೆಸುವಂಥ ಸಂದರ್ಭ ಬಂದಿತ್ತು ಆವತ್ತು ಇನ್ನಾನಪ್ಪ ಎನ್ನುವವರು ವಿಧಾನ ಮಂಡಲದ ಕಾರ್ಯದರ್ಶಿಯಾಗಿದ್ದರು ಅವರೂ ಕೂಡ judiciary ಯಿಂದ ಬಂದಂಥವರು ಆವತ್ತು ನಾವು ಒಂದು legal opinion ತೆಗೆದುಕೊಂಡು, ಯಾರು ಉಪಾಧ್ಯಕ್ಷರಾಗಿರುತ್ತಾರೆ ಅವರೇ ಬಂದು ಸಭೆಯನ್ನು ಪ್ರಾರಂಭ

ಮಾಡಬೇಕು, ಬೇರೆಯವರು, ಅಂದರೆ ಯಾರು panel ನಲ್ಲಿರುತ್ತಾರೆ ಅವರು ಸಭೆಯನ್ನು ಪ್ರಾರಂಭ ಮಾಡುವುದಕ್ಕಾಗುವುದಿಲ್ಲ ಈ ರೀತಿಯ ಸ್ಪಷ್ಟವಾದ ಅಭಿಪ್ರಾಯವನ್ನುತೆಗೆದುಕೊಂಡು, ಉಪಾಧ್ಯಕ್ಷ ಸ್ಥಾನ ಹೊಂದಿದ್ದ ನಾನೇ In charge Chairman ಆಗಿ ಸಭೆಯನ್ನು ಪ್ರಾರಂಭ ಮಾಡುತ್ತಿದ್ದೆ ಮತ್ತು ಮಧ್ಯದಲ್ಲಿ panel ನಲ್ಲಿದ್ದವರಿಗೆ ಬಂದು ಕೂಡುವುದಕ್ಕೆ ಅವಕಾಶ ಕೊಡುತ್ತಿದ್ದೆ ಈ ರೀತಿ ನಾನು ಎರಡು ಸಲ ಸದನವನ್ನು ನಡೆಸಿದ್ದೇನೆ ಇವತ್ತು ನಾನು ತಲೆ ತಗ್ಗಿಸಿ ಹೇಳಬೇಕಾಗುತ್ತದೆ, ನಾವು democracyಯನ್ನು ಏನು maintain ಮಾಡಿಕೊಂಡು ಬಂದಿದ್ದೇವೆ, through practice, traditions, customs ಗಳನ್ನೇನು ನಡೆಸಿಕೊಂಡು ಬಂದಿದ್ದೇವೆ, ಅದಕ್ಕೆ ಧಕ್ಕೆಯಾಗಿದೆ ಯಾರಾದರೂ ಹಿಂಬಾಗಿಲಿನಿಂದ ಬಂದು ನಿಮ್ಮ ಜಾಗದಲ್ಲಿ ಕೂಡಬಹುದೇ ಅಧ್ಯಕ್ಷರೇ? ತಾವು ರಾಜೀನಾಮೆ ಕೊಟ್ಟಿರಿ ಅಥವಾ ತಾವು ವಿದೇಶಕ್ಕೆ ಹೋದಿರಿ, ಆ ಸಂದರ್ಭದಲ್ಲಿ ಉಪಾಧ್ಯಕ್ಷರ ಆರೋಗ್ಯ ಕೂಡ ಹಾಳಾಗಿತ್ತು ಎಂದಾಗ ಯಾರಾದರೂ ಹಿಂಬಾಗಿಲಿನಿಂದ ಬಂದು ನಿಮ್ಮ ಜಾಗದಲ್ಲಿ ಕೂಡಲು ಸಾಧ್ಯವಿಲ್ಲ ಸದನದ ಬಹುಮತದ ಮೇಲೆ ಅಥವಾ ಒಪ್ಪಂದದ ಮೇಲೆ ಯಾರಾದರೂ ಸಭೆಯ ಅಧ್ಯಕ್ಷ ಸ್ಥಾನವನ್ನು ವಹಿಸಿಕೊಳ್ಳಬಹುದು ಅಥವಾ, ಇಂಥ ವಿಶಿಷ್ಟವಾದ ಸಂದರ್ಭದಲ್ಲಿ ರಾಜ್ಯಪಾಲರು, ಯಾರಾದರೊಬ್ಬ ಹಿರಿಯ ಸದಸ್ಯರನ್ನು ಆ ಸ್ಥಾನಕ್ಕೆ ಅಧ್ಯಕ್ಷರನ್ನಾಗಿ ನೇಮಕ ಮಾಡಬಹುದು ಇವೆರಡು ಪದ್ಧತಿಯನ್ನು ಬಿಟ್ಟು, ಬೇರೆ ರೀತಿಯಲ್ಲಿ ಯಾರನ್ನಾದರೂ ಸಭೆಯ ಅಧ್ಯಕ್ಷರನ್ನಾಗಿ ಮಾಡಬೇಕೆಂದರೆ ಅದು ಸಾಧ್ಯವಿಲ್ಲ ಇವತ್ತು ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆ ಎಂದರೆ, ನಾವು ಈ ಸದನದಿಂದ ಕೆಲವು ಸದಸ್ಯರನ್ನು ಚುನಾಯಿಸಿ ಮೇಲ್ಮನೆಗೆ ಕಳುಹಿಸಿದ್ದೇವೆ ಇವತ್ತು ಅವರನ್ನು name ಮಾಡಿ ಹೊರಗೆ ಹಾಕಿದ್ದಾರೆ ಇದು ಈ ಸದನಕ್ಕೂ ಕೂಡ ಅಪಮಾನ ಈ ಸಭೆಯ ಮೂಲಕ ಚುನಾಯಿತರನ್ನಾಗಿ ಮಾಡಿ ಆ ಸಭೆಗೆ ಕಳುಹಿಸಿರುವವರನ್ನು ವಿನಾ ಕಾರಣ, ಅವರು ಪ್ರಸ್ತಾಪಿಸಿದ ಒಂದು ತಾತ್ವಿಕ ಪ್ರಶ್ನೆಗೆ ಅವರನ್ನು ಸಭೆಯಿಂದ ಹೊರಹಾಕಿರುವುದು ಅಕ್ಷಮ್ಯ ಅಪರಾದ ಮತ್ತು ಈ ಸಭೆಗೆ ಕೂಡ ಅಗೌರವ ತಂದಂಥಾದ್ದು ಇಂಥ ಒಂದು ಕೆಟ್ಟ ಕೆಲಸ ಮೇಲ್ಮನೆಯಲ್ಲಿ ನಡೆದ ಕಾರಣ, ಈ ಸಭೆಗೆ ಅಪಮಾನ ಮಾಡಿದುದನ್ನು ನಾನು ಖಂಡಿಸುತ್ತೇನೆ ಮತ್ತು ಆ ಸದಸ್ಯರನ್ನು ಹೊರಗೆ ಹಾಕಿದುದನ್ನೂ ಖಂಡಿಸುತ್ತೇನೆ ದಯಮಾಡಿ ಸರ್ಕಾರ

ಇದಕ್ಕೆ ಒಂದು ವಿರಾಮ ಹಾಕಬೇಕು ಇಲ್ಲದಿದ್ದರೆ, ಈ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಗೊಂದಲ ಸೃಷ್ಟಿ ಮಾಡುವುದಕ್ಕೆ ಕರ್ನಾಟಕ ಮುಂದಾಗಿ ನಿಂತ ಅಪರಾಧವಾಗುತ್ತದೆ ಆದ್ದರಿಂದ, ಸರ್ಕಾರದವರು ದಯಮಾಡಿ ಇದನ್ನು ಬಗೆಹರಿಸಬೇಕು ಎಂದು ತಮ್ಮ ಮೂಲಕ ನಾನು ಒತ್ತಾಯ ಮಾಡುತ್ತೇನೆ

ಶ್ರೀ ಎಂ ಪಿ ಪ್ರಕಾಶ್(ಗೃಹ, ಕಾನೂನು, ನ್ಯಾಯ, ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) ಸನ್ಮಾನ್ಯ ಅಧ್ಯಕ್ಷರೇ, ಬಹಳ ಮಹತ್ವವಾದಂಥ ವಿಚಾರವನ್ನು ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಇತರ ಹಿರಿಯರು ಪ್ರಸ್ತಾಪ ಮಾಡಿದ್ದಾರೆ ಇದು ಯಾರಿಗೂ ಸಂತೋಷ ಮತ್ತು ಭೂಷಣ ತರತಕ್ಕಂಥ ಘಟನೆ ಎಂದು ನಾವ್ಯಾರೂ ಭಾವಿಸಿಲ್ಲ ಅದು ಹಿರಿಯರ ಮನೆ, ಅಂದರೆ ನಮಗೆ ಮಾರ್ಗದರ್ಶನ ಮಾಡತಕ್ಕಂಥ ಮನೆ ಕೂಡ ಅದು ನಮ್ಮ ನಿಯಮಾವಳಿಗಳಿಂದ ಸೃಷ್ಟಿಯಾಗಿರತಕ್ಕಂಥಾದ್ದು ಈ ಮನೆ ಮೇಲ್ಮನೆಯನ್ನು ಸೃಷ್ಟಿ ಮಾಡಿದೆ ರಾಜ್ಯಸಭೆಗೂ ಮತ್ತು ವಿಧಾನ ಪರಿಷತ್ತುಗಳಿಗೂ ವ್ಯತ್ಯಾಸವಿದೆ ರಾಜ್ಯಸಭೆಯನ್ನು ಸಂವಿಧಾನವೇ ಸೃಷ್ಟಿ ಮಾಡಿರುವುದರಿಂದ, ಲೋಕಸಭೆ ಮತ್ತು ರಾಜ್ಯ ಸಬೆಗಳೆರಡೂ ಸಂವಿಧಾನಾತ್ಮಕ ವಾಗಿರತಕ್ಕಂಥ ಅಧಿಕಾರದ ವ್ಯಾಪ್ತಿಯಲ್ಲಿ ಇರುತ್ತವೆ ಆದರೆ ವಿಧಾನ ಪರಿಷತ್ತುಗಳನ್ನು ಆಯಾ ರಾಜ್ಯಗಳಲ್ಲಿರತಕ್ಕಂಥ ವಿಧಾನಸಭೆಗಳು ಸೃಷ್ಟಿ ಮಾಡಬೇಕಾಗುತ್ತದೆ ಆದರೆ ಇತ್ತೀಚಿನ ದಿನಮಾನಗಳಲ್ಲಿ, ಅನೇಕ ಸಂದರ್ಭಗಳಲ್ಲಿ ರಾಜಕೀಯ ನಿರ್ಧಾರಗಳಲ್ಲಿ ತೋರಿಸಬೇಕಾದಂಥ ನಿಜವಾದಂಥ ಪ್ರಭುತ್ವವನ್ನಾಗಲೀ ಅಥವಾ ಅದಕ್ಕೆ ಬೇಕಾಗಿರತಕ್ಕಂಥ in spirit ಎಂದು ಏನು ಹೇಳುತ್ತೇವೆ, ಅದರ ನಿಜವಾದ ಆಶಯದಂತೆ ನಡೆದುಕೊಳ್ಳಲು ಸಾಧ್ಯವಾಗಿಲ್ಲದ್ದರಿಂದ, ತಮಿಳುನಾಡಿನಲ್ಲಿಂಥ ವಿಧಾನ ಪರಿಷತ್ತಿಗೆ ಒಬ್ಬ ಚಿತ್ರನಟಿಯನ್ನು ನೇಮಕಾತಿ ಮಾಡಲಿಲ್ಲ ಎನ್ನುವ ಸಿಟ್ಟಿಗಾಗಿಯೇ, ಅದಕ್ಕೆ ರಾಜ್ಯಪಾಲರು ಒಪ್ಪಿಗೆ ಕೊಡಲಿಲ್ಲ ಎನ್ನುವ ಕಾರಣಕ್ಕಾಗಿಯೇ, ಬಹಳ ಪ್ರಬಲವಾಗಿದ್ದಂಥ ಮುಖ್ಯಮಂತ್ರಿ ವಿಧಾನ ಪರಿಷತ್ತನ್ನೇ ರದ್ದು ಮಾಡಿ ಹಾಕಿದರು

ಅದಾದನಂತರ ಇಂಥಹದೇ ಒಂದು ಸನ್ನಿವೇಶ ಆಂಧ್ರಪ್ರದೇಶದಲ್ಲಿ ಆಯಿತು ಅವರಿಗೆ ಯಾರೋ ಇಷ್ಟ ಇದ್ದಂಥವರನ್ನು ಈ ಸಮಾಜ ಕಾರ್ಯಕರ್ತರ ನೆಪದಲ್ಲಿ ನಾಮಕರಣ ಮಾಡಿಲ್ಲವೆನ್ನುವ ಕಾರಣಕ್ಕಾಗಿಯೇ ಅಲ್ಲಿ

ವಿಧಾನಪರಿಷತ್ತು ರದ್ದಾಯಿತು ಮತ್ತೆ ಅಲ್ಲಿ ವಿಧಾನಪರಿಷತ್ತನ್ನು ಮನರ್ ನೇಮಕಾತಿ ಮಾಡಬೇಕಾಗಿದೆನ್ನುವಂಥ - ಗೊತ್ತುವಳಿಯನ್ನು ಈಗ ಎರಡೂ ರಾಜ್ಯಗಳ ಮುಖ್ಯಮಂತ್ರಿಗಳು ತರತಕ್ಕಂಥ ಪ್ರಯತ್ನವನ್ನು ಕೂಡ ಮಾಡಲಾಗುತ್ತಿದೆ ಆದರೆ, ಒಟ್ಟಿನಲ್ಲಿ ನಾವು ಅನುಸರಿಸಬೇಕಾದಂಥ ಕ್ರಮ ಏನೆಂದರೆ, ವಿಧಾನ ಪರಿಷತ್ತು ಇರಬೇಕೋ ಅಥವಾ ಇರಬಾರದೆನ್ನತಕ್ಕಂಥದ್ದು ಪ್ರಜಾಪ್ರಭುತ್ವದ ಆಶಯಗಳ ಅನುಗುಣವಾಗಿಯೇ ಇರಬೇಕೇ ವಿನ ಒಬ್ಬ ಪ್ರಭಾವಿ ನಾಯಕನ ಮುಲಾಜಿಗಳಲ್ಲಿ ನಡೆಯಬಾರದು ಆ ಪ್ರಭಾವಿ ನಾಯಕರ ಮುಲಾಜುಗಳಲ್ಲಿ ನಡೆಯುತ್ತಿರುವುದರಿಂದ ಈ ಒಂದು ಉತ್ತಮವಾಗಿರತಕ್ಕಂಥ ಪ್ರಶ್ನೆ ತನ್ನ ಘನತೆಯನ್ನು ಕಳೆದುಕೊಳ್ಳುತ್ತದೆ ಆದರೂ ಕೂಡ ಇಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರು, ಮಾನ್ಯ ರಮೇಶ್‌ಕುಮಾರ್‌ರವರು, ಇನ್ನಿತರ ಹಿರಿಯರೆಲ್ಲರು ಪ್ರಸ್ತಾಪ ಮಾಡಿದಂತೆ ಅಲ್ಲಿ ಆಗಬೇಕಾಗಿದ್ದಂಥ ಚುನಾವಣೆ ಮುಂದಿನ session ಅಧಿವೇಶನ ಕರೆದ ತಕ್ಷಣ ಆಗಬೇಕು ಯಾವುದೇ ಕಾರಣಕ್ಕಾಗಿ ಅದು ಸಾವಿನ, ರಾಜಿನಾಮೆಯ ಅಥವಾ ಇನ್ಯಾವುದೋ ಕಾರಣಕ್ಕಾಗಿ ಸಭಾಪತಿ ಮತ್ತು ಉಪ ಸಭಾಪತಿಯ ಹುದ್ದೆಗಳು ಖಾಲಿ ಇದ್ದಾಗ ಅವುಗಳನ್ನು ಮುಂದೆ ಬಂದಂಥ ಅಧಿವೇಶನದಲ್ಲಿ ಚುನಾವಣೆ ನಡೆಸಬೇಕೆಂದು ನಮ್ಮ ನಿಯಮಾವಳಿಯಲ್ಲಿದೆ ಆದರೆ ಈ ನಿಯಮಾವಳಿಗಳನ್ನು ನಾವು ನಮ್ಮ ನಮ್ಮ ಅನುಕೂಲಕ್ಕೆ ತಕ್ಕಂತೆ ಅರ್ಥೈಸುವ ಪ್ರಯತ್ನ ಮಾಡುತ್ತೇವೆ, ಇಲ್ಲದಿದ್ದರೆ ಕಡೆಗಣಿಸುವ ಪ್ರಯತ್ನ ಮಾಡುತ್ತೇವೆ ಈ ಕಾರಣದಿಂದ ಈ ಎಲ್ಲಾ ಲೋಪದೋಷಗಳು ಆಗಲಿಕ್ಕೂ ಅದು ಕಾರಣವಾಗಿದೆ ಮಾನ್ಯ ಬಿ ಆರ್ ಪಾಟೀಲ್‌ರವರು ಹೇಳಿದರು ಹಿಂದೆ ಇದೆಲ್ಲ ಶ್ರೀ ಸುದರ್ಶನ್‌ರವರ ಕಾಲದಲ್ಲಿ ಆಯಿತು ಆ ನನ್ನಿವೇಶದಲ್ಲಿ ರಾಜಕೀಯ ಪಕ್ಷಗಳು, ಇವತ್ತೇನು ಈ ವಿಚಾರವನ್ನು ಪ್ರಸ್ತಾಪ ಮಾಡತಕ್ಕಂಥ ನಾವೆಲ್ಲರೂ ಕೂಡ ಆತ್ಮಾವಲೋಕನ ಮಾಡಿಕೊಳ್ಳಬೇಕಾಗಿದೆ ಉದಾಹರಣೆಗೆ ಹೇಳುವುದಾದರೆ, ಈ ಚುನಾವಣೆಯನ್ನು ತತಕ್ಷಣದಲ್ಲಿ ನೀವು ಮಾಡಿದ್ದರೆ ಯಾರು ಅಧ್ಯಕ್ಷರಾಗಿರತಕ್ಕಂಥವರು ಅಥವಾ Speaker ಆಗಿರತಕ್ಕಂಥವರು ಅವರು ಪಕ್ಷಾತೀತರಾಗಿರುತ್ತಾರೆ ಎನ್ನುವಂಥ ಕಾರಣ ಇರುವುದರಿಂದ, ಅವರು ತೀರ್ಪು ಕೊಡುವಾಗ ಪಕ್ಷಪಾತತನದಿಂದ ವರ್ತಿಸುತ್ತಾರೆಂದು ನಾವು ಪರಿಭಾವಿಸಿಕೊಳ್ಳತಕ್ಕಂಥದ್ದೇ ನಾಚಿಕೆಗೇಡಿನ ಸಂಗತಿಯಾಗಿದೆ ಆ ರೀತಿ

ಯೋಚನೆ ಮಾಡುವುದೇ ತಪ್ಪು ಇನ್ನು ಈ ಸಂದರ್ಭವನ್ನು ಉಪಯೋಗಿಸಿಕೊಂಡು ಹೇಳುವ ಮಾತೇನೆಂದರೆ, ಅನೇಕ ಸಂದರ್ಭಗಳಲ್ಲಿ ಯಾರು ಅಧ್ಯಕ್ಷರಾಗಿರುತ್ತಾರೆ, ಅವರಿಗೆ ಚುನಾವಣೆಯ ಭಯ ಅಥವಾ ಆ ಪಕ್ಷದ ticket ನ ಭಯ ಇರಬಾರದು England ನ House of commons ಅನ್ನು ನಾವು ಪ್ರಜಾಪ್ರಭುತ್ವದ ತಾಯಿ ಸ್ವರೂಪ England ಎಂದು ಪ್ರಸ್ತಾಪ ಮಾಡುತ್ತೇವೆ House of Commons ನಲ್ಲಿರುವಂಥ Speaker ವಿರುದ್ಧವಾಗಿ ಯಾವ ಪಕ್ಷದವರೂ ಚುನಾವಣೆಯಲ್ಲಿ ಅಭ್ಯರ್ಥಿಗಳನ್ನು ನಿಲ್ಲಿಸುವುದಿಲ್ಲ ಯಾರ ಪಕ್ಷದವರ ಮುಲಾಜು ಇಲ್ಲದೆ ticket ಇಲ್ಲದೇ ಗೆದ್ದು ಬರಬಹುದು ಎಂದಾಗ, ಅವರ ಮುಲಾಜಿನಲ್ಲಿ ಕೆಲಸ ಮಾಡಬೇಕಾದಂಥ ಅಗತ್ಯ ಇಲ್ಲವೆಂದಾದಾಗ, Speaker ಆಗಿರತಕ್ಕಂಥವರು ನಿಷ್ಪಕ್ಷಪಾತವಾಗಿ ವರ್ತಿಸಲಿಕ್ಕೆ ಎಲ್ಲ ತರವಾದಂಥ ನೈತಿಕ ಸ್ಥೈರ್ಯ ಬರುತ್ತದೆ Speaker ರವರು ರಾಜಕೀಯ ಪಕ್ಷಕ್ಕೆ ಸಂಬಂಧವಿಲ್ಲದಂಥವರು, ಪಕ್ಷಾತೀತವಾಗಿರಬೇಕೆಂದು ಬರೀ ನಿಯಮಾವಳಿಗಳಲ್ಲಿ ಮಾತನಾಡುತ್ತೇವೆ ಅದು ನಿಜ ಅದೆಲ್ಲೋ ಒಬ್ಬ ಮಡಗಾಂವಕರ್ ಅಂಥವರೊಬ್ಬರು ಪಕ್ಷಾತೀತರಾಗಿರಬಹುದು ಅಥವಾ ಬಾಳಿಗಾರ್ ಅಂಥವರು ಒಬ್ಬರು ಯಾರಾದರೂ ಬಂದಿರಬಹುದು ಆದರೆ, ಇವತ್ತಿನ ವಾಸ್ತವ ಪ್ರಸಂಗದಲ್ಲಿ ನಿಮ್ಮನ್ನು ನಾವು Speaker ಸ್ಥಾನದಲ್ಲಿ ಕೂರಿಸಿ ಮುಂದೆ ಚುನಾವಣೆಯಲ್ಲಿ ಪ್ರತಿಯೊಬ್ಬರೂ ನಿಮ್ಮ ವಿರುದ್ಧವಾಗಿ ಸ್ಪರ್ಧಿಸುವಂಥ ರೀತಿ ಮಾಡಿ, ಅದರ ಜೊತೆಗೆ ಬಹುಮತದ ಕಾರಣಕ್ಕಾಗಿ ಯಾವ ಪಕ್ಷದ ಮೂಲಕ ತಾವು ಆಯ್ಕೆಯಾಗಿರುತ್ತೀರಿ, ಆ ಪಕ್ಷದವರು ticket ಕೊಡುತ್ತಾರೋ, ಕೊಡುವುದಿಲ್ಲವೋ ಇಂಥ ಎಲ್ಲ ಆತಂಕಗಳು ಇದ್ದಾಗ, ಬಹಳ ಮಟ್ಟಿಗೆ, ಅಂದರೆ ಎಲ್ಲೋ ಒಬ್ಬ ದೊಡ್ಡ ವ್ಯಕ್ತಿ ಈ ತರಹದ ತತ್ವಗಳನ್ನು, ಆದರ್ಶಗಳನ್ನು ಎತ್ತಿಹಿಡಿಯಬಹುದು ಆದರೆ, ನಾವೆಲ್ಲರೂ ಕೂಡ ಮಾನವರೇ ಆಗಿರುವುದರಿಂದ, ಸಹಜ ದೌರ್ಬಲ್ಯಗಳಿಗೆ ಒಳಗಾಗುತ್ತೇವೆ ಇದು ವಸ್ತು ಸ್ಥಿತಿ ಆವತ್ತಿನ ಕಾಲಕ್ಕೆ ಚುನಾವಣೆಗಳು ಸಕಾಲದಲ್ಲಿ ನಡೆಯಲಿಲ್ಲ, ಅಂದರೆ 14 ತಿಂಗಳ ಕಾಲ ಶ್ರೀ ಡೇವಿಡ್ ಸಿಮೆಯಾನ್‌ರವರ ಕಾಲದಲ್ಲಿ ಆಯಿತು, 13 ತಿಂಗಳ ಕಾಲ ಮಾನ್ಯ ಸುದರ್ಶನ್‌ರವರ ಕಾಲದಲ್ಲಿ ಆಯಿತು ಸುಮಾರು 6–8 ತಿಂಗಳುಗಳ ಕಾಲ ಮಾನ್ಯ ಬಿ ಆರ್ ಪಾಟೀಲರ ಕಾಲದಲ್ಲಿ ಆಯಿತು ದಿವಂಗತ ಕಲ್ಮಣ್‌ರವರ ಕಾಲದಲ್ಲಿ ಸುಮಾರು 6 ತಿಂಗಳ ಕಾಲ ಆಯಿತು

ಏಕೆಂದರೆ, ನಿಮಗೆ ಅಲ್ಲಿ ಅನುಕೂಲಗಳು ಆಗಲಿಲ್ಲ ಮಾನ್ಯ ಡಿ ಕೆ ಶಿವಕುಮಾರ್‌ರವರು ಇಲ್ಲಿಯೇ ಇದ್ದರು ಅವರಿಗೆ ಹೆಚ್ಚು ಗೊತ್ತಾಗುತ್ತಿತ್ತು ಎಂದು ಅಂದುಕೊಂಡಿದ್ದೇನೆ ಮತ್ತು ತಾವೆಲ್ಲ ಹಿರಿಯರಿದ್ದೀರಿ, ತಮಗೆಲ್ಲ ಗೊತ್ತಿರಬಹುದು ಒಂದೊಂದು ಸಲ ಬಹುಮತವಿದ್ದಾಗಲೂ ಕೂಡ, majority ಇದ್ದಂಥ ಸಂದರ್ಭದಲ್ಲಿಯೂ ಕೂಡ ಯಾರೋ ಒಬ್ಬರನ್ನು Chairman ರಾಗಿ ಮಾಡಬೇಕೆನ್ನುವ ಕಾರಣಕ್ಕಾಗಿಯೇ ಆವತ್ತು majority ಇದ್ದಾಗಲೂ ಕೂಡ ಸಭಾಪತಿ ಚುನಾವಣೆ ಆಗಲಿಲ್ಲ ಮುಂದೆ ಆ ಚುನಾವಣೆಯಲ್ಲಿ ಅವರು ಸೋತರು ಆದ್ದರಿಂದ ಅವರು ಅಧಿಕಾರಕ್ಕೆ ಬರಲಿಲ್ಲ

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ ಈ ಮಾತನ್ನು ನಾವೇ ಹೇಳಿದ್ದೇವೆ ಮಾನ್ಯ ಬಿ ಆರ್ ಪಾಟೀಲರನ್ನು ಏಕೆ ಇಟ್ಟಿದ್ದೆವು? ನೀವು, ನಾವು ಸೇರಿ ಬಿ ಜೆ ಪಿ ಯವರು ಆಗಬಾರದೆನ್ನುವ ದೃಷ್ಟಿಯಿಂದ ನಮಗೆ Majority ಇರಲಿಲ್ಲವೇ? Majority ಇತ್ತು ಮಾನ್ಯ ಸುದರ್ಶನ್‌ರವರು ಇದ್ದಾಗಲೂ majority ಇತ್ತು ಆದರೆ, ಈಗ ನಿಮಗೆ majority ಇದೆಯೇ? ಬಹುಮತ ಇದೆಯೇ? ಇದ್ದರೆ ನೀವು ಮಾಡಿ ಬಹುಮತ ಇದ್ದು ಹೀಗೆ ಮಾಡಿದ್ದರೆ ಅದು ಬೇರೆ ಮಾತು ನಿಮಗೆ ಅನಾನುಕೂಲವಾಗುತ್ತದೆಂದು ತಿಳಿದುಕೊಂಡು ನೀವು ಮಾಡುತ್ತಿದ್ದೀರಲ್ಲಾ, ಇದು ಸರಿ ಇಲ್ಲ ನಗೆಪಾಟಲೇನೆಂದರೆ, ನಿಮಗೆ majority ಇಲ್ಲದೆಯೇ majority ಇದ್ದಂಥ 40 ಜನರನ್ನು ಹೊರಗೆ ಹಾಕಿರುವಂಥದ್ದು

ಶ್ರೀ ಎಂ ಪಿ ಪ್ರಕಾಶ್ ಚುನಾವಣೆ ಆಗದಿರತಕ್ಕಂಥದ್ದು ತಪ್ಪು ಎನ್ನುವುದರ ಬಗ್ಗೆ ನಾನು ಹೇಳುತ್ತೇನೆ ಅದರ ಬಗ್ಗೆ ಬಹಳ ಸ್ಪಷ್ಟವಾದ ನಮ್ಮ ನಿಲುವು ಇದೆ ನಾವು ಮಾಡಬೇಕಾದ ಕರ್ತವ್ಯದಲ್ಲಿ ತಪ್ಪುತ್ತಿದ್ದೇವೆ ಆದರೆ, ಅದನ್ನು ನಾವು ಸರಿವಡಿಸಬೇಕಲ್ಲವೇ? ಆ ಕಾಲದಲ್ಲಿ ನಮ್ಮ ಪಕ್ಷದ ನಿಲುವಿನ ವ್ಯಕಾರವಾಗಿಯೂ ಕೂಡ ನಾವು, ಭಾರತೀಯ ಜನತಾ ಪಕ್ಷದವರು ಸ್ವಲ್ಪ ಹೆಚ್ಚು ಕಡಿಮೆ ಹೆಸರು ಹೇಳದಿದ್ದರೂ ಕೂಡ ಇವತ್ತಿನ ಸಭಾನಾಯಕರ ಹೆಸರೇ ಆವತ್ತು ಸೂಚಿಸಲ್ಪಟ್ಟಿತ್ತು ವಿಧಾನವರಿಷತ್ತಿನ ಸಭಾ ನಾಯಕರ ಹೆಸರನ್ನೇ ಸೂಚಿಸಲ್ಪಟ್ಟಿತ್ತು ಆಗ ನಾವೆಲ್ಲ ಕಲೆತು ಮಾತನಾಡಿ, ಈಗ ನಿಮ್ಮ ಜೊತೆಗೇ ಇದ್ದಾರೆ ಮಾನ್ಯ ಸಿದ್ದರಾಮಯ್ಯನವರು, ನಾವೆಲ್ಲ ಕಲೆತು ಅದಕ್ಕೆ ಬೆಂಬಲ ಕೊಡಬಾರದೆನ್ನುವ ಕಾರಣಕ್ಕಾಗಿಯೇ ಆ ರೀತಿ ಮಾಡಿದ್ದು ನಿಜ ಅದು

majority ಅಲ್ಲ ಆದರೆ, ನಿಮ್ಮಲ್ಲಿ ಒಳಮರ್ಮ ಏನಿತ್ತು? ಚುನಾವಣೆ ಮಾಡಿ ಯಾರೋ ಒಬ್ಬರನ್ನು ಸಭಾಪತಿಗಳನ್ನಾಗಿ ಮಾಡಬೇಕಾಗಿತ್ತು ಮಾನ್ಯ ಸುದರ್ಶನ್‌ರವರನ್ನು ಮಾಡಲಿಕ್ಕೆ ಇಷ್ಟವಿರಲಿಲ್ಲ ಆ ಕಾರಣಕ್ಕಾಗಿಯೇ ಆ ಚುನಾವಣೆಗಾಗಿ ಕಾದಿರಿ ಚುನಾವಣೆಯಲ್ಲಿ ಅವರು ಗೆದ್ದು ಬರಲಿಲ್ಲ

ಶ್ರೀ ಎನ್ ಧರ್ಮಸಿಂಗ್ ಕೊನೆಗೆ ಯಾರನ್ನು ಮಾಡಿದರೆಂದು ನಿಮಗೆ ಚೆನ್ನಾಗಿ ಗೊತ್ತು

ಶ್ರೀ ಎಂ ಪಿ ಪ್ರಕಾಶ್ ಮಾಡಿದ್ದೀರಿ ಇಲ್ಲವೆಂದಲ್ಲ 13 ತಿಂಗಳು ಆದಮೇಲೆ ಅವರನ್ನು ಮಾಡಿದಿರಿ ಅಂದರೆ, ಅದರ ನಡುವೆ 4 ಅಧಿವೇಶನಗಳು ನಡೆದವು ಅಂದರೆ, ನಾನು ಹೇಳಿದ್ದು, ನೀವು ಮಾಡಿದ್ದು ತಪ್ಪಾಗಿದೆ ಆ ಕಾರಣಕ್ಕಾಗಿ ನಾವೂ ತಪ್ಪು ಮಾಡಬೇಕೆನ್ನುವುದನ್ನು ನಾವು ಒಪ್ಪುವುದಿಲ್ಲ

(ಗೊಂದಲ)

ಶ್ರೀ ಕೆ ಆರ್ ರಮೇಶ್‌ಕುಮಾರ್ ತಾವು yield ಆಗುವುದಾದರೆ, ನಾನು ಏನು ಹೇಳುತ್ತಿದ್ದೆ ಎಂದರೆ, ನಾನು ಮಾತನಾಡುವಾಗ ತಮ್ಮಲ್ಲಿ ಅದನ್ನೇ represent ಮಾಡಿಕೊಂಡೆ We are not talking about the individuals ಎರಡೂ ಸ್ಥಾನ ಖಾಲಿ ಇದ್ದಾಗ Chairman ರವರ post vacant ಇದೆ, Deputy Chairman ರವರು incapacitate ಆಗಿದ್ದಾರೆ House function ಮಾಡಬೇಕು Governor's Address ಆಗಿದೆ ಎರಡೂ ಸದನ ಕುಳಿತು ಕೆಲಸ ಮಾಡಬೇಕು That is all the issue ಹಿಂದೆ ಎಲ್ಲಾ ಸಂದರ್ಭಗಳಲ್ಲೂ ಕೂಡ they might have delayed holding election to the office of the Chairman At least Deputy Chairman was there House was not remaining in this state

ಶ್ರೀ ಡಿ ಆರ್ ಪಾಟೀಲ್ ಒಂದ್ನಿಮಿಷ ಸರ್, ಈಗ ಅಲ್ಲಿ Chairman ರವರಿಲ್ಲ ಮತ್ತು Deputy Chairman ರವರು attend ಆಗುತ್ತಿಲ್ಲ ಮಾನ್ಯ ತಿಪ್ಪಣ್ಣವರು ಆ ಕುರ್ಚಿ ಮೇಲೆ ಕುಳಿತುಕೊಳ್ಳಲಿಕ್ಕೆ ಕಾನೂನಿನಲ್ಲಿ ಅರ್ಹತೆಯೇ ಇಲ್ಲ ಅದು ತಪ್ಪು ಎಂದು ನಾವು ಹೇಳುತ್ತಿದ್ದೇವೆ ಅದು ತಪ್ಪು ಎನ್ನುವುದು ಹೌದೋ ಅಥವಾ ಅಲ್ಲವೋ? ಅದರ ಮೇಲೆ ಸರಿಯಾಗಿ ನೀವು ಬೆಳಕು ಚೆಲ್ಲಬೇಕು

ಶ್ರೀ ಎಂ ಪಿ ಪ್ರಕಾಶ್ ಸನ್ಮಾನ್ಯ ಅಧ್ಯಕ್ಷರೆ, ಆ ವಿಷಯಕ್ಕೆ ನಾನು ಈಗ ಬರುತ್ತೇನೆ ಅದರಲ್ಲಿ ಯಾವುದು, ನಿಯಮಾವಳಿಗಳು ಹೇಗಿವೆ, ಮತ್ತೆ ಮಾಡಿರತಕ್ಕಂಥದ್ದು ಏನೇನು ಎಂಬುದರ ಬಗ್ಗೆ ಆಧಾರಪೂರ್ಣಕವಾಗಿ ನಾವು ಪ್ರಸ್ತಾವ ಮಾಡುತ್ತೇವೆ ಆದರೆ, ನಾನು ಮಾನ್ಯ ರಮೇಶ್ ಕುಮಾರ್‌ರವರಲ್ಲಿ ವಿನಂತಿ ಮಾಡುವುದೇನೆಂದರೆ, substantial issue is with regard to the election of the Chairman Other things are incidental

ಶ್ರೀ ಸಿದ್ದರಾಮಯ್ಯ ಈ ಪ್ರಶ್ನೆ ಉದ್ಭವವಾಗುತ್ತಲೇ ಇರಲಿಲ್ಲ ಈಗ ಉದ್ಭವ ಏಕೆ ಆಗಿದೆಯೆಂದರೆ, Deputy Chairman ಅಲ್ಲಿದ್ದು ಸಭೆ ನಡೆಸುತ್ತಿದ್ದರೆ ಈ ಪ್ರಶ್ನೆಯೇ ಬರುತ್ತಿರಲಿಲ್ಲ ಈ ಪ್ರಶ್ನೆ ಉದ್ಭವವಾಗಿದ್ದೇಕೆಂದರೆ, Deputy Chairman ರವರು ಅನಾರೋಗ್ಯದಿಂದ ಸದನಕ್ಕೆ ಬರಲಾಗುತ್ತಿಲ್ಲ ಮಾನ್ಯ ತಿಪ್ಪಣ್ಣರವರನ್ನು ಯಾವ provision ಕೆಳಗಡೆ nominate ಮಾಡಿದ್ದಾರೆ? ಕಾನೂನು ಪ್ರಕಾರವಾಗಿ ಅವರನ್ನು ಸಭಾಪತಿಯನ್ನಾಗಿ ಮಾಡುವುದಕ್ಕೆ ಬರುವುದೇ ಇಲ್ಲ ಕಾನೂನು ಪ್ರಕಾರವಾಗಿ ಯಾರನ್ನು ಮಾಡುವುದಕ್ಕಾಗುವುದಿಲ್ಲವೋ, ಅವರನ್ನು unconstitutional ಆಗಿ ಕೂರಿಸಿ, ನಿಯಮಾವಳಿಗಳ ವಿರುದ್ಧವಾಗಿ ಕೂರಿಸಿ, ಅವರ ಕೈಯಲ್ಲಿ majority ಇದ್ದವರನ್ನು expel ಮಾಡಿಸುವುದೆಂದರೆ ಇದು ಪ್ರಜಾಪ್ರಭುತ್ವಕ್ಕೆ ಮಾಡತಕ್ಕಂಥ ಅಪಚಾರ ಅಲ್ಲವೇ? Parliamentary Democracy ಗೆ ಮಾಡತಕ್ಕಂಥ ಅಪಚಾರವಲ್ಲವೇ?

ಶ್ರೀ ಎಂ ಪಿ ಪ್ರಕಾಶ್ I will come back to you Sir

ಶ್ರೀ ಸಿದ್ದರಾಮಯ್ಯ ಒಂದ್ನಿಮಿಷ ಕುಳಿತುಕೊಳ್ಳಿ ನೀವು ಉತ್ತರ ಕೊಡುತ್ತೀರೆನ್ನುವುದು ಗೊತ್ತು ಬಹಳಷ್ಟು ಪುಸ್ತಕಗಳನ್ನು ಹೊತ್ತುಕೊಂಡು ಬಂದಿದ್ದು ಏನೇನೋ ಈಗ ಹೇಳುತ್ತೀರಿ ಗೊತ್ತಿದೆ ಶ್ರೀ ಡಿ ಹೆಚ್ ಶಂಕರಮೂರ್ತಿಯವರು ಬಂದು ಒಂದು ಕಡೆ instructions ಕೊಡುತ್ತಿದ್ದಾರೆ ನೀವು ಏನು ಹೇಳುತ್ತೀರೆನ್ನುವುದು ನಮಗೆ ಗೊತ್ತಿದೆ ಇದು Parliamentary Democracy ಯಲ್ಲಿ ನಡೆಯತಕ್ಕಂಥ ವಿಧಿವಿಧಾನಗಳೇ? ಇದನ್ನು ಯಾರಾದರೂ ಒಪ್ಪಿಕೊಳ್ಳುವುದಕ್ಕಾಗುತ್ತದೆಯೇ? Majority ಇದ್ದೂ ಕೂಡ ಇವರನ್ನು ತೆಗೆದು ಆಚೆಗೆ ಹಾಕಿ ನಾವು House ನಡೆಸುತ್ತೇವೆಂದು ಹೇಳುವುದಾದರೆ, ಯಾವ ನಿಯಮದಲ್ಲಿದೆ ಹೇಳಿ, ನೋಡೋಣ ಇದನ್ನು

ಒಪ್ಪಿಕೊಳ್ಳುವುದಕ್ಕಾಗುತ್ತದೆಯೇ? ಏನಾಗಿದೆ ಎಂದರೆ, ಏನು ಕಾಂಗ್ರೆಸ್‌ನವರು ವಿರೋಧ ಪಕ್ಷದವರಾಗಿ ಅಲ್ಲಿ ಕುಳಿತುಕೊಂಡು ಏನೋ ತಪ್ಪು ಮಾಡುತ್ತಿದ್ದಾರೆ, ಇವರೇನೋ ಅಲ್ಲಿ ಮಾಡುತ್ತಿದ್ದಾರೆ, ಸರ್ಕಾರದಲ್ಲಿ ಅಷ್ಟು ಖರ್ಚಾಗುವುದಕ್ಕೆ ಕಾಂಗ್ರೆಸ್‌ನವರೇ ಜವಾಬ್ದಾರರು, ಹೊಣೆಗಾರರು ಎಂದು ದೊಡ್ಡ ಪ್ರಚಾರವಾಗುವುದಕ್ಕೆ ಪ್ರಾರಂಭವಾಗಿದೆ ಇದು ಸರ್ಕಾರ ಮಾಡಿರುವ ತಪ್ಪಾಗಿರುತ್ತದೆ ಯಾವಾಗ Deputy Chairman ರವರು ಯಾವಾಗ ಅನಾರೋಗ್ಯದಿಂದ ಕೆಲಸ ಮಾಡಲಿಕ್ಕಾಗಲಿಲ್ಲ ಕೂಡಲೆ ಸರ್ಕಾರ election ಮಾಡಬೇಕಾಗಿತ್ತು ಆ election ಮಾಡದೆಯೇ ನಮ್ಮ ಮೇಲೆ ಗೂಬೆ ಕೂರಿಸುವ ಕೆಲಸ ನಡೆಯುತ್ತಿದೆ This is very bad This is unconstitutional

ಶ್ರೀ ಕೆ ಎಸ್ ಈಶ್ವರಪ್ಪ(ಜಲ ಸಂಪನ್ಮೂಲ ಸಚಿವರು) ಇಷ್ಟೆಲ್ಲಾ ಹೇಳುತ್ತಿದ್ದಾರೆ ತುಂಬಾ ಸಂತೋಷ ಈಗ ನಮಗೆ ಇಲ್ಲಿ ಬಹುಮತ ಇದೆ ಉಪಾಧ್ಯಕ್ಷ ಸ್ಥಾನಕ್ಕಾದರೂ ನೀವು ರಾಜೀನಾಮೆ ಕೊಡಿಸಿದ್ದರೆ ತುಂಬಾ ಚೆನ್ನಾಗಿತ್ತು ಅದು ಬಿಟ್ಟು, ಕೇವಲ ಅದರ ಬಗ್ಗೆಯೇ ಮಾತನಾಡುತ್ತಾ ಕುಳಿತುಕೊಂಡರೆ ಹೇಗೆ?

ಶ್ರೀ ಸಿದ್ದರಾಮಯ್ಯ Elect ಆಗಿರುವವರು ಹೇಗೆ ರಾಜೀನಾಮೆ ಕೊಡುವುದಕ್ಕಾಗುತ್ತದೆ? He was elected How can he resign?

ಶ್ರೀ ಕೆ ಎಸ್ ಈಶ್ವರಪ್ಪ ಇವರೂ ಅಲ್ಲಿ ರಾಜಕಾರಣ ಮಾಡಬಹುದು ಇವರು ಇಲ್ಲಿಯೂ ರಾಜಕಾರಣ ಮಾಡಬಹುದು ನಾವು ರಾಜಕಾರಣ ಮಾಡುವ ಹಾಗಿಲ್ಲ

ಶ್ರೀ ಸಿದ್ದರಾಮಯ್ಯ We are not playing politics

ಶ್ರೀ ಆರ್ ವಿ ದೇಶಪಾಂಡೆ He is elected Sir ಅವರು ಚುನಾಯಿತ ಉಪಾಧ್ಯಕ್ಷರಾಗಿದ್ದಾರೆ

ಅಧ್ಯಕ್ಷರು ಆಯಿತು ಈಗ ಅವರು ಉತ್ತರ ಕೊಡುತ್ತಾರೆ

ಶ್ರೀ ಕೆ ಶ್ರೀನಿವಾಸಗೌಡ ಈಶ್ವರಪ್ಪನವರು ಹೇಳುವುದು ಹೇಗಿದೆ ಎಂದರೆ, ಸುಬಾನ್ ಸಾಬಿಗೂ, ಗೋಕುಲಾಷ್ಟಮಿಗೂ ಏನು ಸಂಬಂಧವಿದೆ ಎನ್ನುವ ಹಾಗೆ ಕಾಣುತ್ತದೆ

ಅಧ್ಯಕ್ಷರು ಆಯಿತು ಬಹಳ ಹೊತ್ತಾಯಿತು

ಶ್ರೀ ಎಂ ಪಿ ಪ್ರಕಾಶ್ ಸುಮ್ಮನೆ ಲಘುವಾಗಿ ಕೆಲವು ವಿಷಯಗಳನ್ನು ಹೇಳಿದರೇ ವಿನಃ ಆ ಉದ್ದೇಶದಿಂದ ಅಲ್ಲ ತಾವು ಮುಖ್ಯವಾಗಿರುವಂಥದ್ದನ್ನು ಪ್ರಸ್ತಾಪ ಮಾಡಿದ್ದೀರಿ ಚುನಾವಣೆಗಳನ್ನು ಕಾಲಕಾಲಕ್ಕೆ ನಿಯಮಿತವಾಗಿ ನಮಗೆ ಅನುಕೂಲವಿಲ್ಲದಿದ್ದರೂ ಕೂಡ ನಾವು ಮಾಡಿದ್ದರೆ, ನಾವು ಪ್ರಜಾಪ್ರಭುತ್ವದ ಬಗ್ಗೆ ಮಾತನಾಡತಕ್ಕಂಥ ಎಲ್ಲ ಅರ್ಹತೆಯನ್ನು ಪಡೆಯುತ್ತಿದ್ದೆವು ಅದು ಯಾವ್ಯಾವುದೋ ಕಾರಣಕ್ಕಾಗಿ, ಒಂದು ತಪ್ಪಿನಿಂದ ಎಷ್ಟು ತಪ್ಪುಗಳಾಗುತ್ತವೆ ಎನ್ನುವುದಕ್ಕೆ ಇದೊಂದು ಉದಾಹರಣೆಯನ್ನು ನಾನು ಹೇಳಿದೆ ಆ ಕಾಲದಲ್ಲಿಯೂ ಕೂಡ ಈ ತರಹದ ತಪ್ಪುಗಳನ್ನು ನಾವು ಮಾಡಿದ್ದೇವೆ ಅದೇನಾದರೂ ಇರಲಿ ಅದಾಗಿದೆ ಎನ್ನುವುದಿದೆ ಈಗೇನು ~ ತಾವು ಹೇಳುತ್ತಿದ್ದೀರಿ, ತಿಪ್ಪಣ್ಣನವರ ಆಯ್ಕೆ

ಶ್ರೀ ಪಿ ಜಿ ಆರ್ ಸಿಂಧ್ಯ ದಯವಿಟ್ಟು, ಮಾನ್ಯ ಗೃಹ ಸಚಿವರು yield ಆಗುವುದಾದರೆ ಒಂದು ಮಾತು ಹೇಳುತ್ತೇನೆ ನೀವು ಮಾತನಾಡುತ್ತಾ ಇರತಕ್ಕಂಥದ್ದು ಹೇಗಿದೆ ಎಂದರೆ, Is this House or the system property of any two political parties? Are we discussing only on the basis of that? If that is so, if you want to respect the system, then you do the elections immediately

ಶ್ರೀ ಎಂ ಪಿ ಪ್ರಕಾಶ್ That is what I am telling ತಾವು ಆಗಲೇ ಪ್ರಾರಂಭ ಮಾಡಿದಂಥ ಸಂದರ್ಭದಲ್ಲಿ ಬಂದಿದ್ದಿರಿ ಎಂಬುದು ನನಗೆ ಗೊತ್ತಿಲ್ಲ ತಾವು ಇದ್ದಿರಿ ಅಲ್ಲವೇ? ನಮ್ಮ ಕೆಲವು ಈ ನಿಯಮಾವಳಿಗಳನ್ನು ಕಾಲ ಕಾಲಕ್ಕೆ ನಮಗೆ ಅನುಕೂಲವಾಗುವಂಥ ರೀತಿಯಲ್ಲಿ ತಿದ್ದುಪಡಿ ಮಾಡತಕ್ಕಂದ, ವಿಕೃತಗೊಳಿಸುವಂಥ, ನಿರ್ಣಯ ತೆಗೆದುಕೊಳ್ಳಬೇಕಾದಂಥ ಸಂದರ್ಬದಲ್ಲಿ ನಿರ್ಣಯವನ್ನೇ ತೆಗೆದುಕೊಳ್ಳದಿರತಕ್ಕಂಥದ್ದು ಇಂಥ ಅಪಾಯಕಾರಿಯಾದಂಥ ವ್ಯವಸ್ಥೆಗೆ ಕಾರಣವಾಗುತ್ತದೆನ್ನತಕ್ಕಂದ ಮಾತನ್ನು ಹೇಳಿದೆ This House should also be dispassionate to act ಆದರೆ, ಅದನ್ನು ನಾವು ಮಾಡಿಲ್ಲ ರಾಜಕಾರಣ ಮಾಡಿದ್ದೇವೆ ಇವತ್ತು ನಾವು ರಾಜಕಾರಣದ ವಿಷಯ ಹೇಳದೇ ಇರಬಹುದು ಆದರೆ, ರಾಜಕಾರಣ ಮಾಡಿರತಕ್ಕಂದದ್ದು ಕೂಡ ನತ್ಯ ನಂಗತಿಯೇ ಅವತ್ತು ನಾವು ಮಾಡಬೇಕಾದಂಥ ಸಮಯದಲ್ಲಿ ಮಾಡಿಲ್ಲ ಅದು ಬಿಡಿ ಇವತ್ತು

ತಿಪ್ಪಣ್ಣನವರನ್ನು ನೇಮಕ ಮಾಡಕತಕ್ಕಂಥದ್ದು ಹೇಗಿತ್ತು ಎಂದು ತಾವು ಮೂಲಭೂತವಾದ ಪ್ರಶ್ನೆ ಎತ್ತಿದ್ದೀರಿ ತಮಗೂ ಕೂಡ ಗೊತ್ತಿದೆ Pro tem Chairman ಮಾಡಬೇಕಾಗಿದ್ದರೆ, ಎರಡೂ ಸ್ಥಾನಗಳು ಖಾಲಿ ಯಾಗಿರಬೇಕು ಅಲ್ಲಿ ಸಭಾಪತಿಯವರ ಸ್ಥಾನ ಖಾಲಿ ಇದೆ ಆದರೆ, ಉಪ ಸಭಾಪತಿಯವರ ಸ್ಥಾನ ಖಾಲಿ ಇಲ್ಲ ಆದ್ದರಿಂದ, ರಾಜ್ಯಪಾಲರು ನೇಮಕಾತಿ ಮಾಡಿ ಅಥವಾ ಇಂಥವರನ್ನು ನಾನು pro tem Chairman ಮಾಡಿದ್ದೇನೆಂದು ಹೇಳಲಿಕ್ಕೆ ಬರುವುದಿಲ್ಲ ಏಕೆಂದರೆ, ಉಪಸಭಾಪತಿಯವರ ಸ್ಥಾನ ಖಾಲಿ ಇಲ್ಲ ಆ ಕಾರಣಕ್ಕಾಗಿಯೇ, ಎರಡನೆಯ ಪ್ರಶ್ನೆ ಏನು ಬರುತ್ತದೆ? ಅವರು ಇನ್ಯಾವುದೋ ಕಾರಣಕ್ಕಾಗಿಯೇ ಸದನಕ್ಕೆ ಬಂದು ಕಾರ್ಯ ಕಲಾಪಗಳನ್ನು ನಡೆಸಲಿಕ್ಕೆ ಸಾಧ್ಯವಾಗದೇ ಇದ್ದರೆ, ಅದಕ್ಕಾಗಿ ಒಂದು panel of the Chairman ಇರತಕ್ಕಂಥ ಪಟ್ಟಿ ಆ ಕೂಡಲೇ ಮುಗಿದು ಹೋಗುತ್ತದೆಂದು ತಾವು ಹೇಳಿದ್ದೀರಿ ಆದರೆ, ಅದಲ್ಲ ನಿಯಮಾವಳಿಗಳು ಬಹಳ ಸ್ಪಷ್ಟವಾಗಿರತಕ್ಕಂಥದ್ದಿವೆ ವರಿಷತ್ತಿನ ನಿಯಮ 9ರ ಕೆಳಗೆ

<u>ಸಭಾಪತಿಯವರ ಪದಧಾರಣ ಮಾಡುವವರ ಹೆಸರುಗಳ ಪಟ್ಟಿ</u>

"ಸಭಾಪತಿಯವರು ಕಾಲ ಕಾಲಕ್ಕೆ ಪರಿಷತ್ತಿನ ಸದಸ್ಯರ ಪೈಕಿ 4 ಸದಸ್ಯರಿಗೆ ಮೀರದಂತೆ ಸಭಾಪತಿಗಳಾಗಿ ಕಾರ್ಯನಿರ್ವಹಿಸುವ ಸದಸ್ಯರ ನಾಮ ನಿರ್ದೇಶನ ಮಾಡತಕ್ಕದ್ದು ಸಭಾಪತಿಯವರು ಮತ್ತು ಉಪ ಸಭಾಪತಿಯವರ ಗೈರು ಹಾಜರಿಯಲ್ಲಿ ಸಭಾಪತಿಯವರಿಂದ ಪದಧಾರಣ ಮಾಡಲು ನಾಮ ನಿರ್ದೇಶನಗೊಂಡ ಸದಸ್ಯರ ಪೈಕಿ ಯಾರಾದರೊಬ್ಬರು ಸಭೆಯ ಅಧ್ಯಕ್ಷತೆಯನ್ನು ವಹಿಸತಕ್ಕದ್ದು ಪಟ್ಟಿಯಲ್ಲಿರುವ ನಾಮ ನಿರ್ದೇಶಿತ ಸದಸ್ಯರು ಮತ್ತೊಂದು ಹೊಸ ಪಟ್ಟಿಯನ್ನು ತಯಾರಿಸುವವರೆಗೆ ಸಭಾಪತಿಯವರ ಗೈರು ಹಾಜರಿಯಲ್ಲಿ ಸಭಾಪತಿಯವರ ಪದಧಾರಣ ಮಾಡತಕ್ಕದ್ದು" ಎಂದಿದೆ

ಬೆಳಗಾವಿ ಅಧಿವೇಶನದಲ್ಲಿ ಮಾನ್ಯ ಉಪ ಸಭಾಪತಿಗಳು ಈ ಪಟ್ಟಿಯನ್ನು ತಯಾರು ಮಾಡಿದ್ದರು ಆ ಪಟ್ಟಿಯನ್ನು ಮತ್ತೆ supercede ಮಾಡಿ ಅಧವಾ ಪಟ್ಟಿಯನ್ನು ರದ್ದು ಮಾಡಿ

ಶ್ರೀ ಕೆ ಆರ್ ರಮೇಶ್‌ಕುಮಾರ್ ನೀವು ಏನು ಬೇಕಾದರೂ ಮಾಡಿಕೊಳ್ಳಿ My very honest feeling, is that you should not go on record in this House taking advantage of these things ಇದು ನಮ್ಮ Rules and Procedure

ಶ್ರೀ ಎಂ ಪಿ ಪ್ರಕಾಶ್ ಇದು ನಮ್ಮ ವಿಧಾನ ಪರಿಷತ್ತಿನ ನಿಯಮಾವಳಿ

ಶ್ರೀ ಕೆ ಆರ್ ರಮೇಶ್‌ಕುಮಾರ್ Exactly, ಅದನ್ನು ನಾನು ಹೇಳುವುದು ನಮ್ಮ House ನ ನಡವಳಿಕೆಗಳನ್ನು ನಾವು ಮಾಡಿಕೊಂಡಿದ್ದೇವೆ Kindly go back to the explanation either under Kaul and Shakdhar or May's Parliamentary Practice ನಾವು panel ಅನ್ನು Session ಅನ್ನು convene ಮಾಡಿದಮೇಲೆ during the course of the session, till the closure of that session

ಶ್ರೀ ಎಂ ಪಿ ಪ್ರಕಾಶ್ ಆ ತರಹ ಇಲ್ಲ

ಶ್ರೀ ಕೆ ಆರ್ ರಮೇಶ್‌ಕುಮಾರ್ Please you kindly go to the definition ತಾವು Kaul and Shakdhar ಪುಸ್ತಕ ಓದಿ May's Parliamentary Practice ಆ ಸೀಮಿತ ಉದ್ದೇಶಕ್ಕೆ panel ಅನ್ನು constitute ಮಾಡಿರುತ್ತೇವೆ The House is adjourned *sine die*, automatically the panel lapses

ಶ್ರೀ ಎಂ ಪಿ ಪ್ರಕಾಶ್ I think Sir, if you show me any of the rulings which the Hon'ble Chairmen or other Speakers have given I will be very grateful to get myself apprised about it But, ನನಗೆ ಇಲ್ಲಿ ಗೊತ್ತಿರತಕ್ಕಂಥದ್ದು ಇದು ನಿಜವಾಗಿ

ಶ್ರೀ ಕೆ ಆರ್ ರಮೇಶ್‌ಕುಮಾರ್. ಪ್ರತಿ ಸಲ ನಾವು ವಿಧಾನ ಸಭೆಯ ಅಧಿವೇಶನವನ್ನು ಹೊಸದಾಗಿ ಕರೆದಾಗ ಅನಿರ್ದಿಷ್ಟ ಕಾಲದವರೆಗೆ ಸದನವನ್ನು ಮುಂದಕ್ಕೆ ಹಾಕಿರುತ್ತೇವೆ ಅದಾದಮೇಲೆ, ರಾಜ್ಯಪಾಲರ ಆದೇಶದ ಮೇರೆಗೆ

P2
19

ನಾವು ವಿಧಾನಸಭೆಯ ಅಧಿವೇಶನವನ್ನು ಪುನ ಕರೆಯುತ್ತೇವಲ್ಲ, ಆ ಅಧಿವೇಶನ ಪ್ರಾರಂಭವಾದ ದಿವಸ ಮತ್ತು ಮುಕ್ತಾಯವಾಗುವುದರ ಮಧ್ಯೆ ವೇಳೆಗೆ ಸಾಮಾನ್ಯವಾಗಿ ನಾವು panel ಅನ್ನು constitute ಮಾಡುತ್ತೇವೆ

ಶ್ರೀ ಎಂ ಪಿ ಪ್ರಕಾಶ್ ಸಾಮಾನ್ಯವಾಗಿರತಕ್ಕಂಥದ್ದು ಇರಬಹುದು ಆದರೆ,

ಶ್ರೀ ಕೆ ಆರ್ ರಮೇಶ್‌ಕುಮಾರ್ It is implied.

ಶ್ರೀ ಎಂ ಪಿ ಪ್ರಕಾಶ್ ಆಯಿತು ಈಗ ತಾವು, ಇನ್ನೊಂದು ಅಧಿವೇಶನ ಬಂದಾಗ ಹೊಸ ಪಟ್ಟಿ ಜಾರಿಗೆ ಬಂದು ಅಲ್ಲಿಗೆ ಹಳೆ ಪಟ್ಟಿಗೆ ಅದು ನಿಷ್ಕ್ರಿಯ ಆಗುತ್ತದೆಂದು ತಾವು ಹೇಳುತ್ತೀರಿ ಆದರೆ, ಇಲ್ಲಿರತಕ್ಕಂಥ plain reading of this particular rules ಹೊಸ ಪಟ್ಟಿ ತಯಾರಾಗುವವರೆಗೂ ಎಂಬುದಿದೆ ಇದರ ಬಗ್ಗೆ ಏನಾದರೂ ತೀರ್ಮಾನಗಳು ಇದ್ದರೆ,

ಶ್ರೀ ಕೆ ಆರ್ ರಮೇಶ್‌ಕುಮಾರ್ ಹಾಗಾದರೆ, ನಮ್ಮ House summon ಆಗಬೇಕಲ್ಲವೇ? ಬೆಳಗ್ಗೆ House commence ಆಗಬೇಕಾದರೆ ಏನು procedure ಇದೆ ಓದಿ ಅದರಲ್ಲೇ ಓದಿ Who has to convene the House?

ಶ್ರೀ ಎಂ ಪಿ ಪ್ರಕಾಶ್ ಈಗ ಅದರ ಜೊತೆಗೆ, ತಾವು ಮೂಲಭೂತವಾದ ಪ್ರಶ್ನೆಯನ್ನು ಎತ್ತಿರುವುದರಿಂದ ನಾನು ಹೇಳುತ್ತೇನೆ, Is it the parliamentary etiquette to discuss about the proceedings of the Upper House?

ಶ್ರೀ ಕೆ ಆರ್ ರಮೇಶ್‌ಕುಮಾರ್ We are not discussing proceedings

(ಗೊಂದಲ)

ಶ್ರೀ ಸಿದ್ದರಾಮಯ್ಯ ಆಗಿರುವುದರಿಂದ ಸರ್ಕಾರದ ಗಮನ ಸೆಳೆಯಬೇಕೆಲ್ಲವೇ? ಯಾರು ಮಾಡುವುದು? ಅವರು ಅಲ್ಲಿ ಇಲ್ಲ ನಾವು ಮಾಡಬೇಕಲ್ಲ?

ಶ್ರೀ ಎಂ ಪಿ ಪ್ರಕಾಶ್ Generally, Parliamentary etiquette ಏನು ಹೇಳುತ್ತದೆಂದರೆ, ಬೇರೆ Upper Houseನ ಯಾವುದೇ ನಡವಳಿಕೆಗಳನ್ನು ಇಲ್ಲಿ ಚರ್ಚೆ ಮಾಡಬಾರದು

ಶ್ರೀ ಕೆ ಆರ್ ರಮೇಶ್‌ಕುಮಾರ್ ಅವರು defunct ಆಗಿಬಿಟ್ಟಿದ್ದಾರೆ

ಶ್ರೀ ಎಂ ಪಿ ಪ್ರಕಾಶ್ ದಯಮಾಡಿ ಕೇಳಿ ನೀವು ಹೇಳಿದ್ದೀರಿ ನಾವು ಕೇಳುತ್ತೇವೆ ಮಲ್ಲಿಕಾರ್ಜುನ ಖರ್ಗೆಯವರು ಮಾತನಾಡುವಾಗ Chairman ರಾಗಿರುವಂಥವರು 40 ಮಂದಿಯನ್ನು ಸದನದಿಂದ ಹೊರಗೆ ಹಾಕಿದ್ದಾರೆ ಎಂದು ಹೇಳಿದರು Is it not a proceeding? Why should we discuss about that particular proceeding? Whether you recognize him or not is a totally different thing But, the parliamentary etiquette

Sri M Mallikarjuna Kharge This is the deadlock created by the Constitution He cannot function

ಶ್ರೀ ಎಂ ಪಿ ಪ್ರಕಾಶ್ Kindly allow me Sir, I am not going to yield ತಾವು ಹೇಳಿದ್ದನ್ನೆಲ್ಲ ನಾವು ಕೇಳಿದ್ದೇವೆ Please kindly bear with me ಈಗ ತಾವು Shakdhar and Kaul

ಶ್ರೀ ಕೆ ಆರ್ ರಮೇಶ್‌ಕುಮಾರ್ Academic purpose ಗೆ ಈ ತರಹ outcome ಏನಾದರೂ ಇದ್ದರೆ it is good. ಸದನದಲ್ಲಿ ಈ ತರಹದ ಕೆಲವು ಚರ್ಚೆಗಳಾಗಬೇಕಾಗಿತ್ತು ತಾವು yield ಆದರೆ ನಾನು ತಮಗೆ ಒಂದೇ request ಮಾಡುವುದು, suspension of a member Suspension ಅನ್ನು ಹೇಗೆ ಮಾಡುತ್ತೇವೆ? ಯಾವುದೇ ಒಬ್ಬ ಸದಸ್ಯ ಸದನದ ಕಾರ್ಯಕಲಾಪಗಳು ನಡೆಯುವಾಗ ಅಧ್ಯಕ್ಷರ ಎಲ್ಲಾ ಪ್ರಯತ್ನಕ್ಕೂ ಮೀರಿ ಹೋಗಿ ಸದನವನ್ನು ಸಕ್ರಮವಾದ ರೀತಿಯಲ್ಲಿ ನಡೆಸಿಕೊಂಡು ಹೋಗುವುದಕ್ಕೆ ತಡೆ ಉಂಟು ಮಾಡಿದಾಗ ಅವರ ಸಹನೆ ಮೀರಿದಾಗ ಅವರು ಯಾರ ಸಹಾಯ ಕೇಳುತ್ತಾರೆ? I want to send him out ದಯಮಾಡಿ Chief Whip ಯಾರಿರುತ್ತಾರೆ ಅವರಿಗೆ name ಮಾಡಿ ಎಂದು ಹೇಳುತ್ತಾರೆ Chief Whip ರವರು he has to name ಇಂಥವರನ್ನು ಸದನದಿಂದ ಹೊರಗೆ ಹಾಕಬೇಕೆಂದು ಹೇಳಿ ನಾನು urge ಮಾಡುತ್ತಿದ್ದೇನೆಂದು ಹೇಳಿ ತಮ್ಮ ಮೂಲಕ ಮನವಿಯನ್ನು ಸಲ್ಲಿಸಬೇಕು and if that is put into question, numerical strength ಮೇಲೆ

ಶ್ರೀ ಎಂ ಪಿ ಪ್ರಕಾಶ್ I understood your point Sir

ಶ್ರೀ ಕೆ ಆರ್ ರಮೇಶ್‌ಕುಮಾರ್ Usually, Government Chief Whip ಎಂದು ಯಾರಿಗೆ ಕರೆಯುತ್ತೇವೆ? ಯಾರಿಗೆ ಬಹುಮತವಿದೆ

ಶ್ರೀ ಎಂ ಪಿ ಪ್ರಕಾಶ್ That is under a totally different provision Sir

ಶ್ರೀ ಕೆ ಆರ್ ರಮೇಶ್‌ಕುಮಾರ್ ಇಲ್ಲಿ majority members ಅನ್ನು minorityಯಲ್ಲಿರುವವರು locus-standi ಇಲ್ಲದೇ suspend ಮಾಡಿಬಿಟ್ಟು

ಶ್ರೀ ಎಂ ಪಿ ಪ್ರಕಾಶ್. Whether Mr Thipanna has got locus-standi or not? ಅನ್ನತಕ್ಕಂಥದ್ದು ನೀವೇನು Shakdhar and Kaul ಮೇಲೆ ಅವಲಂಬಿತರಾಗಿದ್ದೀರಿ ಅದೇ Kaul and Shakdhar ಪುಸ್ತಕದ ಮೇಲೇ ನಾವು ಅವಲಂಬಿತರಾಗಿದ್ದೇವೆ ಇಲ್ಲಿ ಪ್ರಶ್ನೆ ಬರುತ್ತಿರುವುದೇನು? Any member of panel of Chairman when presiding over a sitting of a House has the same power as the Speaker when so presiding ಕೇಳಿ ಸಾರ್, ಓದುತ್ತೇನೆ Academic discussion ಆಗಬೇಕೆನ್ನುತ್ತೀರಿ ಉತ್ತರ ಬೇಕೆಂದು ಹೇಳುತ್ತೀರಿ At every time if you have a derisive laugh at these things then it means that you people have a feeling that your contention alone is correct and the other contention is bad ಎಂದು ಆಗುತ್ತದೆ

"Any member of the Panel of Chairmen when presiding over a sitting of the House has the same power as the Speaker When so presiding, the rulings of the Chairman are not subject to any criticism nor open to any debate or appeal In order that there is an authoritative ruling, a Chairman often reserves major issues of decision by the Speaker A reference to Chairman's conduct in the Chair amounts to contempt of the House, and therefore he is shown all respect as the Presiding Officer of the House" ಅದೇ ರೀತಿ, any member of the panel of chairman ಈಗ ಇವರು ಪ್ಯಾನಲ್‌ನಲ್ಲಿರತಕ್ಕಂಥ ಒಬ್ಬ ಚೇರಮನ್‌ರು ನೀವು ಏನು ಹೇಳುತ್ತೀರಿ, ಅದು ಅಧಿವೇಶನದಲ್ಲಿ ಆಗಿರತಕ್ಕಂಥದ್ದು ಮತ್ತೊಂದು ಅಧಿವೇಶನ ಕರೆದಾಗ ಆ ಪಟ್ಟಿ ತನ್ನ ಪ್ರಸ್ತುತತೆಯನ್ನು ಕಳೆದುಕೊಳ್ಳುತ್ತದೆ, ಅದರೆ ನನ್ನ ಪ್ರಕಾರವಾಗಿ ಅದು ಪ್ರಸ್ತುತವಾಗಿಯೇ ಇದೆ

ಮತ್ತೊಂದು ಹೊಸ ಪಟ್ಟಿ ತಯಾರಾಗುವವರೆಗೆ ಕೂಡ ಆ ಪ್ಯಾನಲ್ ಇದೆ ಆದರ ಪ್ರಕಾರ ಅವರು ನೇಮಕಾತಿಯನ್ನು ಮಾಡಿದ್ದಾರೆ ನೇಮಕಾತಿಯಾಗಿರತಕ್ಕಂಥ ಪ್ಯಾನಲ್‌ನ ಒಬ್ಬ ಚೇರಮನ್‌ರು, ಸಭಾಪತಿಯಾಗಿರತಕ್ಕಂಥವರು constitution ನ ಆರ್ಟಿಕಲ್ 184 (2)ರ ಕೆಳಗೆ ಎಲ್ಲಾ ಅಧಿಕಾರವನ್ನು ಚಲಾಯಿಸುವ ಹಕ್ಕು ಆತನಿಗಿದೆ ಒಮ್ಮೆ ನಾವು ಆ ಅಭಿಪ್ರಾಯಕ್ಕೆ ಬಂದಾಗ ಚಲಾಯಿಸುವ ಅಧಿಕಾರ ಆತನಿಗೆ ಇದ್ದಾಗ ಇಲ್ಲಿ ತೆಗೆದುಕೊಂಡಿರತಕ್ಕಂಥದ್ದು ತಾವೇನು ಪ್ರಸ್ತಾಪ ಮಾಡುತ್ತಿರಿ, ಚೀಫ್ ವಿಪ್ ಆಗಿರತಕ್ಕಂಥವರು ಕೊಡತಕ್ಕಂಥದ್ದು, ಅವರನ್ನು ಹೆಸರಿಸಬೇಕು ಎನ್ನುವಂಥದ್ದು ಅದು ಒಂದು ಕಲಂ ನಲ್ಲಿ ಇರತಕ್ಕಂಥದ್ದು ವಿಧಾನ ಪರಿಷತ್ತಿನ ನಿಯಾಮಾವಳಿ ನಡಾವಳಿ 327 ರ ಕೆಳಗೆ,

ಸದಸ್ಯರು ಕೆಲ ಕಾಲ ಸಭೆಗೆ ಬರದಂತೆ ತಡೆಹಿಡಿಯುವುದು

"ಸಭಾಪತಿಯವರು ತಾವು ಅವಶ್ಯಕವೆಂದು ಭಾವಿಸಿದ ಪಕ್ಷದಲ್ಲಿ ಯಾರೇ ಸದಸ್ಯರು ಸಭಾಪತಿಯವರ ಅಧಿಕಾರದ ವಿಷಯದಲ್ಲಿ ಲಕ್ಷ್ಯವಿಲ್ಲದೇ ತಿರಸ್ಕಾರ ಮಾಡುತ್ತಾರೋ ಅಥವಾ ಪರಿಷತ್ತಿನ ಕಾರ್ಯಕಲಾಪಗಳಿಗೆ ಒಂದೇ ಸಮನಾಗಿ ಮತ್ತು ಉದ್ದೇಶಪೂರ್ವಕವಾಗಿ ಅಡಚಣೆಯನ್ನುಂಟು ಮಾಡುವುದರ ಮೂಲಕ ಪರಿಷತ್ತಿನ ನಿಯಮಗಳಿಗೆ ವಿರೋಧವಾಗಿ ವರ್ತಿಸಿತ್ತಾರೋ ಆ ಸದಸ್ಯರ ಹೆಸರನ್ನು ಪರಿಷತ್ತಿಗೆ ತಿಳಿಸಬಹುದು ಆ ರೀತಿ ಸಭಾಪತಿಯವರು ಒಬ್ಬ ಸದಸ್ಯರನ್ನು ತಿಳಿಸಿದ ಪಕ್ಷದಲ್ಲಿ ಆ ಕೂಡಲೇ ಆ ಸದಸ್ಯರು ಅಧಿವೇಶನದ ಉಳಿದ ಕಾಲದಲ್ಲಿ ಅಥವಾ ಸಭಾಪತಿಯವರು ನಿರ್ದಿಷ್ಟಪಡಿಸಬಹುದಾದಂಥ ಅಧಿವೇಶನದ ಒಂದು ಭಾಗದವರೆಗೆ ಪರಿಷತ್ತಿಗೆ ಬಾರದಂತೆ ಆಜ್ಞೆ ಮಾಡಬಹುದು ಪರಂತು ಯಾವುದೇ ಸಮಯದಲ್ಲಿ ಸಭೆಗೆ ಬರದಂತೆ ತಡೆಹಿಡಿದ ಈ ಆಜ್ಞೆಯನ್ನು ತೆಗೆದು ಹಾಕಬೇಕೆಂಬ ಪ್ರಸ್ತಾವ ಬಂದರೆ ಪರಿಷತ್ತು ಆ ಆಜ್ಞೆಯನ್ನು ಹಿಂತೆಗೆದುಕೊಳ್ಳಬಹುದು "

ನೀವು ಹೇಳತಕ್ಕಂಥದ್ದು ನೇಮ್ ಮಾಡತಕ್ಕಂಥದ್ದಲ್ಲ ಸಭಾಕಲಾಪಗಳು ಮಾಡಿದಾಗ ಅವರಿಗೆ ನೀವು ಹೋಗಿ ಬಿಡಬೇಕು ಎಂದು ಹೇಳತಕ್ಕಂಥ ಅಧಿಕಾರ ವಿಧಾನ ಪರಿಷತ್ತಿನಲ್ಲಿ ನಿಯಾಮಾವಳಿಯ 327 ರ ಕೆಳಗೆ ಅವರಿಗೆ ಲಭ್ಯವಿರತಕ್ಕಂಥದ್ದು ಅದರೆ, ಆತ ಸಭಾಪತಿಯೇ ಅಲ್ಲ ಎನ್ನುವ

ಅಭಿಪ್ರಾಯದ ಮೂಲಕ ನೀವು ಮಾತನಾಡುವುದರಿಂದ ಸಭಾಪತಿ ಅಲ್ಲದವರು ಮಾಡುವ ಯಾವ ಆಜ್ಞೆಯು ಅಸಿಂಧು ಎನ್ನುತ್ತೀರಿ ಆದರೆ ತಾವು ದಯವಿಟ್ಟು ಗಮನಿಸಬೇಕಾಗಿರತಕ್ಕಂಥದ್ದು, ವಿಧಾನ ಪರಿಷತ್ತಿನಲ್ಲಿ ಇಲ್ಲಿ ಕೆಳಮನೆಯ ಸದಸ್ಯರಾಗಿರತಕ್ಕಂಥವರು ಗತಿಸಿದ ಸಂದರ್ಭದಲ್ಲಿ ಸಂತಾಪ ಸೂಚನೆಯನ್ನು ಮಾಡಿದಾಗ ಮೇಲ್ಮನೆಯಲ್ಲಿ ಸಂತಾಪ ಸೂಚನೆಯಲ್ಲಿ ಭಾಗವಹಿಸಿದರು ಅದರಲ್ಲಿ ಅರ್ಧಜನ ಭಾಗವಹಿಸಿದಂಥ ಸಂದರ್ಭದಲ್ಲಿ ಸಭಾಪತಿಯವರು ವಿಧಾನ ಸಭೆಯ ಒಬ್ಬ ಹಾಲಿ ಸದಸ್ಯರು ನಿಧನ ಹೊಂದಿದಂಥ ಸಂತಾಪದಲ್ಲಿ ಎರಡು ನಿಮಿಷ ಮೌನವಾಗಿ ಎದ್ದು ನಿಲ್ಲಬೇಕು ಎಂದು ಹೇಳಿದಾಗ, ಅಲ್ಲಿ ಬಹಳ ಪ್ರಮುಖವಾಗಿರತಕ್ಕಂಥ ಕೆಲವು ವಿರೋಧ ಪಕ್ಷದ ಸದಸ್ಯರುಗಳು, ಇಲ್ಲದ ಗಲಾಟೆಯನ್ನು ಎಬ್ಬಿಸಿ, ನೀವು ಹೇಳಿದ ಮಾತನ್ನು ನಾವು ಕೇಳಬೇಕಾಗಿಲ ಎಂದು ಅವರು ನಿಂತುಕೊಂಡು ಇದ್ದಾರೆ, ಸಂತಾಪ ಸೂಚನೆಯಲ್ಲಿ ಭಾಗವಹಿಸಿದ್ದಾರೆ, ಇದನ್ನು ನಾವು ಸರಿಯಾದಂಥ ನಡವಳಿಕೆ ಎಂದು ಪರಿಭಾವಿಸಬೇಕಾ? ಒಂದು ಸಂತಾಪ ಸೂಚನೆಯ ಸಭೆಯಲ್ಲಿಯೂ ಕೂಡ ಒಂದು ನಿಮಿಷ ನಿಂತುಕೊಳ್ಳುವುದಕ್ಕೆ ಸಾಧ್ಯವಾಗಲಾರದಂಥ ರೀತಿಯಲ್ಲಿ ಈ ರೀತಿಯಾದಂಥ ಗದ್ದಲವನ್ನು ಹಿರಿಯರ ಮನೆಯಲ್ಲಿ ಬಹಳ ಪ್ರಮುಖವಾಗಿರತಕ್ಕಂಥ, ಆ ಶಾಸಕಾಂಗ ಪಕ್ಷದಲ್ಲಿ ಮತ್ತು ಆ ಪಕ್ಷದಲ್ಲಿ ಗುರುತರವಾದಂಥ ಒಂದು ಸ್ಥಾನವನ್ನು ಪಡಿದಿರತಕ್ಕಂಥ ವ್ಯಕ್ತಿ ಗಲಾಟೆ ಮಾಡಿದರು ಇದು ಬಹಳ ದುರ್ದೈವದ ಸಂಗತಿ ಆ ಕಾರಣಕ್ಕಾಗಿ ನಾವು ಈ ವಿಚಾರದಲ್ಲಿ

ಶ್ರೀ ಕೆ ಆರ್ ರಮೇಶ್ ಕುಮಾರ್ We will leave it where it is We will adjourn for lunch We can reassemble ಏಕೆಂದರೆ, we have to contribute our views ಮತ್ತೆ ಲೇಟ್ ಆಗಿಬಿಡುತ್ತದೆ ಯಡಿಯೂರಪ್ಪನವರು is a diabetic patient ಅವರ ಆರೋಗ್ಯವನ್ನು ನಾವು ಕಾಪಾಡಿಕೊಳ್ಳಬೇಕು ಅವರು ಬಜಟ್ ಪ್ರೆಸೆಂಟ್ ಮಾಡಬೇಕು ಆದುದರಿಂದ ಅವರ ಹಿತದೃಷ್ಟಿಯಿಂದ ಈಗ ಸಭೆಯನ್ನು ಮುಂದಕ್ಕೆ ಹಾಕಿ, ಅವರ ಆರೋಗ್ಯ ಚೆನ್ನಾಗಿರುವಂತೆ ನೋಡಿಕೊಳ್ಳಿ

ಶ್ರೀ ಎಂ ಪಿ ಪ್ರಕಾಶ್ ಆಗಬಹುದು ಇದೇ ನೋಡಿ ಜಾಣರ ಕೆಲಸ ಹೇಗೆ ಇರುತ್ತದೆಂದರೆ, ಪಕ್ಕದಲ್ಲಿರುವವರಿಗೆ ತುಪ್ಪ ಹಾಕಿರಿ ಎಂದು ಹೇಳಿ ನಮಗೂ ಹಾಕುತ್ತಾರೆ ಎನ್ನುವ ಉದ್ದೇಶದಿಂದ ಹೇಳುತ್ತಾರೆ ಆಗಬಹುದು

ಶ್ರೀ ಕೆ ಆರ್ ರಮೇಶ್ ಕುಮಾರ್ I take it a s a compliment

ಅಧ್ಯಕ್ಷರು ಈಗೇನು adjourn ಮಾಡಬಹುದಾ?

ಶ್ರೀ ಎಂ ಪಿ ಪ್ರಕಾಶ್ ಮಾಡಿ ಸಾರ್ I leave it to you

ಅಧ್ಯಕ್ಷರು ತಾವೇನು ಮೂರ್ತಿ answer ಮಾಡುವುದಿಲ್ಲವೇ? ಇನ್ನೇನು ಐದು ನಿಮಿಷದಲ್ಲಿ ಅವರು ಉತ್ತರ ಮುಗಿಸಿಬಿಡುತ್ತಾರೆ ಮಧ್ಯಾಹ್ನ ಎಂದು ಹೇಳಿಕೊಂಡು ಹೋಗಿ ಮತ್ತೆ ಮತ್ತೆ ಅದನ್ನೇ ಎತ್ತಿ ಕೊಳ್ಳುವುದಕ್ಕಾಗುವುದಿಲ್ಲ ಅವರು ಉತ್ತರ ಕೊಟ್ಟುಬಿಡಲಿ ಇಲ್ಲದಿದ್ದರೆ ಏನಾಗುತ್ತದೆ ಇಡೀ ದಿವಸ ಹೀಗೆ ಆಗಿಬಿಡುತ್ತದೆ, ಬೇರೆ ಬೇರೆ ವಿಷಯಗಳನ್ನು ಎತ್ತಿಕೊಳ್ಳುವುದಕ್ಕಾಗುವುದಿಲ್ಲ ವಂದನಾ ನಿರ್ಣಯ ಎತ್ತಿಕೊಳ್ಳಬೇಕು

ಶ್ರೀ ಕೆ ಆರ್ ರಮೇಶ್ ಕುಮಾರ್ Abrupt ಆಗಿ ಬೇಡ We have to rely on the books ನಾವೆಲ್ಲ ಕೋಟ್ ಮಾಡಬೇಕಾಗುತ್ತದೆ

ಅಧ್ಯಕ್ಷರು ಒಪ್ಪಿದೆ ಸ್ವಾಮಿ, ಆದರೆ ಇಷ್ಟು ದಿವಸವಾದರೂ ವಂದನಾ ನಿರ್ಣಯ ಇನ್ನು ಎತ್ತಿಕೊಳ್ಳಲಿಲ್ಲ ಅದಕ್ಕೆ ಇದನ್ನು ಮುಗಿಸಿ ಬಿಟ್ಟರೆ ಮಧ್ಯಾಹ್ನ ಆ ವಿಷಯ ಎತ್ತಿಕೊಳ್ಳಬಹುದು

ಶ್ರೀ ಕೆ ಆರ್ ರಮೇಶ್ ಕುಮಾರ್ ಪ್ರಸ್ತಾಪ ಮಾಡಬೇಕೆನ್ನುವ ಚಪಲಕ್ಕೆ ಮಾಡಿಲ್ಲ ಅವರು ಹೇಳಿರತಕ್ಕಂಥದ್ದರಲ್ಲಿನ ಕೆಲವು ಲೋಪದೋಷಗಳನ್ನು ಪುನಃ ನಾವು ಹೇಳ ಬೇಕಾಗುತ್ತದೆ ಅದಕ್ಕೆ ಸಮಯ ಬೇಕಾಗುತ್ತದೆ Adjourn ಮಾಡಿ ಊಟ ಮಾಡಿಕೊಂಡು ಬಂದು ಬಿಡೋಣ ತಮಗೆ ಅನುಕೂಲವಾಗುತ್ತದೆ

ಅಧ್ಯಕ್ಷರು ಇದೇ ರೀತಿ ಈ ವಿಚಾರ ಇಡೀ ದಿನವಾದರೆ ಹೇಗೆ?

ಶ್ರೀ ಎನ್ ಧರ್ಮಸಿಂಗ್ ಪರಿಷತ್ತಿನಲ್ಲಿ ನಲವತ್ತು ಮಂದಿಗೆ ಸಸ್‌ಪೆಂಡ್ ಮಾಡಿದ್ದಾರೆ ಮಾಡತಕ್ಕಂಥ ಅಧಿಕಾರವಿಲ್ಲ ಅದರ ಬಗ್ಗೆ ಚರ್ಚೆ ಆಗಬೇಕಾಗುತ್ತದೆ ಹೀಗೆ ಬಿಟ್ಟರೆ ಹೇಗೆ?

ಅಧ್ಯಕ್ಷರು ಚರ್ಚೆಯಾಗಬೇಕು ಸರಿ ಸ್ವಾಮಿ, ಅವರು ಉತ್ತರ ಕೊಡುತ್ತಿದ್ದಾರೆ, ಅದು ಉತ್ತರ ಮುಗಿದು ಹೋದರೆ ಮುಗಿಯಿತು

ಶ್ರೀ ಎನ್ ಧರ್ಮಸಿಂಗ್ ಇಲ್ಲ ಇಲ್ಲ ನಾವು ಚರ್ಚೆಯಲ್ಲಿ ಭಾಗವಹಿಸಬೇಕು

ಅಧ್ಯಕ್ಷರು ಚರ್ಚೆ ಮಾಡುವುದಕ್ಕಾಗುವುದಿಲ್ಲ, ಇದು ಚರ್ಚೆಯ ವಿಷಯವಲ್ಲ ಏಕೆಂದರೆ, ನೀವು ಎಲ್ಲಾ ನಿಮ್ಮ ಅಭಿಪ್ರಾಯಗಳನ್ನು ಹೇಳಿದಿರಿ, ನೀವು ಜಿರೋ ಅವರ್ ನಲ್ಲಿ ಪ್ರಸ್ತಾಪಿಸಿದ್ದೀರಿ ಅದಕ್ಕೆ ಅವರು ಉತ್ತರ ಹೇಳುತ್ತಿದ್ದಾರೆ ಅವರ ಉತ್ತರ ಮುಗಿದರೆ ಮತ್ತೆ ಚರ್ಚೆಗೆ ಅವಕಾಶ ಆಗುತ್ತೆ?

ಶ್ರೀ ಸಿದ್ದರಾಮಯ್ಯ ಚರ್ಚೆ ಮಾಡಬೇಕೆಂದು ಸರ್ಕಾರದ ಪರವಾಗಿ ಗೌರ್ನಮೆಂಟ್ ಒಪ್ಪಿಕೊಳ್ಳುತ್ತದೆ

ಅಧ್ಯಕ್ಷರು. no no ಏನು ಸ್ವಾಮಿ ಮತ್ತೆ ಚರ್ಚೆಯಾಗಬೇಕೆಂದು ತಾವು ಒಪ್ಪಿಕೊಳ್ಳುತ್ತೀರಾ?

ಶ್ರೀ ಎಂ ಪಿ ಪ್ರಕಾಶ್ ತಮ್ಮ ನಿರ್ದೇಶನದ ಮೇಲೆ ತೆಗೆದುಕೊಳ್ಳಬಹುದು

ಅಧ್ಯಕ್ಷರು ನೋಡಿ ಸಿದ್ದರಾಮಯ್ಯನವರೇ, ವಿರೋಧ ಪಕ್ಷದ ನಾಯಕರು ಜಿರೋ ಅವರ್ ನಲ್ಲಿ ಕಾವೇರಿ ವಿಷಯವಾದ' ಮೇಲೆ ಈ ವಿಷಯ ಪ್ರಸ್ತಾಪ ಮಾಡುತ್ತೇನೆಂದು ಎತ್ತಿದರು ಅವರು ಆಗಲೇ ಉತ್ತರ ಕೊಡಬೇಕಾಗಿತ್ತು, ಆನೇಕ ಜನ ಮಾತನಾಡಿದಿರಿ ಅವರು ಈಗ ಉತ್ತರ ಕೊಡುತ್ತಿದ್ದಾರೆ, ಈಗಾಗಲೇ ಅವರು ಉತ್ತರದ ಕೊನೆಯ ಹಂತದಲ್ಲಿದ್ದಾರೆ ಮತ್ತೆ ಇದರ ಬಗ್ಗೆ ಚರ್ಚೆಯಾಗಬೇಕೆಂದರೆ ಏನರ್ಥ?

ಶ್ರೀ ಸಿದ್ದರಾಮಯ್ಯ Constutitution dead-lock ಆಗಿ ಅಲ್ಲಿ ಮೇಲ್ಮನೆಯ ಸದಸ್ಯರನ್ನು ಸಸ್‌ಪೆಂಡ್ ಮಾಡಿದ್ದಾರೆ ಸ್ವಲ್ಪ ಅವರು ಬೆಳಕಲ್ಲಿ ಇರಬೇಕಾಗುತ್ತದೆ ಮೂಲಭೂತವಾಗಿ ಅವರಿಗೆ ಅಧಿಕಾರವೇ ಇಲ್ಲವೆಂದು ನಾವು ಪ್ರಶ್ನೆಯನ್ನು ಎತ್ತಿರಬೇಕಾದರೆ,

ಶ್ರೀ ಎಂ ಪಿ ಪ್ರಕಾಶ್ ಅಧಿಕಾರ ಇದೆ ಎನ್ನುವುದು ನಮ್ಮ ವಾದ

ಶ್ರೀ ಸಿದ್ದರಾಮಯ್ಯ ಅವರಿಗೆ locus standi ಇಲ್ಲ, ಅವರಿಗೆ ಅಧಿಕಾರನೇ ಇಲ್ಲ ನಾಮಿನೇಟ್ ಮಾಡುವುದಕ್ಕೆ ಬರುವುದೇ ಇಲ್ಲ, ಅವರಿಗೆ ಸಸ್‌ಪೆಂಡ್ ಮಾಡುವುದಕ್ಕೆ ಯಾವ ಅಧಿಕಾರವು ಇಲ್ಲವೆಂದು ಹೇಳಿರುವಾಗ, ಇದರ ಮೇಲೆ ಅವರು ಬೆಳಕು ಚೆಲ್ಲಬೇಕಲ್ಲವೆ?

ಶ್ರೀ ಎಂ ಪಿ ಪ್ರಕಾಶ್ ಸ್ಪೀಕರ್‌ರವರು ಏನು ಹೇಳುತ್ತಾರೆ ಅದರಂತೆ ಹೋಗೋಣ

ಅಧ್ಯಕ್ಷರು ನಾನು ಹೇಳುತ್ತಿರುವುದು ಏನೆಂದರೆ, ಉತ್ತರದ ಕೊನೆಯ ಹಂತದಲ್ಲಿ ಇದ್ದೀರಿ ಉತ್ತರದ ಕೊನೆಯ ಹಂತದಲ್ಲಿ ಇದ್ದುಬಿಟ್ಟು ಸುಮ್ಮಸುಮ್ಮನೆ ಕುಳಿತುಕೊಂಡು ಬಿಟ್ಟರೆ ಹೇಗೆ? ಮತ್ತೆ ಇಡೀ ದಿವಸ ಇದೇ ಚರ್ಚೆಯಾದರೆ ಹೇಗೆ? ಈಗ ವಂದನಾ ನಿರ್ಣಯ, ಇಷ್ಟು ದಿವಸವಾದರೂ ಇನ್ನೂ ಮೂವ್ ಆಗಿಲ್ಲ ಇದೇ ರೀತಿಯಾದರೆ ಹೇಗೆ? ಅನೇಕ ಅರ್ಧ ಗಂಟೆಯ ಪ್ರಶ್ನೆಗಳು ಬಾಕಿ ಇವೆ

ಶ್ರೀ ಕೆ ಶ್ರೀನಿವಾಸ ಗೌಡ ಊಟವಾದ ಮೇಲೆ ಅವರು ಉತ್ತರ ಕೊಡುತ್ತಾರೆ ಬಿಡಿ

ಅಧ್ಯಕ್ಷರು. ಗೌಡ್ರೇ ಸುಮ್ಮನೆ ಕುಳಿತುಕೊಳ್ಳಿ ಸುಮ್ಮನೆ ಏಕೆ ಎದ್ದು ನಿಂತಿಕೊಳ್ಳುತ್ತೀರಿ? ಈಗ ಅರ್ಧಗಂಟೆಗಳ ಕಾಲ ಚರ್ಚೆ ಮಾಡುವಂಥ ಪ್ರಶ್ನೆಗಳಿವೆ, ಅವುಗಳು ಬರಲಿಲ್ಲ ಇನ್ನೊಂದು law and order 69ಕ್ಕೆ ಕನವರ್ಟ್ ಮಾಡಿರುವುದು ಅದು ಬರಲಿಲ್ಲ ಯಾವುದೂ ಬರಲಿಲ್ಲ ಯಾವದೋ ಒಂದು ವಿಚಾರಕ್ಕೆ ಇಡೀ ದಿವಸ ಕಾಲ ಕಳೆದರೆ ಏನು ಮಾಡುವುದು?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ ನಮ್ಮ ವಿಷಯ ಬರಲಿಲ್ಲ

ಅಧ್ಯಕ್ಷರು ಸ್ವಾಮಿ ತಾವು ಕೇಳಿದಿರಿ ಅಷ್ಟರಲ್ಲಿ ನಿಮ್ಮ ನಾಯಕರು ನಿಂತು ಕೊಂಡು ಬೇರೆ ಬೇರೆ ವಿಷಯಗಳನ್ನು ಎತ್ತಿದರು ಈಗ ಗೌರ್ನಮೆಂಟ್ ಏನು ಹೇಳುತ್ತದೆ? ನೀವು ಚರ್ಚೆಗೆ consider ಮಾಡಿಕೊಂಡರೆ ನನ್ನದೇನೂ ಅಭ್ಯಂತರವಿಲ್ಲ

ಶ್ರೀ ಎಂ ಪಿ ಪ್ರಕಾಶ್ ಮಾನ್ಯ ಸಭಾಧ್ಯಕ್ಷರು ಹೇಳಿರುವುದರಿಂದ ನಾನು ಉತ್ತರ ಕೊಡುತ್ತೇನೆ I will go by the directions of the Chair

ಅಧ್ಯಕ್ಷರು ಈಗ ಉತ್ತರ ಕೊಟ್ಟುಬಿಡಿ ಮತ್ತೆ ಚರ್ಚೆಗೆ ಹೋಗುವುದು ಬೇಡ ಮತ್ತೆ ಚರ್ಚೆಗೆ ಅವಕಾಶ ಕೊಡುವುದಕ್ಕಾಗುವುದಿಲ್ಲ

ಶ್ರೀ ಮಲ್ಲಿಕಾರ್ಜುನ ಎಂ ಖರ್ಗೆ ಅವರು 5-6 ಪುಸ್ತಕಗಳನ್ನು ತೆಗೆದುಕೊಂಡು ಬಂದಿದ್ದಾರೆ

P2
20

ಶ್ರೀ ಸಿದ್ದರಾಮಯ್ಯ ನಾವು ಹೋಗಿ 5–6 ಪುಸ್ತಕಗಳನ್ನು ತರಬೇಕಾಗಿದೆ

ಅಧ್ಯಕ್ಷರು ನೋಡಿ ಮತ್ತೆ ಚರ್ಚೆಗೆ ಅವಕಾಶವಿಲ್ಲ Exhaust ಆಗಿ ನೀವೆಲ್ಲರೂ ಮಾತನಾಡಿದ್ದೀರಿ ಅದಕ್ಕೆ ಸರ್ಕಾರದಿಂದ ಏನು ಉತ್ತರ ಕೊಡುತ್ತಾರೋ ಕೊಡಲಿ ಮತ್ತೆ ಚರ್ಚೆಗೆ ಅವಕಾಶ ಕೊಡುವುದಕ್ಕಾಗುವುದಿಲ್ಲ

ಶ್ರೀ ಕೆ ಆರ್ ರಮೇಶ್ ಕುಮಾರ್ ಸಾರ್ ಅವರು ರಾಜ್ಯದ ಬಜೆಟ್ ಮಂಡಿಸಬೇಕು, ಅವರ ಆರೋಗ್ಯದ ಕಡೆಗೆ ಗಮನ ಕೊಡಿ ಸಾರ್ ಇಷ್ಟು ನಿರ್ದಾಕ್ಷಣ್ಯವಾಗಿರಬಾರದು

ಡಾ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ ಮಾನ್ಯ ಸಚಿವರು ನಿಮ್ಮ ಅಭಿಪ್ರಾಯದ ಪ್ರಕಾರ ಉತ್ತರ ಕೊಡುತ್ತೇವೆಂದು ಹೇಳುತ್ತಿದ್ದಾರೆ ಮಾನ್ಯ ಸಚಿವರು ನಿಮ್ಮ ಡೈರೆಕ್ಷನ್ ಕೇಳುತ್ತಿದ್ದಾರೆ

ಅಧ್ಯಕ್ಷರು ಉತ್ತರ ಕೊಟ್ಟು ಬಿಡಿ, ಮತ್ತೆ ಚರ್ಚೆಗೆ ಅವಕಾಶ ಕೊಡುವುದಕ್ಕಾಗುವುದಿಲ್ಲ

ಶ್ರೀ ಎಂ ಪಿ ಪ್ರಕಾಶ್ ಸಂವಿದಾನದ 184 (2) ರ ಕೆಳಗೆ

"During the absence of the Chairman from any sitting of the Council the Deputy Chairman or, if he is also absent, such person as may be determined by the rules of procedure of the Council, or, if no such person is present, such other person as may be determined by the Council, shall act as Chairman"

ಶ್ರೀ ಮಲ್ಲಿಕಾರ್ಜುನ ಎಂ ಖರ್ಗೆ ಅವರು ಹೇಳಿದ ಮೇಲೆ ನಾವು ಹೇಳಬೇಕಾಗುತ್ತದೆ

ಅಧ್ಯಕ್ಷರು ಅವರು ಮುಗಿಸುತ್ತಾರೆ

ಶ್ರೀ ಎನ್ ಧರ್ಮಸಿಂಗ್ ಮಾನ್ಯ ಪ್ರಕಾಶ್ ರವರೆ ಈಗ 2–30 ಆಗಿದೆ

ಶ್ರೀ ಎಂ ಪಿ ಪ್ರಕಾಶ್ ಸ್ಪೀಕರ್‌ರವರಿಗೆ ಕನ್‌ವಿನ್ಸ್ ಮಾಡಿ ಸಾರ್ I will go by his direction

ಶ್ರೀ ಎನ್ ಧರ್ಮಸಿಂಗ್. ನೀವು ಹೇಳಿದರೆ ಅವರು ಒಪ್ಪುತ್ತಾರೆ

ಡಾ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್. ಸಾರ್ ನಿಮ್ಮ ಡೈರೆಕ್ಷನ್ ಕೇಳುತ್ತಿದ್ದಾರೆ

ಅಧ್ಯಕ್ಷರು ನೋಡಿ ಏನಾಗಿದೆ ಎಂದರೆ, ಈಗ ಎರಡು ಗಂಟೆಯಾದ ಮೇಲೆ ನೀವೆಲ್ಲರೂ ಮಾತನಾಡಬೇಕೆಂದು ಹೇಳಿದಿರಿ, ಅದರಂತೆ ಎಲ್ಲರಿಗೂ ಅವಕಾಶ ಕೊಟ್ಟಿದ್ದೇನೆ ಇದಾದ ನಂತರ ಅವರು ಉತ್ತರ ಕೊಡುತ್ತಿದ್ದಾರೆ ಉತ್ತರ ಬಹಳಷ್ಟು ಆಗಲೇ ಹೇಳಿದ್ದಾರೆ ಈಗ ಕೊನೆಯ ಹಂತದಲ್ಲಿ ಇದ್ದಾರೆ

ಶ್ರೀ ಸಿದ್ದರಾಮಯ್ಯ ಮಾನ್ಯ ಅಧ್ಯಕ್ಷರೆ, ಇಲ್ಲಿ Constitutional dead lock ಆಗಿದೆ ಅವರು ಇದರ ಬಗ್ಗೆ ಎಲ್ಲಾ ಮಸ್ತಕಗಳನ್ನು ರೆಫರ್ ಮಾಡುತ್ತಿದ್ದಾರೆ ಅವರು ಹೇಳಿದ ಮೇಲೆ ಅಡ್ಜರ್ನ್ ಮಾಡಿ ನೀವು ಹೋಗುವುದಕ್ಕೆ ಆಗುತ್ತದೆಯೇ? ಅವರು ಉತ್ತರ ಕೊಟ್ಟಮೇಲೆ ನಾವು ಕ್ಲಾರಿಫಿಕೇಶನ್ ಕೇಳಬೇಕಲ್ಲವೇ? ಲೀಗಲ್ ಪೊಜಿಷನ್ ಏನೆಂಬುದನ್ನು ನಾವು ಸಹ ಹೇಳಬೇಕಲ್ಲವೇ?

ಅಧ್ಯಕ್ಷರು ನಿಯಾಮವಳಿಗಳನ್ನು ನೀವು ಕೋಟ್ ಮಾಡಿದ್ದೀರಿ ಆದ್ದರಿಂದ ಅವರೂ ಸಹ ಕೋಟ್ ಮಾಡುತ್ತಿದ್ದಾರೆ ಅಷ್ಟೆ ತಾನೆ ಆದ್ದರಿಂದ ಇದರಲ್ಲಿ ಇನೇನು ಇದೆ?

ಶ್ರೀ ಸಿದ್ದರಾಮಯ್ಯ ನಾವೂ ಕೂಡ ನಮ್ಮ ವ್ಯೂ ಪಾಯಿಂಟ್ ಅನ್ನು ಹೇಳಬೇಕಾಗುತ್ತದೆ ಮತ್ತೆ ಲೀಗಲ್ ಪೊಜಿಷನ್ ಅನ್ನು ಸಹ ಹೇಳಬೇಕಾಗುತ್ತದೆ

ಅಧ್ಯಕ್ಷರು ಈಗಾಗಲೇ ಇವೆಲ್ಲವನ್ನು ಹೇಳಿದ್ದೀರಲ್ಲವೆ?

ಶ್ರೀ ಸಿದ್ದರಾಮಯ್ಯ We need some time ಅದಕ್ಕೋಸ್ಕರ ಈಗ ಅಡ್ಜರ್ನ್ ಮಾಡಿ, ಮನ ಅರ್ಧಗಂಟೆ ಇದರ ಬಗ್ಗೆ ಚರ್ಚೆ ಮಾಡೋಣ -

ಅಧ್ಯಕ್ಷರು ಒಂದು ವಿಷಯವನ್ನು ನಾನು ಸ್ಪಷ್ಟವಾಗಿ ಹೇಳುವುದಕ್ಕೆ ಬಯಸುತ್ತೇನೆ ಅದೇನೆಂದರೆ, ಈಗಾಗಲೇ 2 30 ಗಂಟೆ ಆಯಿತೆಂದು ತಾವು ಹೇಳುತ್ತಿದ್ದೀರಿ ಆದ್ದರಿಂದ ನಾನು ಹೇಳುವುದೇನೆಂದರೆ, ಮಧ್ಯಾಹ್ನ ಅವರು ಉತ್ತರ ಕೊಡಬೇಕೇ ವಿನಃ ಮತ್ತೆ ಚರ್ಚೆಗೆ ಅವಕಾಶ ಕೊಡುವುದಿಲ್ಲವೆಂದು ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ ಮಾನ್ಯ ಅಧ್ಯಕ್ಷರೆ, ಅವರು ಕೆಲವು ಮಸ್ತಕಗಳನ್ನು ಕೋಟ್ ಮಾಡಿದ್ದಾರೆ ಆದ್ದರಿಂದ ನಾವು ಕೂಡ ಕೆಲವು ಪತ್ರಗಳನ್ನು ಮತ್ತು ರಾಜ್ಯಸಭಾದಿಂದ ಕರೆಸ್ಪಾಂಡೆನ್ಸ್ ಮಾಡಿರತಕ್ಕಂಥ ವಿಷಯದ ಬಗ್ಗೆ ನಾವೂ ಕೂಡ ಹೇಳಲೇಬೇಕಾಗುತ್ತದೆ

ಶ್ರೀ ಡಿ ಕೆ ಶಿವಕುಮಾರ್ ನೀವು ಹೇಳಿದ ಹಾಗೆ ನಾವು ಕೇಳಲೇಬೇಕೆ?

ಅಧ್ಯಕ್ಷರು ಮಾನ್ಯ ಶಿವಕುಮಾರ್‌ರವರೆ, ಸ್ಪೀಕರ್‌ರವರು ಹೇಳಿದ ಹಾಗೆ ಕೇಳಬೇಕೆಂದು ಇದೆ ನೀವು ಹೇಳಿದ ಹಾಗೆ ನಾವು ಕೇಳುವುದಕ್ಕೆ ಇಲ್ಲ ತಾವು ದಯವಿಟ್ಟು ಕುಳಿತುಕೊಳ್ಳಿ

ಶ್ರೀ ಡಿ ಕೆ ಶಿವಕುಮಾರ್ ಹಾಗಾದರೆ, ಚರ್ಚೆ ಬೇಡವೇ?

ಅಧ್ಯಕ್ಷರು ಶೂನ್ಯವೇಳೆಯಲ್ಲಿ ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ನಾನು ಅವಕಾಶ ಕೊಟ್ಟಿದ್ದೇನೆ ಇದಕ್ಕೆ ಅವರು ಉತ್ತರ ಹೇಳುತ್ತಿದ್ದಾರೆ ಮತ್ತೆ ಮತ್ತೆ ಇದೇ ರೀತಿ ಮಾಡತಕ್ಕಂಥದು ಸರಿಯಲ್ಲ ಒಂದೇ ವಿಷಯವನ್ನು ಇಡೀ ದಿವಸ ಚರ್ಚೆ ಮಾಡುವುದೇ? ಈ ವಿಚಾರದ ಬಗ್ಗೆ ನೀವೆಲ್ಲರೂ ಕೂಡ ಮಾತನಾಡಿದ್ದೀರಿ ತಾವು ಮಾತನಾಡತಕ್ಕಂಥ ಸಂದರ್ಭದಲ್ಲಿ ಇನ್ನೂ ಯಾವುದಾದರು ವಿಷಯವಿದ್ದರೆ ಆಗಲೇ ತಾವುಗಳು ಕೋಟ್ ಮಾಡಿದ್ದರೆ ಮುಗಿದು ಹೋಗುತ್ತಿತ್ತು ಆದ್ದರಿಂದ, ನೀವು ಈ ರೀತಿ ಮಾಡುವುದು ನನಗೆ ಅರ್ಥವಾಗುತ್ತಿಲ್ಲ ಮಧ್ಯಾಹ್ನ ನಾನು ಉತ್ತರ ಕೊಡುವುದಕ್ಕೆ ಅವಕಾಶ ಕೊಡುತ್ತೇನೆ ವಿನ ಮತ್ತೆ ಚರ್ಚೆ ಮಾಡುವುದಕ್ಕೆ ಖಂಡಿತ ಅವಕಾಶ ಕೊಡುವುದಿಲ್ಲ

ಡಾ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ ಮಾನ್ಯ ಎಂ ಪಿ ಪ್ರಕಾಶ್‌ರವರು ನಿಮ್ಮ ಅಭಿಪ್ರಾಯವನ್ನು ಕೇಳುತ್ತಿದ್ದಾರೆ ಆದ್ದರಿಂದ, ನಿಮ್ಮ ಅಭಿಪ್ರಾಯವನ್ನಾದರು ಹೇಳಿ

ಅಧ್ಯಕ್ಷರು ಒಂದೇ ವಿಷಯದ ಬಗ್ಗೆ ಚರ್ಚೆ ಮಾಡಿದರೆ ಸಾಕೇ? ಅವರ ಉತ್ತರಕ್ಕೆ ಮಾತ್ರ ನಾನು ಮಧ್ಯಾಹ್ನ ಅವಕಾಶ ಕೊಡುತ್ತೇನೆ

ಡಾ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ ಇದರ ಬಗ್ಗೆ ಸರ್ಕಾರ ಉತ್ತರ ಕೊಡುತ್ತದೆ ಅಲ್ಲಿಗೆ ಈ ವಿಷಯ ಮುಗಿಯುತ್ತದೆ

ಅಧ್ಯಕ್ಷರು ಆಯಿತು ಈಗ ಸದನವನ್ನು 3 30 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ

(ಸದನವು ಮಧ್ಯಾಹ್ನ 2 32 ಗಂಟೆಗೆ ಮುಕ್ತಾಯಗೊಂಡು ಮತ್ತೆ 3 30 ಗಂಟೆಗೆ ಸೇರುವಂತೆ ನಿಶ್ಚಯಿಸಿತು)

(ಸದನವು ಮಧ್ಯಾಹ್ನ 3 56 ಗಂಟೆಗೆ ಪ್ರಾರಂಭವಾಯಿತು)

(ಸನ್ಮಾನ್ಯ ಸಭಾಧ್ಯಕ್ಷರು ಅಧ್ಯಕ್ಷ ಪೀಠದಲ್ಲಿ ಉಪಸ್ಥಿತರಿದ್ದರು)

ವಿಷಯ (ಇ) ವಿಧಾನ ಪರಿಷತ್ತಿನ ಸಭಾಪತಿಯವರ ಚುನಾವಣೆ ಬಗ್ಗೆ

(ಮುಂದುವರಿದ ಚರ್ಚೆ)

ಶ್ರೀ ಜಿ ವಿ ಶ್ರೀರಾಮರೆಡ್ಡಿ ನಿಯಮ 69ರಡಿ ನಾವು ಕೊಟ್ಟಿರುವ ವಿಷಯದ ಚರ್ಚೆಗೆ ಅವಕಾಶ ಕೊಡುತ್ತಿರುವಿರಾ?

ಅಧ್ಯಕ್ಷರು ರಿಪ್ಲೈ ಆಗಬೇಕಲ್ಲವೇ?

